ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಡಿಸೆಂಬರ್-೨೦೧೦ ಸಂಚಿಕೆ-೫



ಒಬಾಮ ಭೇಟಿ ಸ್ವದೇಶಿ ವಿಚಾರದ ಅಪಹರಣವೇ ?

ಜನಪದ ವಿಚಾರದಲ್ಲಿ

ಡಿಸೆಂಬರ್ - ೨೦೧೦

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಡಿಸೆಂಬರ್ - ೨೦೧೦
ಸಂಪುಟ - ೧೧
ಸಂಚಿಕೆ - ೫

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

ಸಂಕುಚಿತ ನಡೆನುಡಿ ನಾಗರಿಕನಿಗೆ ಹೊಲ್ಲ

“ವೇದವ್ಯಾಸ ಹೋಮರು ವಾಲ್ಮೀಕಿ
ಷೇಕ್ಸ್‌ಪಿಯರು
ಪ್ಲೇಟೊ ಶಂಕರ ಡಾಂಟೆ ಟಾಲ್‌ಸ್ಟಾಯರ
ಹೊನ್ನು ಹೊತ್ತಗೆಗಳ
ಪಠಿಸಿ, ವ್ಯಕ್ತಿತ್ವವನು ಎತ್ತರಗೊಳಿಸಿಕೊಳ್ಳಿ!”
ಹೀಗೆಂದು ಉದಾರ ವಚನ ಆಡುವರು
ನಾಗರಿಕ ಜನರೆಲ್ಲ ಸರ್ವಸಾಮಾನ್ಯವಾಗಿ;
ಪ್ರಪಂಚದ ಪ್ರಕೃತಿಯ ಅಗಾಧ ವೈಭವಗಳನ್ನು
ಕುರಿತು ಅವರಿಗೆ ಅಸ್ವಾರ್ಥಪರತೆ; ತಾವು
ಅನುಭವಿಸುವವರು; ನೀವೂ ಅನುಭವಿಸಿ
ಎನ್ನುತ್ತ ಬಲಾತ್ಕರಿಸುವರು ಇತರರನ್ನ.
ಕವಿ ಕಾವ್ಯ ಬರೆಯುವುದೇಕೆ, ಗಾಯಕ
ಪ್ರವೀಣ ಸಂಗೀತ ಹಾಡುವುದೇಕೆ? ತನಗಲ್ಲ,
ಇತರಿಗಾಗಿ.
ಸ್ವಭಾವ ಧಾರಾಳಿ ಮನುಷ್ಯ ಎಂದರೆ
ಹುಸಿಯೆ?
ಆದರೆ, ನೋಡು ರಂಗೇಶ,
ಮನುಷ್ಯನ
ವಿಲೋಮ ವರ್ತನೆಯ ಅವಮಾನವನ್ನ!
ಅಗಾಧ ಆಸ್ತಿಗಳನ್ನು ಕುರಿತು ಅವನಿಗೆ
ಧಾರಾಳ. ಹಣ ವಸನ ಅಲಂಕಾರ ಯಂತ್ರ
ಸಾಮಗ್ರಿ ಅಧಿಕಾರ ರಾಷ್ಟ್ರ ಮುಂತಾದ
ಚಿಕ್ಕ ಆಸ್ತಿಗಳ ಕುರಿತು ಅವನಿಗೆ
ಅತ್ಯಂತ ಸ್ವಾರ್ಥ; ತನಗೊಬ್ಬನಿಗೆ ಇರಲಿ
ಇತರರಿಗೆ ಕೂಡದೆಂಬ ಹೀನ ಮನೋರಥ:
ಲಘುಮಾಡಿಕೊಳ್ಳುವ ತನ್ನನು ತಾನೆ.
ಈಪರಿಯ ಸಂಕುಚಿತ ನಡೆನುಡಿ
ನಾಗರಿಕ ನರನಿಗೆ ನಿಜವಾಗಿ ಹೊಲ್ಲ.

- ಎಸ್.ವಿ. ರಂಗಣ್ಣ

ವಿಚಾರ ದೀಪ್ತಿ

'ಜನರು ಇರುವಲ್ಲೇ ಉದ್ಯೋಗಗಳು ಹೋಗಬೇಕೇ ವಿನಾ, ಉದ್ಯೋಗ ಇರುವಲ್ಲಿ ಜನರು ಮುಗಿಬೀಳುವಂತೆ ಆಗಬಾರದು' ಎಂದು ಐದು ವರ್ಷಗಳ ಹಿಂದೆ ಇದೇ ಪ್ರಧಾನಿ ಹೇಳಿದ್ದರು. ಅಮೇರಿಕಾದ ತಾಳಕ್ಕೆ ಕುಣಿಯುತ್ತ ಕುಣಿಯುತ್ತ ಅವರ ಪೇಟ ಹಾಗೇ ಇದೆ. ಪ್ಲೇಟ್ ಮಾತ್ರ ಬದಲಾಗಿದೆ. 'ಹೆಚ್ಚು ಹೆಚ್ಚು ಜನರನ್ನು ಕೃಷಿರಂಗದಿಂದ ಹೊರಕ್ಕೆತ್ತಿ ಈಚೆತಂದರೆ ಮಾತ್ರ ದಾರಿದ್ರ್ಯ ಕೂಪದಿಂದ ನಾವು ತಲೆಯೆತ್ತಲು ಸಾಧ್ಯವಾದೀತು' ಹೀಗೆಂದು ನಮ್ಮ ಪ್ರಧಾನಿ ಡಾ.ಸಿಂಗ್ ಈಚೆಗೆ ಹೇಳಿದರು. ದಿಲ್ಲಿಯ ಕೆಲವು ಪ್ರಭಾವೀ ಪತ್ರಕರ್ತರನ್ನು ತಮ್ಮ ನಿವಾಸಕ್ಕೆ ಕರೆಸಿಕೊಂಡು ಅದೂ ಇದೂ ಮಾತುಕತೆಗಳ ಮಧ್ಯೆ ಮೆಲ್ಲಗೆ ಕಿವಿಯಲ್ಲಿ ಉಸುರಿದ ಹಾಗೆ ಈ ಮಾತನ್ನು ಹೇಳಿದರು. ಹೇಳಲೊ ಬೇಡವೊ ಎಂಬಂತೆ ಕೃಷಿರಂಗವನ್ನು ಬಲಪಡಿಸುವ ಮಾತನ್ನು ಅವರು ಹೇಳಿಲಿಲ್ಲ ಅಥವಾ ಹಳ್ಳಿಗಳಲ್ಲಿ ಉದ್ಯೋಗ ಅವಕಾಶಗಳನ್ನು ಹೆಚ್ಚಿಸುವ ಬಗ್ಗೆ ಅವರು ಹೇಳಲಿಲ್ಲ. ಬದಲಿಗೆ ಅಲ್ಲಿದ್ದವರನ್ನು ಈಚೆ ಸಾಗಿಸಿ ತರುವ ಮಾತನ್ನು ಹೇಳಿದರು. ಅದು ಈಚಿನ ಧೋರಣೆ ಹಳ್ಳಿಗಳಲ್ಲಿ ಅಲ್ಲಲ್ಲಿ ಚದುರಿತಂತೆ ಜನಸ್ತೋಮ ಹಂಚಿ ಹೋಗಿದ್ದರೆ ರಾಷ್ಟ್ರದ ಅಭಿವೃದ್ಧಿ ನಿಧಾನವಾಗುತ್ತದೆ. ಜನರೆಲ್ಲ ಒಟ್ಟೊಟ್ಟಾಗಿ, ಒತ್ತೊತ್ತಾಗಿ ಇದ್ದರೆ ಮಾತ್ರ ದೇಶವನ್ನು ತ್ವರಿತವಾಗಿ, ದಕ್ಷತೆಯಿಂದ ಮುನ್ನಡೆಸಲು ಸಾಧ್ಯ ಎಂಬ ಮಾತನ್ನು ಈಗೀಗ ಅರ್ಥತಜ್ಞರು ನಮ್ಮ ಮತ್ಸದ್ದಿಗಳ ಕಿವಿಗೆ ತುಂಬುತ್ತಿದ್ದಾರೆ. ಅದು ಹೌದೆಂದೇ ಅನ್ನಿಸುವಂಥ ನಿದರ್ಶನಗಳನ್ನು ನೀಡುತ್ತಾರೆ ನೋಡಿ. ಒಂದು ಸಾವಿರ ಕುಟುಂಬಗಳಿಗೆ ಶುದ್ಧ ನೀರನ್ನು ಒದಗಿಸ ಬೇಕೆಂದು ಸರಕಾರ ಬಯಸಿತೆಂದು ಇಟ್ಟುಕೊಳ್ಳಿ. ಆ ಸಾವಿರ ಜನರು ನಗರಗಳಲ್ಲಿ ಒಟ್ಟೊಟ್ಟಾಗಿ ವಾಸಿಸಿದರೆ ನೀರನ್ನು ಒದಗಿಸುವುದು ಸುಲಭ. ಅಕ್ಕಪಕ್ಕದ ನಾಲ್ಕೇ ನಾಲ್ಕು ಅಪಾರ್ಟ್‌ಮೆಂಟ್‌ಗಳಲ್ಲಿ ವಾಸಿಸುತ್ತಿದ್ದರೆ ಇನ್ನೂ ಸುಲಭ. ಆರಿಂಚು ವ್ಯಾಸದ ಒಂದು ಪೈಪನ್ನು ಸರಸರ ಜೋಡಿಸಿ ನೀರಿನ ಸಂಪರ್ಕ ಕಲ್ಪಿಸಬಹುದು. ಆದರೆ ದೂರ ದೂರದ ಐದು ಹಳ್ಳಿಗಳಿಗೆ ಅಷ್ಟೇ ನೀರಿನ ಸೌಲಭ್ಯವನ್ನು ಒದಗಿಸಬೇಕೆಂದರೆ ಎಷ್ಟೆಲ್ಲ ನೆಲವನ್ನು ಅಗೆಯಬೇಕು ಎಷ್ಟೊಂದು ಬಾರಿ ಎಂಜಿನಿಯರ್‌ಗಳ ಜೀಪುಗಳು ಓಡಾಡಬೇಕು. ದಟ್ಟ ಜನವಸತಿ ಇದ್ದಲ್ಲಿ ಸುಖ ಜೀವನಕ್ಕೆ ಬೇಕಾದ ಎಲ್ಲ ಸೌಕರ್ಯ ಒದಗಿಸಬಹುದು. ನೀರು, ವಿದ್ಯುತ್, ಮಾಹಿತಿ-ಮನರಂಜನೆಯ ಸಂಪರ್ಕ ಸಾಧನ ಎಲ್ಲವನ್ನೂ ನಗರದಲ್ಲಿ ಕಡಿಮೆ ವೆಚ್ಚದಲ್ಲಿ ಒದಗಿಸಬಹುದು. ಅಂಗಡಿ, ಶಾಲೆ, ಆಸ್ಪತ್ರೆ, ದೇವಸ್ಥಾನ, ಉದ್ಯಾನ,

ವೃದ್ಧಾಶ್ರಮ, ಸಭಾಂಗಣ, ಬ್ಯಾಂಕು ಎಲ್ಲ ಅಲ್ಲಲ್ಲೇ ಇರುವುದರಿಂದ ನಡದೇ ಹೋಗಬಹುದು. ಇಲ್ಲವೇ ಸೈಕಲ್ ಮೇಲೆ ಹೋಗಬಹುದು. (ಚಿತಾಗಾರಕ್ಕೆ ಮಾತ್ರ ಬೇರೆಯವರ ಸಹಾಯ ಬೇಕು) ರಸ್ತೆ ನಿರ್ಮಾಣದ ವೆಚ್ಚವೂ ಕಡಿಮೆ, ಸಾಗಾಟದ ವೆಚ್ಚವೂ ಕಡಿಮೆ. ತ್ಯಾಜ್ಯದ್ರವ್ಯಗಳ ಸಂಗ್ರಹಣೆ, ಸಂಸ್ಕರಣೆ ಮಾಡುವ ವೆಚ್ಚವೂ ಕಡಿಮೆ. ಅವೆಲ್ಲವುಗಳ ಉಸ್ತುವಾರಿ ನೋಡಿಕೊಳ್ಳುವ ಸಿಬ್ಬಂದಿಯ ವೆಚ್ಚವೂ ಕಡಿಮೆ; ನಿಗಾ ಇಡುವುದೂ ಸುಲಭ. ಇವೆಲ್ಲವೂ ಹೌದೇ ಹೌದೆನ್ನುವಂತೆ ನಮ್ಮ ಜನನಾಯಕರಿಗೆ ಬಿಂಬಿಸಲೆಂದು ಅಮೆರಿಕದ ಅರ್ಥತಜ್ಞರು ಎಷ್ಟೆಲ್ಲ ಬಗೆಯ ಅಂಕಿಸಂಖ್ಯೆಗಳ ಸರ್ಕಸ್ ಮಾಡುತ್ತಾರೆ. ಹಳ್ಳಿ ಮತ್ತು ನಗರದ ವ್ಯಕ್ತಿಯ ತಲಾ ಕಾರ್ಬನ್ ವೆಚ್ಚವನ್ನು ಹೋಲಿಸಿ ತೋರಿಸುತ್ತಾರೆ. ನಗರವಾಸಿಗಳಿಗಿಂತ ಗ್ರಾಮವಾಸಿಗಳೇ ನಿಸರ್ಗದ ಮೇಲೆ ಹೆಚ್ಚಿನ ಹೊರೆ ಹೇರುತ್ತಾರೆ. ಭೂಮಿಯ ತಾಪಮಾನ ಹೆಚ್ಚಳಕ್ಕೆ ಕಾರಣರಾಗುತ್ತಾರೆ ಎಂದು ಲೆಕ್ಕಾಚಾರ ಮಾಡಿ ತೋರಿಸುತ್ತಾರೆ. ಹಳ್ಳಿಗಳನ್ನು ಖಾಲಿ ಮಾಡಿಸಿದ್ದರಿಂದಲೇ ಅಮೆರಿಕಾ ಇಂದು ಅಷ್ಟೆಲ್ಲ ಶ್ರೀಮಂತವಾಗಿದೆ ಎನ್ನುತ್ತಾರೆ.

– ನಾಗೇಶ ಹೆಗಡೆ

ಸಾಭಾರ : ಅಡಿಕೆ ಪತ್ರಿಕೆ

ಸನ್ಮಾನ್ಯರಿಂದ...

ನವೆಂಬರ್ ತಿಂಗಳ ಪತ್ರಿಕೆ ಎಂದಿನಂತೆ ಸಾಕಷ್ಟು ವಿಚಾರ ಬೋಧಕವಾಗಿದೆ. ಗ್ರಾಮ ಜೀವನ ಮರೆಯಲಾಗುವುದೇ ಎಂಬ ಲೇಖನ ನನ್ನಲ್ಲಿ ಕೊರೆಯುತ್ತಿದ್ದ ಹಂಬಲವನ್ನೇ ಹೊರಚೆಲ್ಲಿತು. ಅಂಥದೇ ಶಂಕೆ ಬಹುದಿನಗಳಿಂದ ನನ್ನನ್ನು ಕಾಡುತ್ತಿದೆ. ಸುತ್ತಲ ಸ್ಥಿತಿ, ನನ್ನದೇ ಅಸಹಾಯಕತೆ ನೋಡಿದರೆ ನಿರಾಶೆ ಮೂಡುತ್ತದೆ. ನಿಮ್ಮಂಥ ಸಾಧಕರನ್ನು ನೋಡಿದಾಗ ಮಾತ್ರ ಆಸೆ ಕೊನರುತ್ತದೆ. ನಿಮ್ಮಲ್ಲಿ ಗ್ರಂಥಾಲಯ ಇದೆ ಎಂದು ಗೊತ್ತಾಯಿತು. ನನ್ನಲ್ಲಿ ಅನೇಕ ಪುಸ್ತಕ ಇವೆ. ನಿಮ್ಮ ಭಂಡಾರಕ್ಕೆ ಸೇರಿಸಿಕೊಳ್ಳುವಿರಾದರೆ ಕೊಡುತ್ತೇನೆ. ದಯವಿಟ್ಟು ತಿಳಿಸಿ.

– ನೀಲತ್ತಹಳ್ಳಿ ಕಸ್ತೂರಿ, ಬೆಂಗಳೂರು

ಒಬಾಮಾ ಭೇಟಿ
ಸ್ವದೇಶಿ ವಿಚಾರದ ಅಪಹರಣವೇ?

- ಸುರೇಂದ್ರ ಕೌಲಗಿ

ಲಕ್ಷ್ಮಣ ರೇಖೆಯನ್ನು ದಾಟಿ ಹೊರ ಬಂದದ್ದಕ್ಕಾಗಿ ಸಜ್ಜನ ರೂಪದಲ್ಲಿಯ ರಾವಣ ಸೀತೆಯನ್ನು ಅಪಹಿರಿಸಿದ. "ಸ್ವರಾಜ್ಯ ನಮ್ಮ ಜನ್ಮ ಸಿದ್ಧ ಹಕ್ಕು" ಎಂಬ ರೇಖೆಯನ್ನು ದಾಟಿ ಹೊರಬಂದದ್ದಕ್ಕಾಗಿ ಭಾರತದ ಸ್ವದೇಶಿ ಸಿದ್ಧಾಂತವನ್ನು ಧೂರ್ತ ರಾಜನೀತಿಜ್ಞ ಒಬಾಮಾ ಅಪರಹಿಸಿದ! ದಿನವೊಂದಕ್ಕೆ ಇಪ್ಪತ್ತು ರೂಪಾಯಿ ಖರ್ಚುಮಾಡಲೂ ಸಾಧ್ಯವಿಲ್ಲದ ೧೦೦ ಕೋಟಿ ಬಡ ಭಾರತೀಯರಿರುವ ದೇಶದ ಸರ್ಕಾರದ ಮುಂದೆ ಹತ್ತು ಬಿಲಿಯನ್ ಡಾಲರ್ ಮೌಲ್ಯದ ವಾಣಿಜ್ಯ ವ್ಯವಹಾರದ ಸೇಬು ಹಣ್ಣು ತೋರಿಸಿ ರಾಷ್ಟ್ರಪಿತನ ಮಂತ್ರವಾಗಿದ್ದ ಸ್ವದೇಶಿ ವಿಚಾರಕ್ಕೆ ಭಾರತ ಅಂತಿಮವಾಗಿ ತಿಲಾಂಜಲಿ ಕೊಡುವಂತೆ ಮಾಡುವುದರಲ್ಲಿ ಜಯಶೀಲನಾದ. ಯಾವ ರೀತಿ ಒಂದು ಬಲವಾದ ಬಂಡೆ ಸುತ್ತಿಗೆಯ ಕೊನೆಯ ಪ್ರಹಾರಕ್ಕೆ ಸೀಳು ಬಿಡುವುದದೋ ಅದೇ ರೀತಿ ಭಾರತಕ್ಕೆ ಇದುವರೆಗೆ ಭೇಟಿ ನೀಡಿದ ಅಮೇರಿಕದ ಆರು ಅಧ್ಯಕ್ಷರ ಪ್ರತಿಯೊಂದು ಭೇಟಿಯ ಸಂದರ್ಭದಲ್ಲಿ ಮಾಡಿಕೊಳ್ಳಲಾಗಿದ್ದ ವಿವಿಧ ಬಗೆಯ ವಾಣಿಜ್ಯ ಹಾಗು ರಾಜಕೀಯ ಒಪ್ಪಂದಗಳ ಸುತ್ತಿಗೆಯ ಏಟಿಗೆ ಶಿಥಿಲವಾಗಿದ್ದ ಭಾರತದ ಸ್ವದೇಶಿ ಸಿದ್ಧಾಂತ, ಒಬಾಮಾರ ಭೇಟಿಯ ಸಂದರ್ಭದಲ್ಲಿ ಶಸ್ತ್ರಾಸ್ತ್ರಗಳ ಕೈಗಾರಿಕೆಗೇ ಉತ್ತೇಜನ ಕೊಡುವ ಹತ್ತು ಬಿಲಿಯನ್ ಡಾಲರ್ ಮೌಲ್ಯದ ವಾಣಿಜ್ಯ ವ್ಯಾಪಾರ ಒಪ್ಪಂದವು ಸ್ವದೇಶಿ ವಿಚಾರದ ಬಂಡೆಯನ್ನು ಸೀಳಿತು. ಬಂಡೆ ಪುನಃ ಅಖಂಡವಾಗಲಾರದು. ಅಂತೆಯೇ ಪುನಃ ಸ್ವದೇಶಿ ವಿಚಾರ ಭಾರತೀಯರದಾಗಲಾರದು. ರಾಷ್ಟ್ರಪಿತ ಗಾಂಧಿಯನ್ನು ಹೊಗುಳುತ್ತ, ಮಾತುಮಾತಿಗೆ ಗಾಂಧಿಯ ಪ್ರಭಾವವನ್ನು ತಿಳಿಸುತ್ತ ಅಹಿಂಸಾ ಸಿದ್ಧಾಂತದ ಹರಿಕಾರ ಭಾರತವನ್ನು ನೆರೆರಾಷ್ಟ್ರಗಳೊಂದಿಗೆ ಯುದ್ಧ ಮಾಡಲು ಸನ್ನದ್ಧವಾಗುವಂತೆ ಮಾಡಿದ್ದು ಎಂಥ ದುರ್ದೈವ. ಸ್ವತಂತ್ರ ಭಾರತ ಎಂದೂ ಲೋಕಹಿತ ಕಂಟಕವಾಗಲಾರದು ಎಂದು ಗಾಂಧೀ ಘೋಷಿಸಿದ್ದರು. ಆದರೆ ಒಬಾಮಾರ ಭೇಟಿ ಮತ್ತು ಅವರ ಭೇಟಿಯ ಸಂದರ್ಭದಲ್ಲಿ ಭಾರತ ಮಾಡಿಕೊಂಡ ಶಸ್ತ್ರಾಸ್ತ್ರಗಳ ಕುರಿತಾದ ಒಪ್ಪಂದಗಳು ಭಾರತದ ತಟಸ್ಥ ವಿದೇಶ ನೀತಿ ಅರ್ಥಕಳೆದುಕೊಳ್ಳುವಂತೆ ಮಾಡಿವೆ. ಭಾರತ ಉಪಖಂಡದಲ್ಲಷ್ಟೇ ಅಲ್ಲ ಇಡೀ ಏಶಿಯಾದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ಉಂಟುಮಾಡಿತು. ಒಬಾಮಾ ಬಂದದ್ದಾಯಿತು, ನೋಡಿದ್ದಾಯಿತು ಮತ್ತು ಗೆದ್ದದ್ದೂ ಆಯಿತು. ಈ ಮೂರು ಮಾತುಗಳಿಂದ ಒಬಾಮಾರ ಭಾರತದ ನಾಲ್ಕು ದಿನಗಳ ಭೇಟಿಯನ್ನು ವರ್ಣಿಸಬಹುದು. ದುಃಖದ ಸಂಗತಿಯೆಂದರೆ ದೇಶದ ಅರವತ್ತು ವರ್ಷಗಳ

ಸ್ವಾತಂತ್ರ್ಯ ಕ್ಷಣಾರ್ಧದಲ್ಲಿ ಮಂಗಮಾಯವಾಯಿತಲ್ಲ. ಸ್ವಾತಂತ್ರ್ಯದ ಈ ಅಪಹರಣ ಅಮೆರಿಕದ ಅಣುಬಾಂಬ್ ಬಲದಿಂದಲ್ಲ ಡಾಲರ್ ಬಲದಿಂದ! ದೇಶದಲ್ಲಿ ಜೀವನ ಎಂದಿನಂತೆಯೇ ಇದೆ. ಸ್ಥಾವರಗಳು ಭದ್ರವಾಗಿಯೇ ಇವೆ. ಆದರೆ ದೇಶದ ಆತ್ಮ ಮಾತ್ರ ಒಬಾಮಾರ ಜೆಟ್ ವಿಮಾನದೊಂದಿಗೆ ಪಶ್ಚಿಮಕ್ಕೆ ಹಾರಿಹೋಗಿದೆ. ಮೊದಲನೆ ಮಹಾಯುದ್ಧ ೧೯೧೮ರಲ್ಲೇನೋ ಮುಗಿಯಿತು. ಆ ಯುದ್ಧದಲ್ಲಿ ಅಪಾರ ಪ್ರಮಾಣದ ಸಾವುನೋವುಗಳಾದವು. ಆದ್ದರಿಂದ ಆ ಯುದ್ಧದ ಮುಕ್ತಾಯ ಭವಿಷ್ಯದಲ್ಲಿಯ ಯುದ್ಧಗಳ ಕೊನೆಯೆಂದೇ ಭಾವಿಸಲಾಗಿತ್ತು. ಆದರೆ ಒಬಾಮಾರ ಭೇಟಿಯ ಉದ್ದೇಶ್ಯ ಸಾಮ್ರಾಜ್ಯವಾದದೊಂದಿಗೆ ಸೈನ್ಯವಾದವನ್ನೂ ಸೇರಿಸಿಕೊಂಡಿದ್ದರಿಂದ ಮೊದಲನೆ ಮಹಾಯುದ್ಧದ ಪರಿಣಾಮದ ಬಗ್ಗೆ ತಿಳಿದುಕೊಳ್ಳಲಾಗಿದ್ದ ಯುದ್ಧ ಮುಕ್ತ ವಿಶ್ವವೆಂಬ ಆಶಯಕ್ಕೆ ಹೊಡೆತ ಕೊಟ್ಟಿದೆ. ಒಬಾಮಾರ ಭೇಟಿಯಿಂದ ಭಾರತವು ಪಾಕಿಸ್ತಾನ ಮತ್ತು ಚೀಣಾದ ಸ್ನೇಹವಲಯದಿಂದ ದೂರ ಉಳಿಯಬೇಕಾದ ಸ್ಥಿತಿ ಉಂಟಾಗಿದೆ. ಓರ್ವ ಅಂಕಣಕಾರ ಆಧುನಿಕ ಶಸ್ತ್ರಾಸ್ತ್ರಗಳನ್ನು ಮಾರುವುದರ ಮೂಲಕ ಬಲಾಢ್ಯ ದೇಶಗಳೆಂದು ಕರೆಯಲಾಗುವ ರಶಿಯಾ, ಇಂಗ್ಲೆಂಡ್, ಜರ್ಮನಿ, ಅಮೆರಿಕಾ ಮುಂತಾದ ದೇಶಗಳ ಮುಖ್ಯಸ್ಥರನ್ನು 'ಸಾವಿನ ವ್ಯಾಪಾರಿಗಳು' 'Merchants of Death' ಎಂದು ಕರೆದಿದ್ದಾನೆ. ಏಕೆಂದರೆ ಈ ದೇಶಗಳು ಸದಾ ಯುದ್ಧದ ಭೀತಿಯಲ್ಲೇ ಇವೆ. ಸದಾ ಹೊಸ-ಹೊಸ ತಂತ್ರಜ್ಞಾನಯುಕ್ತ ಶಸ್ತ್ರಾಸ್ತ್ರಗಳನ್ನು ತಯಾರಿಸುತ್ತಲೇ ಇರುತ್ತವೆ. ಶಸ್ತ್ರಾಸ್ತ್ರಗಳ ತಯಾರಿಕೆಯೇ ಆ ದೇಶಗಳ ಔದ್ಯೋಗಿಕ ಕ್ಷೇತ್ರ. ತಮ್ಮ ದೇಶದ ಜನರಿಗೆ ಉದ್ಯೋಗ ಒದಗಿಸಬೇಕಾದರೆ ಶಸ್ತ್ರಾಸ್ತ್ರ ತಯಾರಿಕಾ ಕೈಗಾರಿಕಗೆ ನಡೆಯಬೇಕು. ತಯಾರಿಸಲಾದ ಶಸ್ತ್ರಾಸ್ತ್ರಗಳಿಗೆ ಭಾರತದಂಥ ದೇಶಗಳೇ ಉತ್ತಮ ಮಾರುಕಟ್ಟೆ. ಒಬಾಮಾರ ಇತ್ತೀಚಿನ ಭಾರತದ ಭೇಟಿಯ ಉದ್ದೇಶ್ಯವೂ ಇದೇ ಆಗಿತ್ತು. ಕಳೆದ ಅರವತ್ತು ವರ್ಷಗಳಿಂದ ಅಮೇರಿಕಾ ಪಾಕಿಸ್ತಾನಕ್ಕೆ ಅದರ ಕಂಠಪೂರ್ತಿ ವಿಧ್ವಂಸಕ ಶಸ್ತ್ರಾಸ್ತ್ರಗಳನ್ನು ಕೊಟ್ಟಿದೆ. ಆ ಪ್ರಕ್ರಿಯೆ ಅಂತರಂಗವಾಗಿಯೂ, ಬಹಿರಂಗವಾಗಿಯೂ ನಡದೇ ಇದೆ. ಆದ್ದರಿಂದ ಪಾಕಿಸ್ತಾನವು ಭಾರತದೊಂದಿಗೆ ಮಿತ್ರ ರಾಷ್ಟ್ರವಾಗಿದ್ದುಕೊಂಡು ತನ್ನ ಏಳಿಗೆಯನ್ನು ಬಯಸುವುದಕ್ಕಿಂತ ಭಾರತದೊಂದಿಗೆ ಸೆಣಸಾಟವಾಡುತ್ತ ತನ್ನ ಆಂತರಿಕ ಸಮಸ್ಯೆಗಳಿಗೆ ಸಮಾಧಾನ ಪಡೆಯುವುದರಲ್ಲಿ ಮಗ್ನವಾಗಿದೆ. ಭಾರತದೊಂದಿಗೆ ನೂರಾರು ವರ್ಷಗಳ ಯುದ್ಧ ಮಾಡುವ ಮಾತನ್ನಾಡುತ್ತದೆ. ಭಾರತ ಮತ್ತು ಪಾಕ್ ಮಧ್ಯೆ ಎರಡು ಯುದ್ಧಗಳಾಗಿ ಹೋದವು. ಮೂರನೇ ಯುದ್ಧವಾಗುವಂತೆ ಮಾಡುವುದರಲ್ಲಿ ಅಮೇರಿಕಾ ತನ್ನ ರಾಜಕೀಯ-ಆರ್ಥಿಕ ಕೌಶಲವನ್ನು ಉಪಯೋಗಿಸುತ್ತಿದೆ. ಒಬಾಮಾರ ಭಾರತ ಭೇಟಿಯ ಸಂದರ್ಭದಲ್ಲಿ ನ್ಯೂಯಾರ್ಕ್ ಟೈಮ್ಸ್ ಹೀಗೆ ಬರೆದಿದೆ:- "ಚೀಣಾದಲ್ಲಿ ಬೆಳೆಯುತ್ತಿರುವ ಸರ್ವಾಧಿಕಾರದ ಬಗ್ಗೆ ಅಮೇರಿಕಾ ಚಿಂತಿತವಾಗಿದೆ; ಸ್ವತಃ ಆರ್ಥಿಕವಾಗಿ ನೋವು ಅನುಭವಿಸುತ್ತಿದೆ; ಯುರೋಪ್ ದುರ್ಬಲಗೊಂಡಿದೆ. ಇಂಥ ಪರಿಸ್ಥಿತಿಯಲ್ಲಿ ಅಮೇರಿಕಾ ಯೋಗ್ಯ ಭಾಗಿದಾರನನ್ನು ಹುಡುಕುತ್ತಿದೆ. ಭಾರತ ಅಂಥ

ಯೋಗ್ಯ ಭಾಗಿದಾರ ದೇಶವಾಗಿ ಅಮೇರಿಕಾಕ್ಕೆ ದೊರೆತಿದೆ". ಈ ಪತ್ರಿಕೆ ಹೇಳುವಂತೆ ಭಾರತ ಹರಿಯಾಣ ರಾಜ್ಯದ ಬಹದ್ದೂರ್‌ಗರ್ ಎಂಬಲ್ಲಿ "ವಿಶ್ವ ಅಣುಶಕ್ತಿ ಭಾಗೀದಾರತ್ವ ಕೇಂದ್ರ"ವನ್ನು ಸ್ಥಾಪಿಸಲು ಮುಂದೆ ಬಂದಿದೆ. ಈಗಿನ ಒಬಾಮಾರ ಭೇಟಿಯ ಉದ್ದೇಶ್ಯ ಸ್ಪಷ್ಟವಾಗಿಯೇ ಇದೆ. ದೀರ್ಘಾವಧಿಯ ಸೇನಾವ್ಯವಸ್ಥೆ ಅಥವಾ ರಣತಂತ್ರ ಸಾಧ್ಯತೆಯನ್ನು ಕಂಡುಕೊಳ್ಳುವುದೇ ಆಗಿದೆ. ಇದುವರೆಗೆ ಅಣುಶಕ್ತಿಯ ಉತ್ಪಾದನೆಯನ್ನು ವಿರೋಧಿಸುತ್ತಿದ್ದ ಭಾರತ ಅಮೇರಿಕದ ಒತ್ತಡಕ್ಕೆ ಮಣಿದು ಮೇಲ್ಕಾಣಿಸಿದ ಕೇಂದ್ರದ ಸ್ಥಾಪನೆಗೆ ಅನುಮತಿ ಕೊಟ್ಟು ಅಣುಶಕ್ತಿ ವಿರೋಧದ ನೀತಿಯನ್ನು ಕೈಬಿಟ್ಟಂತಾಗಿದೆ.

ಒಬಾಮಾ ಭಾರತಕ್ಕೆ ಭೇಟಿಕೊಟ್ಟ ಸಂದರ್ಭದಲ್ಲಿ ಮುಂಬೈ ಮತ್ತು ದಿಲ್ಲಿ ನಗರಗಳು ಯುದ್ಧ ಕಾಲದಲ್ಲಿಯ ಅಭೇದ್ಯ ಕೋಟೆಗಳಂತಾಗಿದ್ದವು. ಆ ನಗರಗಳ ನಿವಾಸಿಗಳು ರಹದಾರಿ ಚೀಟಿ ಪಡೆದು ಓಡಾಡುವಂತಾಗಿತ್ತು. ಸ್ವದೇಶದಲ್ಲಿಯೇ ವಿದೇಶಿಗಳಾಗಬೇಕಾಯಿತು. ಭಾರತ ಅಮೇರಿಕಾದ ಶತ್ರು ದೇಶವಲ್ಲ. ಅತಿಥಿಗಳನ್ನು ದೇವರೆಂದೇ ಭಾವಿಸುವ ದೇಶ ಬಾರತ, ಆದರೆ ಅಮೇರಿಕದ ಕೂಟನೀತಿಯ ಕಾರಣದಿಂದ ಭಾರತ ಒಬಾಮಾರ ನಾಲ್ಕು ದಿನಗಳ ಭೇಟಿಯ ಕಾಲದಲ್ಲಿ ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡಿರಬೇಕಾಯಿತು! ಸ್ವಾತಂತ್ರ ಚಳುವಳಿಯ ಉಗ್ರಕಾಲದಲ್ಲಿ ಗಾಂಧೀಜಿ ಲಂಡನ್ನಿಗೆ ದುಂಡುಮೇಜಿನ ಸಮ್ಮೇಳನಕ್ಕೆ ಹೋದಾಗ ಅಲ್ಲಿಯ ಸರ್ಕಾರದ ಯಾವ ರಕ್ಷಣೆಯನ್ನೂ ಬಯಸದೆ ಅಲ್ಲಿಯ ಮಿಲ್ ಕಾರ್ಮಿಕರ ಕಲೋನಿಯಲ್ಲಿ ಇದ್ದು ಬಂದರು. ಅಹಿಂಸಾ ತತ್ವದ ಪ್ರತಿಪಾದಕನಾದ ಭಾರತದ ನಾಯಕನ ವಿದೇಶ ಭೇಟಿಯ ಆ ರೀತಿ ಎಂಥದು! ಹಿಂಸೆಯನ್ನೇ ಆರಾಧಿಸುವ ಅಮೇರಿಕದ ಅಧ್ಯಕ್ಷನ ಭೇಟಿಯ ರೀತಿ ಎಂಥದು. ಗಾಂಧೀಯವರ ಲಂಡನ್ ಭೇಟಿ ಸಹಬಾಳ್ವೆ, ಸಹಕಾರದ ಸಂದೇಶವಾಗಿದ್ದರೆ, ಒಬಾಮಾರ ಭಾರತ ಭೇಟಿ, ಭಾರತವನ್ನು ಅಮೇರಿಕದ ವಾಣಿಜ್ಯ ಪದಾರ್ಥಗಳಿಗೆ ಮುಖ್ಯವಾಗಿ ಶಸ್ತ್ರಾಸ್ತ್ರಗಳಿಗೆ ಮಾರುಕಟ್ಟೆಯನ್ನಾಗಿ ಮಾಡುವುದೇ ಆಗಿತ್ತು. ಹತ್ತು ಬಿಲಿಯನ್ ಡಾಲರ್‌ಗಳ ಒಪ್ಪಂದಲ್ಲಿ ಅರ್ಧಭಾಗ ಅಮೇರಿಕಾ ಉತ್ಪಾದಿತ ಶಸ್ತ್ರಾಸ್ತ್ರಗಳ ಖರೀದಿಗೆ ಮತ್ತು ಇನ್ನು ಅರ್ಧಭಾಗ ಅಮೇರಿಕಾದಲ್ಲಿ ಐವತ್ತು ಸಾವಿರ ಜನರಿಗೆ ಉದ್ಯೋಗಗಳನ್ನು ಸೃಷ್ಟಿಸುವುದಕ್ಕಾಗಿ ಇದೆ.

ಒಬಾಮಾರೊಂದಿಗೆ ಮೂರು ಜೆಟ್ ವಿಮಾನ ತುಂಬ ಅಮೇರಿಕದ ವಾಣಿಜ್ಯ ಕ್ಷೇತ್ರದ ಮುಖಂಡರು ಬಂದಿದ್ದರು. ಭಾರತ ಅವರೊಂದಿಗೆ ಮಾಡಿಕೊಂಡಿರುವ ಒಪ್ಪಂದಗಳನ್ನು ಗಮನಿಸಿದರೆ ಅವು ಭಾರತವನ್ನು ಆರ್ಥಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಮತ್ತು ಒಂದು ಹಂತದವರೆಗೆ ರಾಜಕೀಯವಾಗಿಯೂ ನಿರ್ಬಂಧನಕ್ಕೊಳಗಾಗಿಸುವಂತಿವೆ. ಭಾರತದ ವರಕವಿ, ದೃಷ್ಟಾರ, ಚಿಂತಕ ರವೀಂದ್ರನಾಥ ಟಾಗೋರ್‌ರವರು ೧೯೨೪ರಲ್ಲಿ ಚೀಣಾಕ್ಕೆ ಹೋಗಿದ್ದಾಗ ಅಲ್ಲಿಯ ತಮ್ಮ ಭಾಷಣವೊಂದರಲ್ಲಿ ಅವರು ಹೇಳಿದ ಮಾತು ಒಬಾಮಾರ ಭೇಟಿಯ ಬಗ್ಗೆ ಬಹು ಮೋಹಿತವಾಗಿರುವ ಭಾರತದ ಇಂದಿನ ಮನೋಸ್ಥಿತಿಯನ್ನು ಚೆನ್ನಾಗಿ ವರ್ಣಿಸುತ್ತದೆ.

"ನಾವು ಕಳೆದ ಒಂದು ಶತಮಾನದಿಂದ ಪಶ್ಚಿಮದ ಮಹೋನ್ನತಿಯೆಂಬ ರಥದಿಂದ ಎಳೆಯಲ್ಪಟ್ಟಿದ್ದೇವೆ. ರಥದ ಓಡುವಿಕೆಯಿಂದ ಎದ್ದ ಧೂಳಿನಿಂದ ಉಸಿರುಗಟ್ಟಿದೆ; ಅದರ ಸದ್ದಿನಿಂದ ಕಿವುಡಾಗಿದ್ದೇವೆ; ನಮ್ಮದೇ ನಿಃಸಹಾಯಕತೆಯಿಂದ ಕುಸಿದು ಹೋಗಿದ್ದೇವೆ; ಅದರ ವೇಗವು ಮೂಕವಿಸ್ಮಿತರನ್ನಾಗಿ ಮಾಡಿದೆ. ಈ ರಥದ ಸವಾರಿ ಪ್ರಗತಿಯೆಂದು ಒಪ್ಪಲು ಸಮ್ಮತಿಸಿದ್ದೇವೆ; ಆ ಪ್ರಗತಿಯೇ ಸಂಸ್ಕೃತಿಯೆಂದೂ ಒಪ್ಪಿದ್ದೇವೆ. ನಾವೇನಾದರೂ ಈ ಪ್ರಗತಿ ಯಾವ ಕಾರಣಕ್ಕಾಗಿ ಮತ್ತು ಯಾರಿಗಾಗಿ ಎಂದೇನಾದರೂ ಕೇಳಿದರೆ ಅದು ವಿಶಿಷ್ಟ ರೀತಿಯ ಅರ್ಥಹೀನ ಪ್ರಶ್ನೆಯೆಂದು ಹೀಗೆಳೆಯಲಾಗುತ್ತದೆ. ಏಂದರೆ ಆ ಪ್ರಗತಿ ಪರಿಪೂರ್ಣವೆಂದೇ ಭಾವಿಸಲಾಗಿದೆ. ಈಗ ಆ ರಥಧ ವೈಜ್ಞಾನಿಕ ಪರಿಪೂರ್ಣತೆಯ ಲೆಕ್ಕ ತೆಗೆದುಕೊಳ್ಳುವ ಕಾಲ ಬಂದಿದೆ".

ಒಬಾಮಾ ತಮ್ಮ ಭೇಟಿಯ ಕಾಲದಲ್ಲಿ ಭಾರತಕ್ಕೆ ವಿಶ್ವರಾಷ್ಟ್ರ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ಸ್ಥಾನ ಕೊಡಿಸುವ ಪ್ರಯತ್ನ ಮಾಡುವುದಾಗಿ ಹೇಳಿದರು. ಭಾರತ ಒಬಾಮಾರ ಈ ಮಾತನ್ನು ನಂಬಿ ಅವರ ಭೇಟಿಯ ಬಗ್ಗೆ ಎಲ್ಲಿಲ್ಲದ ಆಶೆಯ ಗೋಪುರವನ್ನೇ ಕಟ್ಟಿಕೊಂಡಿತು. ಆದರೆ ಭದ್ರತಾ ಸಮಿತಿಯ ಸದಸ್ಯತ್ವದ ಬಗ್ಗೆ ಅಮೇರಿಕಾ ಕೊಟ್ಟಿರುವ 'ಚೆಕ್' ಅನ್ನು ಅಷ್ಟು ಸುಲಭವಾಗಿ ನಗದುಗೊಳಿಸಿಲು ಸಾಧ್ಯವಿಲ್ಲವೆಂದು ಪಾಕಿಸ್ತಾನ ಮತ್ತು ಚೀಣಾ ಹೇಳಿವೆ. ಅಂದರೆ ಆ ದೇಶಗಳಿಗೆ ಭಾರತ ಭದ್ರತಾ ಸಮಿತಿಯ ಸದಸ್ಯನಾಗುವುದು ಇಷ್ಟವಿಲ್ಲ. ಯಾವುದಾದರೂ ಕಾರಣಗಳನ್ನು ಮುಂದೆ ಮಾಡುತ್ತ ಚೀಣಾ ತನ್ನ ವಿಟೋ ಹಕ್ಕು ಚಲಾಯಿಸಬಹುದು. ಕೇವಲ ಅಮೇರಿಕಾದ ಬೆಂಬಲದಿಂದ ಭಾರತ ಭದ್ರತಾ ಸಮಿತಿಯ ಸದಸ್ಯತ್ವ ಪಡೆಯಲಾರದು. ಭದ್ರತಾ ಸಮಿತಿಯ ಇತರ ಸದಸ್ಯ ದೇಶಗಳಾದ ಇಂಗ್ಲೆಂಡ್, ರಶಿಯಾ, ಜರ್ಮನ್ ಮುಂತಾದ ದೇಶಗಳ ಬೆಂಬಲವೂ ಬೇಕು. ಅಲ್ಲದೆ, ವಿಶ್ವಸಂಸ್ಥೆಯ ಅಂಗರಚನೆಯಲ್ಲಿ ತಿದ್ದುಪಡಿಯಾಗಲು ಹತ್ತು ವರ್ಷಗಳಾದರೂ ಬೇಕು. ಅಷ್ಟರಲ್ಲಿ ಒಬಾಮಾರ ಅಧ್ಯಕ್ಷಾವಧಿ ಮುಗಿದೇ ಹೋಗಿರುತ್ತದೆ. ಒಬಾಮಾರ ಪೊಳ್ಳು ಮಾತನ್ನೇ ನಂಬಿ ಭಾರತ ನಾಲ್ಕು ದಿನ ಕುಣಿದಾಡಿದ್ದೂ ಸ್ವತಂತ್ರ ಭಾರತಕ್ಕೆ ಶೋಭಿಸುವಂಥಾದ್ದಾಗಿರಲಿಲ್ಲ. ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ೧೯೪೨ರಲ್ಲಿ ಕ್ರಿಪ್ಸ್ ನೇತೃತ್ವದ ಸಮಿತಿ ಬಂದಿತ್ತು. ಆ ಸಮಿತಿಯ ಉದ್ದೇಶ್ಯಗಳು ಭಾರತದ ಹಿತಕ್ಕೆ ಇಲ್ಲವೆಂದು ತಿಳಿದ ಭಾರತೀಯರು ಕ್ರಿಪ್ಸ್ 'ಗೋ ಬ್ಯಾಕ್' ಎಂದು ಪ್ರತಿಭಟನೆ ನಡೆಸಿದರು. ಮತ್ತು ಭಾರತದ ಹಿತವನ್ನು ಕಾಪಾಡಲು ಹೋರಾಡಿದರು. ಆದರೆ ಈಗ ಸುಮಾರು ಎಪ್ಪತ್ತು ವರ್ಷಗಳ ಅನಂತರದ ಸರ್ವತಂತ್ರ ಸ್ವತಂತ್ರ ಭಾರತ ತನ್ನೆಲ್ಲ ಸ್ವಾಭಿಮಾನ, ಸ್ವದೇಶಾಭಿಮಾನ, ಸ್ವರಾಜ್ಯಾಭಿಮಾನವನ್ನು ಅಮೇರಿಕದ ಅಣುಬಾಂಬ್ ಪಾಪ ಸ್ಪರ್ಶದ ಹತ್ತು ಬಿಲಿಯನ್ ಡಾಲರ್ ಎದಿರು ಕಳೆದುಕೊಂಡದ್ದು 'ಭವಿಷ್ಯದೊಂದಿಗಿನ ಒಪ್ಪಂದ'ದಲ್ಲಿಯ Tryst with Destinyಯಲ್ಲಿಯ ಒಂದು ದುರಂತವೇ ಸರಿ.

* * *

ಗುಲಾಮರನ್ನು ತಯಾರು ಮಾಡುವ ಪಠ್ಯ

- ಸಚ್ಚಿದಾನಂದ ಹೆಗಡೆ, ಭತ್ತಗುತ್ತಿಗೆ

ನಮ್ಮ ಮಹಾವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ಕೊಠಡಿಯಲ್ಲಿ ವಿದ್ಯಾರ್ಥಿಗಳೊಂದಿಗೆ ಹರಟೆ ಹೊಡೆಯುತ್ತ ಕುಳಿತಿದ್ದೆ. ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿನಿಯೋರ್ವಳು ಕೆಲವು ಪುಸ್ತಕಗಳನ್ನು ಕೈಯಲ್ಲಿ ಹಿಡಿದುಕೊಂಡು ನಾನು ಕುಳಿತಿದ್ದ ಕೊಠಡಿಯನ್ನು ಪ್ರವೇಶಿಸಿದಳು. ಅದಾವ ಪುಸ್ತಕವೆಂದು ಕುತೂಹಲದಿಂದ ಆಕೆಯ ಕೈಯಿಂದ ಇಸಿದುಕೊಂಡು ನೋಡಿದೆ. 'ರಾಜಕೀಯ ಸಿದ್ಧಾಂತ ಮತ್ತು ಪಾಶ್ಚಿಮಾತ್ಯ ರಾಜಕೀಯ ಚಿಂತನೆ ಎಂಬ ಹೆಸರಿನ ಈ ಪುಸ್ತಕವು ಕರ್ನಾಟಕ ವಿಶ್ವವಿದ್ಯಾಲಯದ ಬಿ.ಎ. ಪ್ರಥಮ ವರ್ಷದ ರಾಜಕೀಯ ಶಾಸ್ತ್ರದ ಪಠ್ಯಪುಸ್ತಕವಾಗಿತ್ತು. ಇದನ್ನು ೨೦೦೫-೦೬ರ ನೂತನ ಪಠ್ಯಕ್ರಮಕ್ಕನುಸಾರವಾಗಿ ಸಿದ್ಧಪಡಿಸಲಾಗಿದೆ ಎಂದು ಮೊದಲ ಪುಟದಲ್ಲಿ ಲೇಖಕದ್ವಯರು ಪ್ರಕಟಿಸಿದ್ದರು. ಅದರ ಪುಟಗಳನ್ನೆಲ್ಲ ಸುಮ್ಮನೆ ನೋಡುತ್ತ ಹೋದೆ. ಮೊದಲ ಅಧ್ಯಾಯದಲ್ಲಿ ರಾಜ್ಯಶಾಸ್ತ್ರದ ಕುರಿತಾದ ವಿವಿಧ ವ್ಯಾಖ್ಯಾನಗಳನ್ನು ಪಟ್ಟಿ ಮಾಡಲಾಗಿತ್ತು. ಅದರಲ್ಲಿ ವಿವಿಧ ಪಾಶ್ಚಿಮಾತ್ಯ ವಿದ್ವಾಂಸರು ಮತ್ತು ತತ್ವಶಾಸ್ತ್ರಜ್ಞರು ನೀಡಿದ ವ್ಯಾಖ್ಯಾನಗಳನ್ನು ವಿವರಿಸಲಾಗಿತ್ತು. ಒಬ್ಬನೇ ಒಬ್ಬ ಭಾರತೀಯ ರಾಜಕೀಯ ಶಾಸ್ತ್ರಜ್ಞನ ಅಥವಾ ತತ್ವಶಾಸ್ತ್ರಜ್ಞನ ಹೇಳಿಕೆ ಯಾ ವಿಚಾರ ಕಂಡುಬರಲಿಲ್ಲ. ಎರಡನೇ ಅಧ್ಯಾಯದಲ್ಲಿ ರಾಜ್ಯ ಅಂದರೇನು ಎಂಬುದರ ವಿವರಣೆ. ಅಲ್ಲಿಯೂ ಅಷ್ಟೆ. ಸಂಪೂರ್ಣ ಪಾಶ್ಚಾತ್ಯರ ವಿವರಣೆಗಳು. ಅದೇ ರೀತಿ ಮೂರು, ನಾಲ್ಕು, ಐದನೇ ಅಧ್ಯಾಯಗಳು. ಅವುಗಳಲ್ಲಿ ಸಾರ್ವಭೌಮತ್ವ ಅಥವಾ ಪರಮಾಧಿಕಾರ, ಪ್ರಜಾಪ್ರಭುತ್ವ, ರಾಜಕೀಯ ತತ್ವಪ್ರಣಾಳಿ ಅಥವಾ ರಾಜಕೀಯ ಪಂಥಗಳು ಅಥವಾ ರಾಜಕೀಯ ತತ್ವ ಸಿದ್ಧಾಂತ ಮುಂತಾದ ವಿಷಯಗಳ ವಿವೇಚನೆ ಇದ್ದವು. ಇಡೀ ಪುಸ್ತಕದಲ್ಲಿ ಒಂದೇ ಒಂದು ಕಡೆ ಭಾರತೀಯ ದೃಷ್ಟಿಕೋನವನ್ನಾಗಲಿ, ರಾಜ್ಯಶಾಸ್ತ್ರ ನಿಪುಣರ ಹೇಳಿಕೆಗಳನ್ನಾಗಲಿ ಅಥವಾ ಭಾರತದಲ್ಲಿ ನಡೆದ ರಾಜಕೀಯ ಪ್ರಯೋಗಗಳನ್ನಾಗಲಿ ಉಲ್ಲೇಖಿಸಿದ್ದು ಕಂಡುಬರಲಿಲ್ಲ. ಪ್ಲೇಟೊ, ಅರಿಸ್ಟಾಟಲ್, ಕಾರ್ಲ್‌ಮಾರ್ಕ್ಸ್, ಡಾಂಟೆ, ಹೆಗಲ್ ಮುಂತಾದ ಹೆಸರುಗಳೇ ತುಂಬಿಕೊಂಡಿದ್ದವು.

ಒಂದು ಶಾಸ್ತ್ರವನ್ನು ಅಧ್ಯಯನ ಮಾಡುವಾಗ ಆ ಶಾಸ್ತ್ರಕ್ಕೆ ಸಂಬಂಧಪಟ್ಟು ಜಗತ್ತಿನ ವಿವಿಧ ಭಾಗಗಳಲ್ಲಿ ಆದ ಬೆಳವಣಿಗೆಗಳನ್ನು, ಬೆಳೆದುಬಂದ ವಿಚಾರಧಾರೆಗಳನ್ನು ಮತ್ತು ತತ್ವಶಾಸ್ತ್ರೀಯ ನೆಲೆಗಟ್ಟನ್ನು ಅಭ್ಯಾಸ ಮಾಡಬೇಕೆಂಬುದು ಸರಿ. ಆದರೆ ಕೇವಲ ಪಾಶ್ಚಿಮಾತ್ಯ ರಾಜಕೀಯ ಚಿಂತನೆಯನ್ನು ಮಾತ್ರ ಯಾಕೆ ಅಭ್ಯಾಸ ಮಾಡಬೇಕೆಂಬುದು ಅರ್ಥವಾಗಲಿಲ್ಲ. ಆ ಬಗ್ಗೆ ಪಠ್ಯಪುಸ್ತಕದಲ್ಲಿ ಎಲ್ಲಿಯಾದರೂ ಸಮರ್ಥನೆ ಸಿಗುತ್ತದೆಯೋ ಎಂದು ಹುಡುಕಿದೆ. ಎಲ್ಲೂ ಸಿಗಲಿಲ್ಲ. 'ಲೇಖಕರ ನುಡಿ'ಯಲ್ಲಿ ಕೇವಲ "ಕರ್ನಾಟಕ ವಿಶ್ವವಿದ್ಯಾಲಯವು ಪ್ರಸಕ್ತ ಸಾಲಿನಿಂದ (೨೦೦೫-೦೬) ಪದವಿ ತರಗತಿಗಳಿಗೆ ಸೆಮಿಸ್ಟರ್ ಪದ್ಧತಿಯನ್ನು ಅಳವಡಿಸಿದೆ. ಕ.ವಿ.ವಿ.ಯ ರಾಜ್ಯಶಾಸ್ತ್ರ ವಿಭಾಗದ ಅಭ್ಯಾಸ ಮಂಡಳಿಯು ಬಿ. ಎ. ಭಾಗ ಒಂದಕ್ಕೆ ರಾಜಕೀಯ ಸಿದ್ಧಾಂತ ಹಾಗೂ ರಾಜಕೀಯ ಚಿಂತನೆ ಪಠ್ಯಕ್ರಮ ನಿಗದಿಗೊಳಿಸಿದ್ದು, ಹೊಸ

ಹೊಸ ಅಧ್ಯಯನ ಕ್ಷೇತ್ರಗಳನ್ನು ಗುರುತಿಸಲಾಗಿದೆ. ಅದರನ್ವಯ ರಾಜಕೀಯ ಸಿದ್ಧಾಂತ ಹಾಗೂ ರಾಜಕೀಯ ಚಿಂತನೆ ಎಂಬ ಪಠ್ಯಗ್ರಂಥ ರಚಿಸಲಾಗಿದೆ" ಎಂಬ ಎರಡು ವಾಕ್ಯಗಳ ಹೇಳಿಕೆ ಬಿಟ್ಟರೆ ಇನ್ನೇನೂ ಇಲ್ಲ. ಈ ಪುಸ್ತಕದಲ್ಲಿ ಪ್ಲೇಟೊನ ಆದರ್ಶ ರಾಜ್ಯದ ಬಗ್ಗೆ , ಅರಿಸ್ಟಾಟಲ್‌ನ ಉತ್ತಮ ರಾಜ್ಯದ ಬಗ್ಗೆ, ಕಾರ್ಲ್‌ಮಾರ್ಕ್ಸ್‌ನ ಸಮಾಜವಾದದ ಬಗ್ಗೆ ವಿವರವಾದ ವಿವೇಚನೆ ಇದೆ. ಭಾರತೀಯ ವಿದ್ಯಾರ್ಥಿಗಳು ಪಾಶ್ಚಿಮಾತ್ಯ ರಾಜಕೀಯ ಚಿಂತನೆಯ ಬಗ್ಗೆ ಇಷ್ಟೊಂದು ಆಳವಾದ ಅಥವಾ ವಿವರವಾದ ಅಭ್ಯಾಸವನ್ನು ಮಾಡುವ ಪ್ರಸ್ತುತತೆ ಏನಿದೆ?

ಭಾರತ, ಚೀನಾ ಮುಂತಾದ ಪೌರ್ವಾತ್ಯ ದೇಶಗಳಲ್ಲಿ ಪಾಶ್ಚಿಮಾತ್ಯ ದೇಶಗಳಿಗಿಂತ ಸಾವಿರಾರು ವರ್ಷಗಳ ಮುಂಚೆಯೇ ನಾಗರಿಕತೆ ಉತ್ತುಂಗಕ್ಕೇರಿತ್ತು. ಭಾರತದಲ್ಲಂತೂ ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಕಲೆ, ತಂತ್ರಶಾಸ್ತ್ರ, ವಾಸ್ತು, ಬಿಲ್ವಿದ್ಯೆ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ಅಗಾಧ ಬೆಳವಣಿಗೆ ಸಂಭವಿಸಿತ್ತು. ಜಗತ್ತಿನ ಅತಿ ಶ್ರೇಷ್ಠ ವಿಶ್ವವಿದ್ಯಾಲಯಗಳು ಆಗ ಭಾರತದಲ್ಲಿ ವಿಜೃಂಭಿಸುತ್ತಿದ್ದವು. ಅದೇ ರೀತಿ ರಾಜ್ಯಶಾಸ್ತ್ರ, ಆಡಳಿತದ ಪದ್ಧತಿ, ತೆರಿಗೆ ವಿಚಾರ, ನ್ಯಾಯನಿರ್ಣಯ, ವೈಯಕ್ತಿಕ ಕಾನೂನುಗಳು ಮುಂತಾದ ಅಂತರ್ಸಂಬಂಧಿ ಕ್ಷೇತ್ರಗಳು ಗೌರಿಶಂಕರದಷ್ಟು ಔನ್ನತ್ಯವನ್ನು ಕಂಡಿದ್ದವು. ಇವುಗಳನ್ನೆಲ್ಲ ನಮ್ಮ ರಾಜಕೀಯ ಶಾಸ್ತ್ರದ ಪಠ್ಯಪುಸ್ತಕದಲ್ಲಿ ಸೇರಿಸುವುದು ಅವಶ್ಯವಾಗಿತ್ತು. ಏಕೆಂದರೆ ಈ ಕ್ಷೇತ್ರಗಳಲ್ಲಿ ಆಗಿನ ಕಾಲದ ಪರಿಣಿತರು ಪ್ರತಿಪಾದಿಸಿದ ಮೂಲತತ್ವಗಳು ಇಂದಿಗೂ ಪ್ರಸ್ತುತ.

ಪಾಂಡವರನ್ನು ಮಹಾರಾಜ ಧೃತರಾಷ್ಟ್ರನು ವಾರಣಾವತಕ್ಕೆ ಕಳಿಸಲು ಸಿದ್ಧತೆ ನಡೆಸುತ್ತಿದ್ದಂತೆ ಸಾಮ್ರಾಜ್ಯದ ಮಹಾಮಂತ್ರಿಯಾಗಿದ್ದ ವಿದುರನು ಮಹಾರಾಜನಿಗೆ ರಾಜನೀತಿಯ ಬಗ್ಗೆ ಪಾಠ ಹೇಳುತ್ತಾನೆ. ಈ ಭಾಗ ವಿದುರನ ರಾಜನೀತಿ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದರ ಒಂದು ಅಂಶದ ಬಗ್ಗೆ ನಿಮ್ಮ ಗಮನ ಸೆಳೆಯಲು ಇಚ್ಛಿಸುತ್ತೇನೆ. ಪಾಶ್ಚಿಮಾತ್ಯ ನ್ಯಾಯ ನಿರ್ಣಯದಲ್ಲಿ ನೂರು ಜನ ಅಪರಾಧಿಗಳು ಬಚಾವಾದರೂ ಪರವಾಯಿಲ್ಲ, ಒಬ್ಬನೇ ಒಬ್ಬ ನಿರಪರಾಧಿಗೆ ಕೂಡ ಶಿಕ್ಷೆ ಆಗಬಾರದು ಎಂಬುದು ಮೂಲತತ್ವ.

ವಿದುರನ ರಾಜನೀತಿ ಈ ವಿಷಯದಲ್ಲಿ ಮೇಲ್ನೋಟಕ್ಕೆ ಕಠಿಣವೆನಿಸಿದರೂ ಆಳವಾಗಿ ಅಧ್ಯಯನ ಮಾಡಿದಾಗ ಬಹುಜನ ಹಿತಾಯ, ಬಹುಜನ ಸುಖಾಯ ಎಂಬ ತತ್ವವನ್ನು ಅನುಸರಿಸಿದ್ದುದು ಕಂಡುಬರುತ್ತದೆ. ಒಂದು ಕುಟುಂಬದ ಹಿತಕ್ಕಾಗಿ ಓರ್ವ ವ್ಯಕ್ತಿಯ ತ್ಯಾಗ ಅವಶ್ಯಕವಾಗಿದ್ದರೆ ಅದನ್ನು ಮಾಡಬೇಕು. ಒಂದು ಗ್ರಾಮದ ಹಿತಕ್ಕೆ ಒಂದು ಕುಟುಂಬದಿಂದ ಧಕ್ಕೆ ಬರುತ್ತದೆ ಎಂದಾದರೆ ಆ ಕುಟುಂಬವನ್ನು ಬಲಿ ನೀಡಲು ಹಿಂದೆಮುಂದೆ ನೋಡಬಾರದು. ಒಂದು ದೇಶದ ಹಿತಕ್ಕಾಗಿ ಒಂದು ಗ್ರಾಮವನ್ನು ತ್ಯಾಗ ಮಾಡಬೇಕಾಗಿ ಬಂದರೆ ಅದನ್ನು ಮಾಡಲೇ ಬೇಕು. ಇದು ವಿದುರ ಪ್ರತಿಪಾದಿಸಿದ ರಾಜ್ಯಾಡಳಿತದ ಒಂದು ಮುಖ್ಯ ತತ್ವ

ಭಾರತೀಯ ರಾಜಕಾರಣದ ಇತಿಹಾಸದಲ್ಲಿ ಚಾಣಕ್ಯನ ಕಥೆ ಬರದಿದ್ದರೆ ಅದು ಅಪೂರ್ಣ. ಚಾಣಕ್ಯನ 'ಅರ್ಥಶಾಸ್ತ್ರ' ಗ್ರಂಥವು ರಾಜಕೀಯ ಶಾಸ್ತ್ರದ ಒಂದು ಮೌಲಿಕ ಕೃತಿಯಾಗಿದೆ. ಆದರೆ ನಮ್ಮ ಪಠ್ಯಪುಸ್ತಕದಲ್ಲಿ ಅದರ ಉಲ್ಲೇಖ ಬರುವುದಿಲ್ಲ. ಮಹಾಭಾರತ ಯುದ್ಧ ಮುಗಿದ ನಂತರ ಶರಮಂಚದ ಮೇಲೆ ಮಲಗಿದ್ದ ಭೀಷ್ಮನು ಯುಧಿಷ್ಠಿರನಿಗೆ ರಾಜ್ಯಶಾಸ್ತ್ರದ ತತ್ವಗಳನ್ನು ಬೋಧಿಸುತ್ತಾನೆ. ಈ ಭಾಗ ಕೂಡ ಬಹಳ ಮಹತ್ವದ್ದಾಗಿದೆ. ಆದರೆ ನವ ವಿದ್ಯಾರ್ಥಿಗಳಿಗೆಂದು ರಚಿಸಲಾದ ಪಠ್ಯಪುಸ್ತಕಗಳಲ್ಲಿ ಇವುಗಳ ಉಲ್ಲೇಖವೇ

ಇಲ್ಲ. ಕಮ್ಯುನಿಸ್ಟ್ ಸಿದ್ಧಾಂತದ ಜನಕನಾದ ಕಾರ್ಲ್ ಮಾರ್ಕ್ಸ್‌ನು 'ವಿದರಿಂಗ್ ಅವೇ ಆಫ್ ದಿ ಸ್ಟೇಟ್' (ಸರಕಾರದ ಅವಶ್ಯಕತೆಯೇ ಇಲ್ಲದೆ ಜನರು ಸ್ವಯಂಪ್ರೇರಣೆಯಿಂದ ನ್ಯಾಯಬದ್ಧವಾಗಿ, ಕಾನೂನುಬದ್ಧವಾಗಿ ಮತ್ತು ಶೋಷಣೆಯಿಂದ ಮುಕ್ತರಾಗಿ ಸಮಾಜಜೀವನ ನಡೆಸುವುದು) ಎಂಬ ಕಲ್ಪನೆಯೊಂದನ್ನು ಮುಂದಿಟ್ಟಿದ್ದ. (ಆದರೆ ಮುಂದೆ ಹುಟ್ಟಿಕೊಂಡ ಕಮ್ಯುನಿಸ್ಟ್ ಸರಕಾರಗಳೆಲ್ಲ ಈ ಕಲ್ಪನೆಗೆ ವಿರುದ್ಧವಾಗಿ ಸರ್ವಾಧಿಕಾರಿ ಹಾಗೂ ದಮನಕಾರಿ ಸರಕಾರಗಳಾಗಿ ಮಾರ್ಪಟ್ಟವು ಎಂಬುದು ಬೇರೆ ವಿಚಾರ). ಕಾರ್ಲ್ ಮಾರ್ಕ್‌ನ ತಲೆಯೊಳಗೆ ಈ ವಿಚಾರ ಬರುವ ಅದೆಷ್ಟೋ ಸಾವಿರ ಸಾವಿರ ವರ್ಷಗಳ ಮುಂಚೆ ಇದು ಭಾರತದಲ್ಲಿ ಸಾಕಾರಗೊಂಡಿತ್ತು. "ನ ರಾಜ್ಯಂ ನ ಚ ರಾಜಾऽऽಸೀತ್ ನ ದಂಡ್ಯೋ ನ ಚ ದಾಂಡಿ-ಕಃ । ಧರ್ಮೇಣೈವ ಪ್ರಜಾಸ್ಸರ್ವಾ ರಕ್ಷಂತಿ ಸ್ಮ ಪರಸ್ಪರಮ್॥" (ರಾಜ್ಯ ಇರಲಿಲ್ಲ, ರಾಜನೂ ಇರಲಿಲ್ಲ; ದಂಡಿಸಲ್ಪಡುವವನು ಇರಲಿಲ್ಲ, ದಂಡಿಸುವವನು ಇರಲಿಲ್ಲ. ಧರ್ಮದಿಂದಲೇ ಪ್ರಜೆಗಳೆಲ್ಲರೂ ಪರಸ್ಪರ ರಕ್ಷಿಸಿಕೊಳ್ಳುತ್ತಿದ್ದರು) ಎಂಬ ಪ್ರಸಿದ್ಧ ಶ್ಲೋಕ ಇಲ್ಲಿ ಉಲ್ಲೇಖನಾರ್ಹ. ಪ್ಲೇಟೋನ ಆದರ್ಶ ರಾಜ್ಯವಾಗಲಿ, ಅರಿಸ್ಟಾಟಲ್‌ನ ಉತ್ತಮ ರಾಜ್ಯವಾಗಲಿ ಎಂದೂ ಸಾಕಾರಗೊಳ್ಳಲೇ ಇಲ್ಲ. ಆದರೆ ಸರಕಾರವಿಲ್ಲದೇ ಜನರೆಲ್ಲ ಧರ್ಮದಿಂದ ಜೀವನ ನಡೆಸುತ್ತಿದ್ದರೆಂಬುದು ಕೃತಯುಗದಷ್ಟು ಹಿಂದೆ ಭಾರತದಲ್ಲಿ ಸಂಭವಿಸಿತ್ತು ಎಂದರೆ ನಮ್ಮ ವಿದ್ಯಾರ್ಥಿಗಳು ಯಾವುದನ್ನು ಅಭ್ಯಾಸ ಮಾಡಬೇಕು? ನಮ್ಮಲ್ಲಿ ಸಾಕಾರಗೊಂಡಿದ್ದೋ ಅಥವಾ ಇನ್ನೂ ಕಲ್ಪನೆಯಲ್ಲೇ ಇರುವ ಪಾಶ್ಚಿಮಾತ್ಯರ ಸಿದ್ಧಾಂತಗಳೋ?

ಜಗತ್ತಿನ ವಿವಿಧ ರಾಜಕೀಯ ಚಿಂತನೆಗಳನ್ನು ವಿದ್ಯಾರ್ಥಿಗಳು ಅಭ್ಯಾಸ ಮಾಡಬೇಕು ಎಂಬುದು ಹೊಸ ಪಠ್ಯ ಕ್ರಮದ ಹಿಂದಿನ ಉದ್ದೇಶವಾದರೆ ಕೇವಲ ಪಾಶ್ಚಿಮಾತ್ಯ ಚಿಂತನೆ ಮಾತ್ರ ಯಾಕೆ ಎಂಬ ಪ್ರಶ್ನೆಯನ್ನು ನಾನು ಈ ಲೇಖನದ ಆರಂಭದಲ್ಲಿ ಇಟ್ಟಿದ್ದೇನೆ. ಪೌರ್ವಾತ್ಯ ರಾಷ್ಟ್ರಗಳಾದ ಚೀನಾ, ಜಪಾನ್, ಭಾರತ ಮುಂತಾದ ಎಲ್ಲ ರಾಷ್ಟ್ರಗಳ ರಾಜಕೀಯ ಚಿಂತನೆಗಳನ್ನೂ ಪುಸ್ತಕದಲ್ಲಿ ಉಲ್ಲೇಖಿಸಬಹುದಾಗಿತ್ತು. ಆದರೆ ಹಾಗಾಗಿಲ್ಲ.

ನಾವಿನ್ನೂ ಪಾಶ್ಚಿಮಾತ್ಯರ ಮಾನಸಿಕ ದಾಸ್ಯದಲ್ಲಿದ್ದೇವೆ. ಅದಕ್ಕಾಗಿಯೇ ಸ್ವಾತಂತ್ರ್ಯ ಬಂದು ಆರು ದಶಕಗಳ ಬಳಿಕವೂ 'ರಾಜಕೀಯ ಸಿದ್ಧಾಂತ ಮತ್ತು ಪಾಶ್ಚಿಮಾತ್ಯ ರಾಜಕೀಯ ಚಿಂತನೆ'ಯಂಥ ಪುಸ್ತಕಗಳು ಪಠ್ಯಪುಸ್ತಕಗಳಾಗಿ ವಿದ್ಯಾರ್ಥಿಗಳ ಮಸ್ತಕಗಳೊಳಗೆ ಹೋಗಿ ಕೂಡ್ರುತ್ತವೆ. ನಮ್ಮ ಇತಿಹಾಸವನ್ನು ಕಲಿಸದ, ಬೇರೆಯವರ ಭಜನೆಗೆ ಮೀಸಲಾದ ಇದೆಂಥ ಪಠ್ಯಪುಸ್ತಕ? ಇಂಥ ಪಠ್ಯಕ್ರಮವನ್ನು ತಯಾರಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳು ಪಾಶ್ಚಿಮಾತ್ಯ ವಿಚಾರದ ಮಾನಸಿಕ ದಾಸರಾಗಿದ್ದಾರೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಆದರೆ ಅವರು ದೇಶಕ್ಕೆ ಎಂಥ ಗಂಡಾಂತರವನ್ನು ತರುತ್ತಿದ್ದಾರೆಂದರೆ ಯುವಜನಾಂಗವನ್ನು ರಾಷ್ಟ್ರೀಯತೆಯ ವಿರುದ್ಧ ತಿರುಗಿ ನಿಲ್ಲಿಸುವ ಪ್ರಕ್ರಿಯೆಯಲ್ಲಿ ತೊಡಗಿದ್ದಾರೆ. ಇದರ ಬಗ್ಗೆ ಶಿಕ್ಷಣತಜ್ಞರು, ಸಾಮಾಜಿಕ ಚಿಂತಕರು ಮತು ಸತ್ಯದ ಅನ್ವೇಷಕರು ತೀವ್ರ ಗಮನಹರಿಸಬೇಕಾದ ಅಗತ್ಯವಿದೆ.

(ಸಾಭಾರ : ಸಂಯುಕ್ತ ಕರ್ನಾಟಕ)

* * *

ಮನುಷ್ಯ ಜನ್ಮದ ಉದ್ದೇಶ ಮತ್ತು ಅರ್ಥಜ್ಞಾನದ ಪ್ರಕ್ರಿಯೆ

– *ವಿನೋಬಾ*

ಶತಮಿತ್ತು ಶರದೊ ಅಂತಿ ದೇವಾಃ ಯತ್ರಾ ನಶ್ಚಕ್ರಾ ಜರಸಂ ತನೂನಾಮ್

ಹೇ ದೇವರೇ, ನೀನು ನಮಗೆ ಕೇವಲ ನೂರು ವರ್ಷದ ಆಯುಷ್ಯ ಕೊಟ್ಟಿದ್ದೀಯೆ. ಅದರಲ್ಲೂ ಕೂಡ ನಮ್ಮ ಶರೀರಕ್ಕೆ ವೃದ್ಧಾಪ್ಯ ಬರುತ್ತದೆ. ಆದ್ದರಿಂದ ಆ ಭಾಗವಂತೂ ಕಳದೇ ಹೋಗುತ್ತದೆ. ಕೈಯಲ್ಲಿ ಎಷ್ಟು ಕಡಿಮೆ ಸಮಯ ಉಳಿಯುತ್ತದೆ! ದೇವರು ನಮ್ಮನ್ನು ಈ ಲೋಕಕ್ಕೆ ಮನಷ್ಯನ ರೂಪ ಕೊಟ್ಟು ಕಳುಹಿಸಿದ್ದಾನೆ ಅಂದ ಮೇಲೆ ನಾವು ಸೇವೆ ಮಾಡಬೇಕು. ಯಾರ ಸೇವೆ? ಯಾವುದು ಸ್ಥಿರವಾಗಿದೆಯೋ ಅದರ ಸೇವೆ. ಒಬ್ಬೊಬ್ಬ ಮನುಷ್ಯ ಬರುತ್ತಾನೆ ಮತ್ತು ಒಬ್ಬೊಬ್ಬ ಹೋಗುತ್ತಾನೆ. ಆದರೆ ಸಮಾಜ ನಿರಂತರವಾಗಿದೆ ಹಾಗೂ ಪರಮೇಶ್ವರ ಸತತವಾಗಿದ್ದಾನೆ. ಪರಮೇಶ್ವರ ಮತ್ತು ಅವನ ಪ್ರತಿನಿಧಿ ರೂಪದಲ್ಲಿರುವ ಸಮಾಜ ಈ ಇಬ್ಬರ ಸೇವೆಮಾಡಿ ನಾವು ಬಿಡುಗಡೆ ಹೊಂದಬೇಕಿದೆ.

* * *

ಅದಿತಿರ್ ದ್ಯೌರದಿತಿರಂತರಿಕ್ಷಂ ಅದಿತಿರ್ ಮಾತಾ ಸ ಪಿತಾ ಸ ಪುತ್ರಃ
ವಿಶ್ವೇ ದೇವಾ ಅದಿತಿಃ ಪಂಚಜನಾಃ ಅದಿತಿರ್‌ಜಾತಮದಿತಿರ್ ಜನಿತ್ವಂ

ದಿವ್ಯ ತೇಜಸ್ಸಿನಿಂದ ಜನಮಗಿಸುವ ಪ್ರತಿಭಾ (ದ್ಯೇವಃ), ಚೈತನ್ಯದ ಆಂತರಿಕ ಸ್ಫೂರ್ತಿ (ಅಂತರಕ್ಷಂ), ಚಿಕ್ಕ ದೊಡ್ಡ ಎಲ್ಲರ ಬಗ್ಗೆ ಉದಾರ ಸಮಾನ ವೃತ್ತಿ (ಮಾ–ತಾ), ಜಗತ್ತಿನ ಮೇಲೆ ರಕ್ಷೆಯ ರೆಕ್ಕೆಯನ್ನು ಹರಿ ಬಿಡುವ ವ್ಯಾಪಕ ಪ್ರೇಮ (ಪಿ–ತಾ), ಇಡೀ ಸಂಸಾರವನ್ನು ಸುಖಮಯ ಮಾಡುವಂಥ ಪವಿತ್ರತೆ (ಪು–ತ್ರ), ವಿಶ್ವ–ಸಂಗ್ರಹದ ಶಕ್ತಿ (ವಿಶ್ವೇ–ದೇವಾಃ), ಪಂಚ ವರ್ಣಿಕ ಮಾನವ–ವಂಶದ ಬಗ್ಗೆ ಸಹಾನುಭೂತಿ (ಪಂಚ–ಜನಾಃ), ಭೂತಕಾಲದ ಅನಾದಿ ಸ್ಮರಣೆ (ಜಾತಂ) ಮತ್ತು ಭವಿಷ್ಯ ಕಾಲದ ಅನಂತ ಆಶೆ (ಜನಿತ್ವಂ), ಈ ಎಲ್ಲವೂ ಅದಿತಿಯಲ್ಲಿ ಒಟ್ಟುಗೂಡಿವೆ. (ಅದಿತಿಯ ವಿಶೇಷ ವಿವರಣೆಗಾಗಿ ಉಪನಿಷತ್‌ಗಳ ಅಧ್ಯಾಯ ನೋಡಿರಿ)

* * *

ಚಿತಯಂತಃ ಪರ್ವಣಾಪರ್ವಣಾ ವಯಂ

ಇಂದ್ರನು ಒಂದೊಂದು ಪರ್ವವನ್ನು ಏರುತ್ತಾ ಹೋದ ನಂತರ ನಿಂತು ಬಿಟ್ಟು ಅವನು ಪುನಃ ಚಿಂತನೆ ಮಾಡಿದ ನಂತರ ಅವನಿಗೆ ಅವನ ಕರ್ತವ್ಯ ಸ್ಪಷ್ಟವಾಗಿ ಕಾಣತೊಡಗಿತೆಂಬುದಾಗಿ ಹೇಳಲಾಗಿದೆ. ಒಂದು ಪರ್ವವನ್ನು ಏರಿ ಹೊಸ ಎತ್ತರದಲ್ಲಿ ಅವನು ಪುನಃ ಚಿಂತನೆ ಮಾಡಿದಾಗ ಅವನಿಗೆ ಹೊಸದೇ ಆದ ಅರ್ಥ ಹೊಳೆಯಿತು. ಈ ರೀತಿ ಒಂದೊಂದು ಪರ್ವ ಹತ್ತುತ್ತಾ ಚಿಂತನೆ ಮಾಡಿದಾಗ ಅರ್ಥ ಹೆಚ್ಚು ಹೆಚ್ಚು ಸ್ಪಷ್ಟವಾಗುತ್ತದೆ. ವೇದದಲ್ಲಿ ಅರ್ಥಜ್ಞಾನದ ಈ ಪ್ರಕ್ರಿಯೆಯನ್ನು ಹೇಳಲಾಗಿದೆ.

* * *

ಪ್ರಾಚೀನ ಹಿಂದೂಸ್ತಾನದ ಜನರು ದೂರ ದೂರದ ಯಾತ್ರೆಯನ್ನು ಮಾಡುತ್ತಿದ್ದರು. ಯಾವ ರೀತಿ ಫ್ರೆಂಚರು, ಡಚ್ಚರು ಮತ್ತು ಇಂಗ್ಲೀಷರು ಇಲ್ಲಿಗೆ ಬಂದರೊ ಅದೇ ರೀತಿ

ಆರ್ಯರು ಕೂಡ ದೂರದ ದೇಶಗಳಿಗೆ ಹೋಗಿ ಬರುತ್ತಿದ್ದರು.

ಸ ನಃ ಪರ್ಷದತಿ ದುರ್ಗಾಣಿ ವಿಶ್ವಾ
ನಾ ವೇವ ಸಿಂಧುಂ ದೂರಿತಾತ್ಯಗ್ನಿಃ

ಅಂದರೆ ಹೇ ಅಗ್ನಿ ದೇವ ಯಾವ ರೀತಿ ನೌಕೆಯ ಮೂಲಕ ಸಮುದ್ರವನ್ನು ದಾಟಲಾಗುತ್ತದೋ ಅದೇ ರೀತಿ ನಾವು ಕೂಡ ನಿನ್ನ ಕೃಪೆಯಿಂದ ಪಾಪವನ್ನು ದಾಟುವಂತಾಗಲಿ.

* * *

ಮಾ ನಸ್ತೋಕೆ ತನಯೆ ಮಾ ನ ಆಯೌ ಮಾ ನೊ ಗೋಷು
ಮಾ ನೊ ಅಶ್ವೇಷು ರೀರಿಷಃ।
ವೀರಾನ್ಮಾ ನೊ ರುದ್ರ ಭಾಮಿತೊ ವಧೀಃ ಹವಿಷ್ಮಂತಃ ಸದಮಿತ್
ತ್ವಾ ಹವಾಮಹೇ॥

ಇದು ಸಾಮೂಹಿಕ ಪ್ರಾರ್ಥನೆ. ಕೋಪಗೊಂಡು ವೀರರನ್ನು ವಧಿಸಬೇಡ. ನಾವು ಯಾವಾಗಲೂ ನಿನಗೆ ಹವಿ ಅರ್ಪಿಸುತ್ತೇವೆ. ನಾವು ಎಲ್ಲವನ್ನೂ ನಿನಗೆ ಅರ್ಪಿಸುತ್ತೇವೆ. ನಮ್ಮ ಬಳಿ ಇರುವುದೆಲ್ಲ ನಿನಗೆ ಅರ್ಪಿತವಾಗಿದೆ. ಆದ್ದರಿಂದ ಅದು ಹಾನಿಗೊಳ್ಳುವುದು ನಮಗೆ ಇಷ್ಟವಿಲ್ಲ.

* * *

ಯುವಂ ಚ್ಯವಾನೂ ಮಶ್ವಿನಾ ಜರಂತಂ ಪುನರ್ ಯುವಾನಂ
ಚಕ್ರಥುಃ ಶವೀಭಿಃ

ನಾವು ಯಾರನ್ನು ಚ್ಯವನ ಋಷಿ ಎಂದು ಕರೆಯುತ್ತೇವೋ ಆತನು ಪುನಃ ಯುವಕನಾದನು. ವೈದಿಕ ಋಷಿಗಳು ಚ್ಯವನನ್ನು ಯುವಕನನ್ನಾಗಿ ಮಾಡಿದರು. ವೃದ್ಧರಲ್ಲಿ ಅನುಭವವಿದ್ದರೆ ಯುವಕರಲ್ಲಿ ಪುರುಷಾರ್ಥವಿರುತ್ತದೆ. ವೃದ್ಧರ ಅನುಭವದೊಂದಿಗೆ ಯುವಕರ ಉತ್ಸಾಹ ಮತ್ತು ಶಕ್ತಿ; ಪುರುಷಾರ್ಥ ಮತ್ತು ಶಕ್ತಿ ಕೂಡ ಇರುವಂಥ ವಿಲಕ್ಷಣ ಸಮಾಜವನ್ನು ನಾವು ರಚಿಸಬೇಕಾಗಿದೆ.

* * *

ಅಥ ಸ್ವಪ್ನಸ್ಯ ನಿರ್ವಿದೆ ಅಭುಂ ಜತಶ್ವ ರೇವತಃ
ಉಭಾ ತಾ ಬಸ್ತ್ರಿ ನಶ್ಯತಃ

ನನಗೆ ಸ್ವಪ್ನಗಳ ಬಗ್ಗೆ ಅರುಚಿಯಿದೆ. ಅವು ಭೋಗರಹಿತವಾಗಿರಲೀ ಅಥವಾ ಶ್ರೀಮಂತಯುತವಾಗಿರಲಿ. ಏಕೆಂದರೆ ಸ್ವಪ್ನ ಭೋಗಯುಕ್ತವಾದರೂ ಹೊಟ್ಟೆಗಂತೂ ಅನ್ನ ಸಿಗುವುದಿಲ್ಲ. ಎರಡನೆಯ ಕಾರಣವೇನೆಂದರೆ ಅದು ಒಂದು ಗಳಿಗೆಯಲ್ಲಿ ಮುಗಿದು ಹೋಗುತ್ತದೆ. ಎರಡೂ ಪ್ರಕಾರದ ಸ್ವಪ್ನಗಳು ಶೀಘ್ರವಾಗಿ ಮುಕ್ತಾಯವಾಗುತ್ತವೆ.

* * *

ಅ ವೋ ರೂವಣ್ಯುಮೌಶಿಜು ಹುವ ಥೈ
ಗೋಷೇವ ಶಂಸುಮರ್ಜನಸ್ಯ

ದೇವರೆ! ನಾನು ನಿನ್ನ ಎದಿರು ನನ್ನ ದುಃಖವನ್ನು ತೋಡಿಕೊಳ್ಳುತ್ತಿದ್ದೇನೆ. ನನಗಾಗಿ ಓಡಿ ಬಾ. ಆ ಬ್ರಹ್ಮವಾದಿನಿ ಘೋಷಾ ತನ್ನ ಕುಷ್ಠರೋಗದ ನಿವಾರಣೆಗಾಗಿ ಯಾವ ಪ್ರಕಾರ ನಿನ್ನನ್ನು ಕರುಣೆಗಾಗಿ ಕೂಗುತ್ತಿದ್ದಳೊ ಮತ್ತು ನೀನು ಅವಳ ಮೇಲೆ ಕೃಪೆ ಮಾಡಿದೆಯೋ ಅದೇ ರೀತಿ ನನ್ನ ಮೇಲೂ ಕೂಡ ಕೃಪೆ ಮಾಡು.

(ಮುಂದುವರಿಯುವುದು...)

ಆರು ಪ್ರಶ್ನೆಗಳು : ನಾಗರಿಕ ಹಕ್ಕು ಕುರಿತು

– ಉತ್ತರಿಸಿದವರು : ಬಾಲಗೋಪಾಲ್ ; ಕನ್ನಡಕ್ಕೆ: ಎ.ಎಸ್.ಶ್ರೀಧರ್

ಪ್ರ : ನಾಗರಿಕ ಹಕ್ಕು ಚಳುವಳಿಗಳು ಎಂಥಾ ಸಂದರ್ಭದಲ್ಲಿ ಹುಟ್ಟಿಕೊಳ್ಳುತ್ತವೆ?

ಬಾ : ಪ್ರಪಂಚದ ಎಲ್ಲ ಕಡೆ ನಾಗರಿಕ ಹಕ್ಕು ಚಳುವಳಿಗಳು ಹುಟ್ಟಿಕೊಂಡಿರುವುದು ಸರ್ಕಾರಗಳು ಜನಾಂದೋಲನಗಳನ್ನು ಹತ್ತಿಕ್ಕಿದಾಗ, ಅಮೇರಿಕಾದಲ್ಲಿ ೨೦ ನೇ ಶತಮಾನದ ಎರಡನೇ ದಶಕದಲ್ಲಿ ಸರ್ಕಾರ ಕಮ್ಯುನಿಸ್ಟರನ್ನು ಬೇಟೆಯಾಡಿ, ರಾಜದ್ರೋಹದ ಆಪಾದನೆಯನ್ನು ಹೊರಿಸಿ ಜೈಲಿಗೆ ತಳ್ಳಿದಾಗ ಅದು ಹುಟ್ಟಿಕೊಂಡಿತು. ಬ್ರಿಟನ್‌ನಲ್ಲಿ, ನಿರುದ್ಯೋಗದ ವಿರುದ್ಧ ೧೯೩೦ರಲ್ಲಿ ಬಂಡೆದ್ದ ಜನರನ್ನು ಸರ್ಕಾರ ಬರ್ಬರವಾಗಿ ದಮನಕ್ಕೆ ಗುರಿಮಾಡಿದಾಗ 'ರಾಷ್ಟ್ರೀಯ ನಾಗರಿಕ ಹಕ್ಕು ಸಂಘ' ಜನ್ಮತಾಳಿತು. ಚೀನಾದಲ್ಲಿ 'ನಾಗರಿಕ ಹಕ್ಕುಗಳ ಲೀಗ್' ಅಸ್ತಿತ್ವಕ್ಕೆ ಬಂದಿದ್ದು ಶಾಂಘಾಯ್ ದಂಗೆಯ ನಂತರ, ಚಿಯಾಂಗ್-ಕಾಯ್-ಶೆಕ್ ಸರ್ಕಾರ ಕಮ್ಯುನಿಸ್ಟರನ್ನೂ ಮತ್ತು ಆ ಸಿದ್ಧಾಂತದ ಬಗ್ಗೆ ಒಲವಿದ್ದವರನ್ನೂ ಸಾಮೂಹಿಕವಾಗಿ ಹತ್ಯೆಗೈದಾಗ.

ಭಾರತದಲ್ಲಿ ಸ್ವತಂತ್ರ ಚಳುವಳಿಗಾರರ ಮೇಲೆ ಬ್ರಿಟಿಷ್ ವಸಾಹತು ಸರ್ಕಾರ ದೌರ್ಜನ್ಯವೆಸಗಿ, ಜೈಲಿಗೆ ಕಳುಹಿಸಲು ಮುಂದಾದಾಗ ೧೯೩೬ರಲ್ಲಿ 'ಭಾರತ ನಾಗರಿಕ ಹಕ್ಕು ಸಂಘ' ಪ್ರಾರಂಭವಾಯಿತು.

ಹೀಗೆ ನಾಗರಿಕ ಹಕ್ಕುಗಳ ಸಂಘಟನೆಗಳು ವಸಾಹತು ಮತ್ತು ಬಂಡವಾಳಶಾಹಿ ದೇಶಗಳಲ್ಲಿ ಮಾತ್ರವಲ್ಲದೆ, ಕಮ್ಯುನಿಸ್ಟ್ ಮತ್ತು ಸಮಾಜವಾದಿ ದೇಶಗಳಲ್ಲೂ, ಸರ್ಕಾರಗಳು ಜನಾಂದೋಲನಗಳನ್ನು ಹತ್ತಿಕ್ಕಿದಾಗಲೆಲ್ಲಾ ಹುಟ್ಟಿಕೊಂಡಿವೆ. ಆಳುವ ಪಕ್ಷದ ಜತೆ ಭಿನ್ನಮತವನ್ನು ಹೊಂದಿರುವ ಹಕ್ಕನ್ನೇ ಸರ್ಕಾರಗಳು ಕಸಿದುಕೊಂಡಾಗ, ಭಿನ್ನಮತವನ್ನೇ ಪ್ರತಿಭಟನೆ ಎಂದು ಬಗೆದು ಅಂಥವರ ಮೇಲೆ ಹರಿಹಾಯ್ದಾಗ, ಪ್ರಭಾವಶಾಲಿ ನಾಗರಿಕ ಹಕ್ಕುಗಳ ಸಂಘಗಳು ರೂಪುಗೊಂಡಿವೆ. ಜೆಕೋಸ್ಲೋವೆಕಿಯಾದಂಥ ಸಮಾಜವಾದಿ ರಾಷ್ಟ್ರಗಳಲ್ಲಿ ನಾಗರಿಕ ಹಕ್ಕು ಸಂಘಟನೆಗಳು ಹುಟ್ಟಿಕೊಂಡಿದ್ದು ಹೀಗೆ.

ಭಾರತದಲ್ಲಿ ಪ್ರಜಾತಾಂತ್ರಿಕ, ನಾಗರಿಕ ಹಕ್ಕುಗಳ ಚಳುವಳಿಗೆ ಎರಡು ಚಾರಿತ್ರಿಕ ನೆಲೆಗಳಿವೆ. ಒಂದು ಸ್ವಾತಂತ್ರದ ನಂತರ, ನಿರ್ದಿಷ್ಟವಾಗಿ ೧೯೬೮ರ ನಂತರ ಭಾರತದ ನಾನಾ ಪ್ರದೇಶಗಳಲ್ಲಿ ಹುಟ್ಟಿಕೊಂಡ ಕಮ್ಯುನಿಸ್ಟ್ ಚಳುವಳಿಗಳನ್ನು ಭಾರತದ ಸರ್ಕಾರ ಹತ್ತಿಕ್ಕಲು ಪ್ರಾರಂಭಿಸಿದ್ದು. ಮತ್ತೊಂದು ೧೯೭೦ರ ಜೆ.ಪಿ. ಚಳುವಳಿಯಲ್ಲಿ ತೊಡಗಿದ್ದ ವಿದ್ಯಾರ್ಥಿ-ಯುವಕರನ್ನು ಸರ್ಕಾರ ದಮನ ಮಾಡಿದ್ದು. ಪಶ್ಚಿಮ ಬಂಗಾಳದ ಎ.ಪಿ.ಡಿ.ಆರ್, ಆಂಧ್ರದ ಎ.ಪಿ.ಸಿ.ಎಲ್.ಸಿ ಮತ್ತು ಒ.ಪಿ.ಡಿ.ಆರ್. ಹಾಗೂ ಮಹಾರಾಷ್ಟ್ರದ ಮುಂಬೈ, ನಾಗಪುರ ಮತ್ತು ಚಂದ್ರಾಪುರಗಳಲ್ಲಿ ಸಕ್ರಿಯವಾಗಿರುವ ಸಿ.ಪಿ.ಡಿ.ಆರ್. ಇವು ಅಸ್ತಿತ್ವಕ್ಕೆ ಬಂದಿದ್ದು ಮೊದಲನೆಯ ಸಂಧರ್ಭದಲ್ಲಿ. ಎರಡನೆಯ ಸಂದರ್ಭ ಪಿ.ಯು.ಸಿ.ಎಲ್. ಹುಟ್ಟಿಗೆ ಕಾರಣವಾಯಿತು. ಈ ನೆಲೆಗಳು ನಾಗರಿಕ ಸಂಘಟನೆಗಳು ಹುಟ್ಟಿಕೊಳ್ಳುವುದರ ಹಿಂದಿನ ಪ್ರೇರಣೆಗಳನ್ನು ಸೂಚಿಸುತ್ತದೆ. ಆದರೆ ಈ ಸಂಘಟನೆಗಳು ತಮ್ಮ ಚಾರಿತ್ರಿಕ ಸಂದರ್ಭಗಳಿಗೆ ಮಾತ್ರ ಸೀಮಿತವಾಗಿಲ್ಲ. ನಾಗರಿಕ ಹಕ್ಕುಗಳ ಸಿದ್ಧಾಂತ ಮತ್ತು ಚಳುವಳಿಗಳ ಬಗ್ಗೆ ವಿವಿಧ ರೀತಿಯ ವ್ಯಾಖ್ಯಾನಗಳಿವೆ; ಚರ್ಚೆಗಳಿವೆ. ಅವುಗಳ ಹಿಂದಿನ ಸಾಮಾನ್ಯ ಕಾಳಜಿಯನ್ನು

ಗುರುತಿಸಲು ನಾನು ಪ್ರಯತ್ನಿಸುತ್ತಿದ್ದೇನೆ.

ದಮನಿತರನ್ನು ಸಂಘಟಿಸಿ ಹೋರಾಟಕ್ಕೆ ಅಣಿಮಾಡುವ ಜನಾಂದೋಲನಗಳು ಮಧ್ಯಮ ವರ್ಗದ ಬುದ್ಧಜೀವಿಗಳ ಬೆಂಬಲ ಅನುಕಂಪಗಳಿಸಿಕೊಳ್ಳುತ್ತವೆ. ಈ ಚಳುವಳಿಗಳ ಹಿಂದಿನ ಸಿದ್ಧಾಂತವನ್ನು ಒಪ್ಪದಿದ್ದರೂ ಅವುಗಳು ಎತ್ತಿರುವ ಕೆಲವು ನ್ಯಾಯಯುತ ಪ್ರಶ್ನೆಗಳ ಬಗ್ಗೆ ಸಹಾನುಭೂತಿ ಇರುತ್ತದೆ. ಅದರಲ್ಲೂ ಸರ್ಕಾರ ಚಳುವಳಿಗಾರರನ್ನು ಹತ್ತಿಕ್ಕುತ್ತಾ, ತನ್ನ ದಮನಕಾರಿ ಚಟುವಟಿಕೆಗಳಿಗೆ ನ್ಯಾಯಾಂಗದ ಮುದ್ರೆಯನ್ನು ಪಡೆದುಕೊಂಡಾಗ, ಚಳುವಳಿಗಳ ಬೆಂಬಲಕ್ಕೆ ನಿಲ್ಲುವುದು ಹೆಚ್ಚಾಗುತ್ತದೆ. ಅನೇಕ ಬಾರಿ ಇಂಥ ಚಳುವಳಿಗಳನ್ನು ಒಂದು ರಾಜಕೀಯ ಆಂದೋಲನವೆಂದು ಪರಿಗಣಿಸದೆ, ಅವುಗಳನ್ನು ವಿಚ್ಛಿದ್ರಕಾರಿ ಶಕ್ತಿಗಳೆಂದು ದೂರುವುದರ ಮೂಲಕ, ಜನಗಳ ರಾಜಕೀಯ ಹಕ್ಕುಗಳನ್ನೇ ಸರ್ಕಾರಗಳು ಮೊಟಕುಗೊಳಿಸಿ ಬಿಡುತ್ತವೆ. ಜನರು ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಪ್ರತಿಭಟನೆಗೆ ಇಳಿದಾಗ ಪ್ರತಿಭಟನೆಗಳು ಪ್ರಜಾತಾಂತ್ರಿಕ ಹಕ್ಕು ಎಂಬುದನ್ನು ಮರೆಯುತ್ತವೆ. ಇಂತಹ ಸಂದರ್ಭದಲ್ಲಿ ನಾಗರಿಕ ಹಕ್ಕು ಸಂರಕ್ಷಣಾ ಸಂಘಟನೆಗಳು ಸ್ಥಾಪಿತವಾಗುತ್ತವೆ.

ಪ್ರ : ನಾಗರಿಕ ಹಕ್ಕು ಚಳುವಳಿಗಳಿಗೂ ಇತರ ಜನಾಂದೋಲನಗಳಿಗೂ ಇರುವ ವ್ಯತ್ಯಾಸಗಳೇನು?

ಬಾ : ಇವೆರಡರ ನಡುವೆ ಆತ್ಮೀಯ ಸಂಬಂಧಗಳು ಇರುತ್ತವೆ. ಜನಾಂದೋಲನಗಳು ತಮ್ಮ ಪ್ರತಿಭಟನೆಯನ್ನು ಮಾಡುವಂಥ ಪ್ರಜಾತಾಂತ್ರಿಕ ಪರಿಸರದ ನಿರ್ಮಾಣ ಮಾಡುವುದನ್ನು ಒಂದು ಕಾಲದಲ್ಲಿ ಹಕ್ಕು ಸಂಘಟನೆಗಳ ಆದ್ಯಕರ್ತವ್ಯ ಎಂದು ಭಾವಿಸಲಾಗಿತ್ತು. ಈಗ ಅವುಗಳ ಜವಾಬ್ದಾರಿ ಇನ್ನೂ ಹೆಚ್ಚಿವೆ.

ಚಳುವಳಿಗಳ ಮೂಲಕ ಜನಸಮುದಾಯಗಳು ತಮ್ಮ ಹಕ್ಕುಗಳನ್ನು ಸ್ಥಾಪಿಸಿಕೊಂಡಿರುವುದನ್ನು ಚರಿತ್ರೆಯ ಉದ್ದಕ್ಕೂ ನೋಡಬಹುದು. ಮೊದಲು ಇವು ಅಸಂಘಟಿತ ಕಾರ್ಯಕ್ರಮಗಳಾಗಿದ್ದರೆ, ಈಗ ಅವು ಹೆಚ್ಚು ಸುಸಂಘಟಿತ ಚಳುವಳಿಗಳ ಮೂಲಕ ಪ್ರಕಟವಾಗುತ್ತಿವೆ. ಒಟ್ಟಿನಲ್ಲಿ ಹೋರಾಟವಿಲ್ಲದೆ ಹಕ್ಕುಗಳಿರುವುದಿಲ್ಲ. ಆದರೆ ಕಾಲ ಕ್ರಮೇಣ ಈ ಹಕ್ಕುಗಳು ಸಾಸ್ಥೀಕರಣಕ್ಕೆ ಒಳಗಾಗಿ ಆಡಳಿತ ವ್ಯವಸ್ಥೆಯ ಭಾಗವಾಗಿ ಬಿಡುತ್ತಿವೆ. ಹಕ್ಕುಗಳು ತಮ್ಮ ಮೊನಚನ್ನೂ, ಮೂಲ ಉದ್ದೇಶವನ್ನೂ ಕಳೆದುಕೊಳ್ಳುತ್ತವೆ. ಸಮಾಜದಲ್ಲಿ ಘರ್ಷಣೆ ಹೆಚ್ಚಾಗುತ್ತಿದ್ದಂತೆ, ಈ ಸ್ಥಾಪಿತ ಹಕ್ಕುಗಳಿಗೆ ಬೆಲೆಯೇ ಇಲ್ಲದಂತಾಗುತ್ತದೆ. ಮಾನವ ಹಕ್ಕು ಸಂಘಗಳು ಮುಖ್ಯವಾಗುವುದು ಇಲ್ಲಿ; ಹೋರಾಟದಿಂದ ಸಮುದಾಯಗಳು ಗಳಿಸಿಕೊಂಡಿರುವ ಹಕ್ಕುಗಳು ನಿಜಜೀವನದ ಆಚರಣೆಯಿಂದ ಕಣ್ಮರೆಯಾದಾಗ ಸ್ಥಾಪಿತ ಹಕ್ಕುಗಳ ಕ್ರಮಬದ್ಧ ಆಚರಣೆ, ಈ ಹಕ್ಕುಗಳ ಹಿಂದಿನ ಹೋರಾಟದ ಇತಿಹಾಸವನ್ನು ನೆನೆಪಿಸುವ ಕೆಲವು ಮತ್ತು ಬದಲಾದ ಸಮಾಜದ ಹೊಸ ಹಕ್ಕುಗಳಿಗಾಗಿ ಬೇಡಿಕೆ ಇವು ಮಾನವ ಹಕ್ಕು ಸಂಘಟನೆಗಳ ನಿರಂತರ ಗುರಿ ಮತ್ತು ಜವಾಬ್ದಾರಿ.

ಈ ಗುರಿ ಸಾಧಿಸಬೇಕಾದಲ್ಲಿ ಹಕ್ಕು ಸಂಘಟನೆಗಳು ಜನಾಂದೋಲಗಳನ್ನು ಬೆಂಬಲಿಸುವುದು ಅಗತ್ಯ. ಆದರೆ ಅವುಗಳ ಉದ್ದೇಶ ಇಷ್ಟೇ ಅಲ್ಲ; ಅವುಗಳು ತಮ್ಮದೇ ಕ್ರಿಯಾ ಯೋಜನೆಗಳನ್ನು ಹೊಂದಿರಬೇಕು. ಇದನ್ನು ಬೇಕಾದರೆ ಹಿಂರಕ್ಷಣೆಯ ಕೆಲಸ ಎನ್ನಬಹುದು.

ಇಷ್ಟಾದರೂ ಒಂದು ಪ್ರಶ್ನೆ ಉಳಿಯುತ್ತದೆ. ಸಧ್ಯಕ್ಕೆ ಹಕ್ಕು ಸಂಘಟನೆಗಳು ಮಧ್ಯಮವರ್ಗದ ಬುದ್ಧಿಜೀವಿಗಳಿಗೇ ಸೀಮಿತವಾಗಿವೆ. ಹಕ್ಕು ಸಂಘಟನೆಗಳು ಪ್ರಜಾ ಚಳುವಳಿಯಾಗಬಹುದೇ? ಸದ್ಯದ ಆರ್ಥಿಕ, ಸಾಮಾಜಿಕ ಗುರಿಗಳನ್ನು ಹೊಂದದ ಯಾವ

ಆಂದೋಲನವೂ ಒಂದು ವಿಶಾಲ ತಳಹದಿಯ ಪ್ರಜಾ ಚಳುವಳಿಯಾಗುವುದು ಅಸಾಧ್ಯ. ರೈತರು, ಕಾರ್ಮಿಕರು, ಇತರ ದಮನಿತ ಸಮುದಾಯಗಳ ಆರ್ಥಿಕ ರಾಜಕೀಯ ಹೋರಾಟ ಕೂಡಾ ನಾಗರಿಕ ಹಕ್ಕಿಗಾಗಿ ಮಾಡುವ ಹೋರಾಟವೇ ಆಗಿರುತ್ತದೆ. ಇಂಥಾ ಹೋರಾಟಗಳು ನೇರ ಆರ್ಥಿಕ, ಸಾಮಾಜಿಕ ಗುರಿಗಳಿಲ್ಲದ, ಕೇವಲ ನಾಗರಿಕ ಹಕ್ಕುಗಳ ಹೋರಾಟ ಮಾತ್ರವಾಗಲು ಸಾದ್ಯವೇ? ಬಹುಷಃ ಇಲ್ಲ. ಆದರೆ ಈ ಪ್ರಶ್ನೆಯ ಇನ್ನಷ್ಟು ಆಳವಾದ ಚರ್ಚೆ ಅಗತ್ಯ.

ಪ್ರ : ರಾಜಕೀಯ ಸಮಾಜಿಕ ಹೋರಾಟಗಳನ್ನು ಬೆಂಬಲಿಸುವಾಗ, ಹಕ್ಕು ಸಂಘಟನೆಗಳು ಎದುರಿಸುವ ಸಮಸ್ಯೆಗಳೇನು? ಇದರ ಜತೆಯಿದ್ದು ನಾಗರಿಕ ಹಕ್ಕು ಹೋರಾಟ ಒಂದು ಸ್ವತಂತ್ರ ಚಳುವಳಿಯಾಗಿ ಬೆಳೆಯಲು ಸಾಧ್ಯವಿಲ್ಲವೆ?

ಬಾ : ಅನೇಕ ಸಮಸ್ಯೆಗಳಿವೆ. ಕಾನೂನಿನ ಚೌಕಟ್ಟಿನೊಳಗೇ ಕೆಲಸ ಮಾಡುತ್ತಿದ್ದರೂ, ಹಕ್ಕು ಸಂಘಟನೆಗಳ ಕಾರ್ಯಕರ್ತರ ಮೇಲೆ ಸರ್ಕಾರದ ಕೆಂಗಣ್ಣು ಇದ್ದೇ ಇರುತ್ತದೆ. ಅವರನ್ನು ದಮನಿಸಲು ಸರ್ಕಾರ ಹೇಸುವುದಿಲ್ಲ. ಇದು ಆಂಧ್ರದಲ್ಲಿ ಹೆಚ್ಚು. ಪಂಜಾಬ್, ಕಾಶ್ಮೀರ, ಅಸ್ಸಾಂಗಳಿರಲಿ, ನಾಗಾಲ್ಯಾಂಡ್ ಅಂಥ ಕಡೆ ಕೂಡ ಹೋರಾಟಗಾರರನ್ನು ಪೋಲೀಸರು ಕೊಂದಿಲ್ಲ. ಆದರೆ ಇದು ಆಂಧ್ರದಲ್ಲಿ ನಡೆದಿದೆ. ನಾಸಾ, ಟಾಡಾ ಕಾನೂನಿನಡಿ ಅವರನ್ನ ಬಂಧಿಸಲಾಗಿದೆ.

ನೇರ ದೈಹಿಕ ದಮನವಲ್ಲದೆ, ಮಾನಸಿಕ ಒತ್ತಡವನ್ನು ಕೂಡ ಹಕ್ಕು ಕಾರ್ಯಕರ್ತರು ಎದುರಿಸಬೇಕಾಗಿದೆ. ಸರ್ಕಾರಗಳ ಜತೆ, ಮಾಧ್ಯಮ, ಗೆಳೆಯರ ಬಳಗ, ಸಹೋದ್ಯೋಗಿಗಳ ಹಾಗೂ ಮನೆಯವರ ಒತ್ತಡವೂ ಇರುತ್ತದೆ. ನೀವೇ ಯಾಕೆ ತೊಂದರೆಯನ್ನು ಮೈಮೇಲೆ ಎಳೆದುಕೊಳ್ಳಬೇಕು, ನಿಮ್ಮಂಥ ಕೆಲವರಿಂದ ಸಮಾಜದ ಬದಲಾವಣೆ ಸಾಧ್ಯವೇ? ಹೀಗೆ ನಿರಾಶೆ ಮತ್ತು ನಿರುತ್ಸಾಹದ ವಾತಾವರಣದಲ್ಲಿ ಹಕ್ಕು ಕಾರ್ಯಕರ್ತರು ತಮ್ಮ ಕೆಲಸಮಾಡಬೇಕಾಗಿದೆ. ಪ್ರಜಾಪ್ರಭುತ್ವ ಇರಲಿ ನೀವು ಬೆಂಬಲಿಸುವ ಸಮಾಜವಾದಿ ರಾಷ್ಟ್ರಗಳಲ್ಲೂ ಹಕ್ಕುಗಳ ಉಲ್ಲಂಘನೆ ಆಗಿಲ್ಲವೆ? ಇತ್ಯಾದಿ ಪ್ರಶ್ನೆಗಳನ್ನು ಸದಾ ಎದುರಿಸಬೇಕಾಗುತ್ತದೆ.

ಇದು ಚಳುವಳಿಯಲ್ಲಿ ತೊಡಗಿರುವವರೆಲ್ಲರೂ ಎದುರಿಸಬೇಕಾದ ಪ್ರಶ್ನೆಯೇ ಆದರೂ, ಹಕ್ಕು ಕಾರ್ಯಕರ್ತರಿಗೆ ಒಂದು ವಿಶೇಷ ಸಮಸ್ಯೆ ಇದೆ. ಅದೆಂದರೆ ಹಕ್ಕು ಕಾರ್ಯಕರ್ತರಿಗೆ ಯಾವುದೇ ತತ್‌ಕ್ಷಣದ ಆರ್ಥಿಕ ಸಾಮಾಜಿಕ ಪ್ರತಿಫಲ ಇಲ್ಲದಿರುವುದು. ಹೀಗಾಗಿ ಇದರಲ್ಲಿ ತೊಡಗಿಸಿಕೊಳ್ಳುವವರ ಸಂಖ್ಯೆ ಕಡಿಮೆ. ಜತೆಗೆ, ಸದ್ಯದ ರಾಜಕೀಯ ಸಾಮಾಜಿಕ ಚಳುವಳಿಗಳನ್ನು ಬೆಂಬಲಿಸುವುದಲ್ಲದೆ ಹಕ್ಕು ಸಂಘಟನೆಗಳಿಗೆ ತಮ್ಮದೇ ಕಾರ್ಯಸೂಚಿ ಇಲ್ಲ ಎಂದು ಅನೇಕರು ಭಾವಿಸಿರುವುದೂ ಕೂಡ ಹಕ್ಕು ಚಳುವಳಿ ಜನಪ್ರಿಯವಾಗದೇ ಇರುವುದಕ್ಕೆ ಕಾರಣವಿರಬಹುದು. ಯಾವುದೇ ಚಳುವಳಿ ಬೆಳೆಯಲು, ಗಟ್ಟಿಯಾಗಲು ತನ್ನ ಪ್ರಾಮುಖ್ಯತೆ ಬಗ್ಗೆ ಅದಕ್ಕೆ ಆತ್ಮ ವಿಶ್ವಾಸ, ನಂಬಿಕೆ ಇರಬೇಕು, ಎಲ್ಲಿಯವರೆಗೆ ಜನರಿಗೆ ನಿಜವಾದ ಹೋರಾಟ ಬೇರೆ ಎಲ್ಲೊ ಇದೆ, ಇದು ಕೇವಲ ಹೊರಗಿನಿಂದ ಬೆಂಬಲ ನೀಡುವ ಕೆಲಸ ಅನ್ನಿಸುತ್ತದೆಯೋ ಅಲ್ಲಿಯವರೆಗೆ ಹಕ್ಕು ಸಂಘಟನೆಗಳಿಗೆ ಪ್ರಾಮುಖ್ಯತೆ ಬರಲಾರದು.

ಅಷ್ಟೇ ಅಲ್ಲ. ಜನಗಳ ಹೋರಾಟಗಳಿಗೆ ಬೆಂಬಲ ಸೂಚಿಸುವ ಸಂಘಟನೆ ಎಂದುಕೊಂಡರೆ ಹಲವಾರು ಪ್ರಶ್ನೆಗಳು ತಲೆ ಎತ್ತುತ್ತವೆ. ತಮಗೆ ಸಹಾನುಭೂತಿಯಿರುವ ಚಳುವಳಿಗಳನ್ನು ಮಾತ್ರ ಹಕ್ಕು ಕಾರ್ಯಕರ್ತರು ಬೆಂಬಲಿಸುತ್ತಾರೆ ಎಂಬ ಆಪಾದನೆಯೇ

ಅಲ್ಲದೆ, ಎಲ್ಲಿ ಹಕ್ಕುಗಳು ವಿಪರೀತ ದಮನಕ್ಕೆ ಗುರಿಯಾಗಿದೆಯೋ ಅಲ್ಲಿಗೆ ಮಾತ್ರ ಇವರು ಧಾವಿಸುತ್ತಾರೆ ಎನ್ನುವ ವಿಮರ್ಶೆಯೂ ಏಳುತ್ತದೆ. ಇದರಿಂದ ಕೆಲವು ಚಳುವಳಿಗಳ ಬಗ್ಗೆ ಸಹಾನುಭೂತಿ ಇಲ್ಲದವರು ಹಕ್ಕು ಸಂಘಟನೆಗಳ ಜತೆ ಕೈಗೂಡಿಸಲು ಹಿಂದೇಟು ಹಾಕುತ್ತಾರೆ. ಇದು ಹಕ್ಕು ಚಳುವಳಿ ಬೆಳೆಯಲು ಇರುವ ಮುಖ್ಯ ತೊಡುಕು. ಹೀಗಾಗಿ ಕ್ರಾಂತಿಕಾರಿ ಹೋರಾಟಗಳು, ಸ್ವಾವಲಂಬನೆಗೆ ಹೋರಾಡುತ್ತಿರುವ ಕಾಶ್ಮೀರ, ಈಶಾನ್ಯ ಪ್ರದೇಶಗಳ ಚಳುವಳಿಗಳನ್ನು ಬೆಂಬಲಿಸುವುದು ಒಂದು ಆಘಾತಕಾರಿ ಕೆಲಸವೆಂಬಂತೆ ಬಹುತೇಕರಿಗೆ ತೋರುತ್ತದೆ. ಪಿ.ಯು.ಸಿ.ಎಲ್ ನ ಆರಂಭದಲ್ಲಿ ಅದರೊಂದಿಗೆ ಗುರುತಿಸಿಕೊಂಡಿದ್ದವರಲ್ಲಿ ಬಹಳಷ್ಟು ಜನ ಕಾಂಗ್ರೆಸ್ ವಿರೋಧಿಗಳೇ. ಕಾಂಗ್ರೆಸ್ ಸೋತು ಜನತಾ ಪಕ್ಷ ಅಧಿಕಾರಕ್ಕೆ ಬಂದಾಗ ಇವರಿಗೆ ಈ ಸಂಘಟನೆ ಅನಗತ್ಯವಾಗಿ ಕಂಡಿತು. ಈ ಅನುಮಾನ ಈ ಹೊತ್ತು ಇಲ್ಲದಿದ್ದರೂ, ಹಕ್ಕು ಹೋರಾಟಗಳಲ್ಲಿ ತೊಡಗಿಕೊಂಡವರಲ್ಲಿ ಹೆಚ್ಚಿನವರು ವಿವಿಧ ರಾಜಕೀಯ ಚಳುವಳಿಗಳಿಂದ ಪ್ರೇರೇಪಿತರಾದವರು ವಿರಳ. ಇದು ಹೋಗಬೇಕಾದರೆ ಹಕ್ಕುಗಳ ಚಳುವಳಿಯ ರೂಪ-ರೇಷೆ, ಗುರಿ-ಉದ್ದೇಶಗಳ ಬಗ್ಗೆ ಹೆಚ್ಚು ಚರ್ಚೆ ನಡೆಯಬೇಕು. ಸರ್ಕಾರ ಹುಟ್ಟಿಸುವ ಭಯ, ಅನುಮಾನಗಳ ವಿರುದ್ಧ ನಿಲ್ಲುವ ಧೈರ್ಯದ ವಾತಾವರಣ ಮೂಡಬೇಕು. ಹಕ್ಕು ಸಂಘಟನೆಗಳ ಕಾರ್ಯಕರ್ತರು ನಕ್ಸಲೀಯರೂ ಅಲ್ಲ. ಬೇರೆ ಯಾವುದೋ ಚಳುವಳಿಗಳಲ್ಲಿರುವ ಹೋರಾಟಗಾರರೂ ಅಲ್ಲ. ಅದು ತನ್ನದೇ ಆದ ಸಿದ್ಧಾಂತ ಚೌಕಟ್ಟಿನಲ್ಲಿ ಕೆಲಸಮಾಡುವ ಸ್ವತಂತ್ರ ಸಂಘಟನೆ ಎನ್ನುವ ವಿಶ್ವಾಸ ಜನರಲ್ಲಿ ಮೂಡಬೇಕು. ಇಲ್ಲಿ ಸರ್ಕಾರದ ನಿಲುವಿಗಿಂತಲೂ, ಸಾಮಾನ್ಯ ಜನಾಭಿಪ್ರಾಯದ ಬದಲಾವಣೆ ಮುಖ್ಯ.

ಪ್ರ : ಹಕ್ಕು ಸಂಘಟನೆಗಳು ನಕ್ಸಲ್ ಬೆಂಬಲಿಗರು ಎನ್ನುವುದನ್ನು ಕುರಿತು...

ಬಾ : ಈ ದೇಶದ ಎಲ್ಲಾ ರಾಜಕೀಯ ಪಕ್ಷಗಳೂ, ನಕ್ಸಲರನ್ನು ಅವರು ಕೆಲವು ಮೂಲಭೂತ ಪ್ರಶ್ನೆಗಳನ್ನು ಎತ್ತಿರುವುದರಿಂದ, ತಮ್ಮ ಶತ್ರುಗಳೆಂದೇ ಭಾವಿಸುತ್ತವೆ. ಅವರನ್ನು ಸದ್ದಿಲ್ಲದೆ ಮುಗಿಸುವ ಪ್ರಯತ್ನ ಮಾಡುತ್ತವೆ. ಈ ಬಗ್ಗೆ ಗದ್ದಲ ಎಬ್ಬಿಸುವುದು ಹಕ್ಕು ಸಂಘಟನೆಗಳೇ. ಆದ್ದರಿಂದ ಎಲ್ಲಾ ಪಕ್ಷಗಳ ಕೆಂಗಣ್ಣು ಹಕ್ಕು ಕಾರ್ಯಕರ್ತರ ಮೇಲೇ ಬೀಳುತ್ತದೆ. ಇವರಿಂದ ಯಾವುದೇ ಸಹಾನುಭೂತಿ ಅಪೇಕ್ಷಿಸುವುದು ನಿರರ್ಥಕ. ಇಂಥಾ ಪ್ರಚಾರಕ್ಕೆ ಮಾಧ್ಯಮಗಳು ಮತ್ತು ಬುದ್ಧಿಜೀವಿ ಮಧ್ಯಮವರ್ಗ ಸಹ ಪಕ್ಕಾಗಿ ಬಿಟ್ಟಿವೆ. ಇದಕ್ಕೆ ಕೆಲವು ಹಕ್ಕು ಸಂಘಟನೆಗಳೂ ಕಾರಣ. ಏಕೆಂದರೆ ಒಂದು ಸ್ವತಂತ್ರವಾದ, ತಮ್ಮದೇ ಸಿದ್ಧಾಂತ ಮತ್ತು ಕಾರ್ಯಸೂಚಿಗಳ ತಳಹದಿ ಮೇಲೆ ಹಕ್ಕು ಸಂಘಟನೆಗಳನ್ನು ಕಟ್ಟುವುದರ ಬದಲು, ಕ್ರಾಂತಿಕಾರಿ ಜನ ಸಂಘಟನೆಗಳ ಮುಂದುವರೆದ ಭಾಗವಾಗಿ ಇವರು ವರ್ತಿಸುತ್ತಾರೆ. ಹೀಗೆ ಹೇಳಿದ ಕೂಡಲೇ ಇನ್ನೊಂದು ಮಾತನ್ನೂ ಸೇರಿಸಲೇಬೇಕು. ಹಕ್ಕು ಸಂಘಟನೆಗಳು ಒಂದು ಸ್ವತಂತ್ರ ಸಿದ್ಧಾಂತದ ಮೇಲೆ ಕೆಲಸಮಾಡುವ ಸಂಸ್ಥೆ ಎಂದು ಹೇಳಿದಕ್ಷಣ, ಅವು ಪ್ರಭುತ್ವವನ್ನೂ ಅದನ್ನು ವಿರೋಧಿಸುವವರನ್ನೂ ಒಂದೇ ಪಾತಳಿಯ ಮೇಲಿಟ್ಟು ನೋಡಬೇಕು ಎಂದಲ್ಲ. ಹಕ್ಕು ಸಂಘಟನೆಗಳಿಗೆ ಜನಾಂದೋಲನಗಳು ಮತ್ತು ಪ್ರತಿಭಟನೆಯ ಹಕ್ಕು ತೀರಾ ಮುಖ್ಯವಾದ ವಿಚಾರ. ಅದು ವ್ಯವಸ್ಥೆಯೊಳಗೆ ಸ್ವೀಕಾರರ್ಹವಾದ ರಾಜಕೀಯ ವಿಚಾರಗಳನ್ನಷ್ಟೇ ಅಲ್ಲದೆ, ಇಡೀ ವ್ಯವಸ್ಥೆಗೆ ಪರ್ಯಾಯವಾದ ರಾಜಕೀಯ ವಿಚಾರಗಳನ್ನು ಮುಂದಿರಿಸುವ ಹಕ್ಕಿಗೂ ಅದು ಮನ್ನಣೆ ನೀಡುತ್ತದೆ. ಅದನ್ನು ವ್ಯವಸ್ಥೆ 'ತೀವ್ರವಾದ', 'ಭಿನ್ನಮತೀಯವಾದ' ಎಂದರೂ ಸರಿಯೇ. ವ್ಯವಸ್ಥೆ ಕೆಲವು ರೀತಿಯ ರಾಜಕೀಯ ಪರ್ಯಾಯಗಳ ಬಗ್ಗೆ ಮಾತ್ರ ಸಮ್ಮತಿಹೊಂದಿರುತ್ತದೆ. ತನ್ನ ನ್ಯಾಯಸಮ್ಮತಿಯ ಹೊರಗೆ ಇರುವ ಪರ್ಯಾಯಗಳನ್ನು ಅದು ಮನ್ನಿಸುವುದಿಲ್ಲ, ಇಂಥ ಪರ್ಯಾಯ ರಾಜಕೀಯ ಚಳುವಳಿಯ ವಿಷಯ ಬಂದಾಗಲೆಲ್ಲಾ

ಚರ್ಚೆಯನ್ನು ಪ್ರತ್ಯೇಕವಾದದ ತೀವ್ರಗಾಮಿತನದ ಪ್ರಶ್ನೆಗೆ ಮಿತಿಗೊಳಿಸಿ ನೋಡುತ್ತದೆಯೇ ವಿನಃ ಅದರಾಚೆಗಲ್ಲ. ಇಂಥ ಏಕಪಕ್ಷೀಯ ನಿಲುವನ್ನು ಹಕ್ಕು ಸಂಘಟನೆ ಖಂಡಿಸುತ್ತದೆ. ಹಿಂಸಾಮಾರ್ಗದ ಬಗ್ಗೆ ನಿಲುವುಗಳು ಏನೇ ಇರಲಿ, ಕ್ರಾಂತಿಕಾರಿ ಹೋರಾಟ ಒಂದು ನ್ಯಾಯಸಮ್ಮತ ರಾಜಕೀಯ ಪರ್ಯಾಯಕ್ಕಾಗಿ ನಡೆಯುತ್ತಿರುವ ಹೋರಾಟ. ಆದ್ದರಿಂದ ರಾಜಕೀಯ ಚರ್ಚೆಗೂ ಅದರಲ್ಲಿ ಅವಕಾಶವಿರಬೇಕು ಎನ್ನುವುದು ಹಕ್ಕು ಸಂಘಟನೆಗಳ ನಿಲುವು. ಆದರೆ ವ್ಯವಸ್ಥೆಯ ಪ್ರಚಾರ ಎಷ್ಟು ಪ್ರಭಾವಶಾಲಿಯಾದದ್ದೆಂದರೆ ನಮ್ಮ ಈ ವಾದ ಬಹುತೇಕರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ಅರ್ಥವಾದರೂ ಇದನ್ನು ಒಪ್ಪುವುದಿಲ್ಲ. 'ತೀವ್ರವಾದವೂ ಒಂದು ರಾಜಕೀಯ' ಎನ್ನುವುದು ಸುಲಭಕ್ಕೆ ನುಂಗಲಾರದ ಕಹಿ ಸತ್ಯ. ಹಕ್ಕು ಸಂಘಟನೆಗಳ ಈ ವಾದದ ಬಗ್ಗೆ ಜನರಿಗಿರುವ ಗುಮಾನಿಯನ್ನು ಸಂಪೂರ್ಣವಾಗಿ ತೊಡೆದುಹಾಕಲಾಗುವುದಿಲ್ಲ.

ಎಷ್ಟರ ಮಟ್ಟಿಗೆ ಈ ಅನುಮಾನವನ್ನು ಹೋಗಲಾಡಿಸಲು ಸಾಧ್ಯ? ಅದು ನಾವು ಎಷ್ಟರ ಮಟ್ಟಿಗೆ ಸ್ವತಂತ್ರವಾಗಿದ್ದೇವೆ, ಅನ್ನುವುದರ ಮೇಲೆ ನಿಂತಿರುವಂಥದು. ನಾವು ಯಾವ ಪಕ್ಷದ ಮುಖವಾಣಿಯೂ ಅಲ್ಲ ಎನ್ನುವುದು ಜನರಿಗೆ ಮನವರಿಕೆಯಾದಾಗ ಇದು ಸಾಧ್ಯವಾಗುತ್ತದೆ. ಹಿಂದಿನ ದಿನಗಳಿಗೆ ಹೋಲಿಸಿದರೆ, ಈಗ ಪರಿಸ್ಥಿತಿ ಬದಲಾಗಿದೆ.

ಪ್ರಶ್ನೆ : ನಮ್ಮ ದೇಶದಲ್ಲಿ ಕನಿಷ್ಠ ಪಕ್ಷ ಒಂದು ಬೂರ್ಜ್ವಾ ಪ್ರಜಾಪ್ರಭುತ್ವವಿದೆ ಎನ್ನುವುದು ಬಹಳಷ್ಟು ಚರ್ಚೆಗೆ ಈಡಾಗಿರುವ ವಿಚಾರ. ಹಕ್ಕು ಕಾರ್ಯಕರ್ತರಾಗಿ ನಿಮ್ಮ ಅಭಿಪ್ರಾಯ?

ಬಾ : ಇದಕ್ಕೆ ಉತ್ತರ ಕೊಡಬೇಕಾದಲ್ಲಿ, ಬೂರ್ಜ್ವಾ ಪ್ರಜಾಪ್ರಭುತ್ರ ಎಂದರೆ ಏನು ಎನ್ನುವುದನ್ನು ಮೊದಲು ಚರ್ಚಿಸಬೇಕು. ಕೆಲವರ ಪ್ರಕಾರ ಡೆಮಾಕ್ರಸಿ ಅನ್ನುವುದೇ ಒಂದು ಬೂರ್ಜ್ವಾ ವ್ಯವಸ್ಥೆ. ನಾವು ಯಾವುದನ್ನು ಪ್ರಜಾಪ್ರಭುತ್ವ ಎನ್ನುತ್ತೇವೆಯೋ, ಅದು ಕೆಲವು ಹಕ್ಕು, ಮೌಲ್ಯ ಮತ್ತು ಆಚರಣೆಗಳ ಒಂದು ಮೊತ್ತ. ಇತಿಹಾಸದ ಅನೇಕ ಹೋರಾಟಗಳಿಂದ ರೂಪುಗೊಂಡಿರುವಂಥಾದ್ದು. ಕಾನೂನುಬದ್ಧ ಆಳ್ವಿಕೆ ಬರಬೇಕಾದರೆ ಬ್ರಿಟನ್‌ನಲ್ಲಿ ನಾಲ್ಕು ಶತಮಾನಗಳಷ್ಟು ಕಾಲದ ಚಳುವಳಿ ಬೇಕಾಯಿತು. ಹಾಗೆಯೇ ಸಂತಾಲರ ಬಂಡಾಯದಿಂದ ಆದಿವಾಸಿಗಳಿಗೆ ಕಾಡಿನಲ್ಲಿರುವ ತಮಗೂ ಹಕ್ಕುಗಳಿವೆ ಎಂಬ ಅರಿವುಂಟಾಯಿತು. ಹೀಗೆ ಜನಗಳ ಹೋರಾಟದಿಂದ ಮೂಡಿ ಬಂದ ಈ ಹಕ್ಕು, ಮೌಲ್ಯ, ಆಚರಣೆಗಳು ಬೂರ್ಜ್ವಾ ಲಕ್ಷಣಗಳನ್ನು ಯಾವಾಗ, ಎಲ್ಲಿ ಪಡೆದುಕೊಂಡವು? ಈ ಹಕ್ಕುಗಳನ್ನು ವಿವರಿಸುವ ಬಗೆಯಲ್ಲಿಯೇ ಅವುಗಳ ವ್ಯವಸ್ಥೀಕರಣವೂ ಆಯಿತು. ಪ್ರಜಾತಾಂತ್ರಿಕ ಮೌಲ್ಯಗಳ ದೃಷ್ಟಿಯಲ್ಲಿ ಕಾನೂನು ಎಲ್ಲರಿಗೂ ಸಮಾನವಾಗಿ ಅನ್ವಯವಾಗುವಂಥದು. ಗುಲಾಮಗಿರಿಯ ವಿರುದ್ಧ ಎದ್ದ ಬಂಡಾಯದಿಂದ, ಗುಲಾಮರಿಗೂ, ಆಳುವವರಿಗೂ ಸಮಾನವಾದ ಕಾನೂನುಗಳು ಸೃಷ್ಟಿಯಾದವು. ಇದರಿಂದ ಎಲ್ಲರಿಗೂ ಕಾನೂನಿನ ರಕ್ಷಣೆ ಸಿಗುವಂತಾಯಿತು. ಇದು ಭಾರತದ ಸಂವಿಧಾನದ ಪ್ರಕಾರ ಎಲ್ಲರ ಮೂಲಭೂತ ಹಕ್ಕು. ಆದರೆ ಬೂರ್ಜ್ವಾ ಕಾನೂನು ಈ ಸಮಾನ ಹಕ್ಕನ್ನು ವ್ಯವಸ್ಥೆಯ ಭಾಗವಾಗಿಸಿ, ಅದರ ಅರ್ಥವನ್ನು ಮೊಟಕುಗೊಳಿಸಿತು. ಉದಾಹರಣೆಗೆ, ಎಲ್ಲರೂ ಸಮಾನರು ಎಂಬುದು ಕೋರ್ಟಲ್ಲಿ (ಮಾತ್ರ) ಎಲ್ಲರೂ ಸಮಾನ ಎಂಬಂತಾಗಿಬಿಟ್ಟಿದೆ. ಈ ಸಮಾನತೆಯ ನ್ಯಾಯವನ್ನು ಬಡವರು ಮತ್ತು ಶ್ರೀಮಂತರು ಸಮಾಜದಲ್ಲಿ ಒಂದೇ ಥರ ಬಳಸಲು ಸಾಧ್ಯವಿದೆಯೇ? ಇದೇ ಗತಿ ಜನರ ಇತರ ಆಶೋತ್ತರಗಳಿಗೂ ಒದಗಿದೆ. ನಾವು ಯಾರೂ ರಾಜರ ಆಳುವಿಕೆಯಲ್ಲಿರಲು ಬಯಸುವುದಿಲ್ಲ. ಇಲ್ಲಿ ಪ್ರಜೆಗಳೇ ಪ್ರಭುಗಳು ಎನ್ನುವುದು ತತ್ವ, ಆದರೆ ಇದು ಕೂಡ ಬೂರ್ಜ್ವಾ ವ್ಯವಸ್ಥೆಗೆ ಒಳಗಾಗಿದೆ. ಇದರ ಸತ್ಯ ಅರಿಯಬೇಕಾದರೆ, ವ್ಯವಸ್ಥೀಕರಣಕ್ಕೆ ಒಳಗಾದ ಹಕ್ಕುಗಳ ಮಿತಿಗಳೇನು, ಈ ಹಕ್ಕುಗಳನ್ನು

ಎಷ್ಟರ ಮಟ್ಟಿಗೆ ಆಚರಣೆಗೆ ತರಲಾಗಿದೆ ಎಂದು ಕೇಳಿಕೊಳ್ಳುವುದು ಅಗತ್ಯ.

ಭಾರತದ ಸಂವಿಧಾನ ಪಶ್ಚಿಮ ರಾಷ್ಟ್ರಗಳಲ್ಲಿದ್ದ ಅನೇಕ ಹಕ್ಕಿನ ಪರಿಕಲ್ಪನೆಗಳನ್ನು ಭಾರತದ ಸಮಾಜಕ್ಕೇ ವಿಶಿಷ್ಟವಾದ ಜಾತಿಪದ್ಧತಿ ವಿರೋಧಿ ಕಾನೂನುಗಳನ್ನು ಒಳಗೊಂಡಂತೆ–ಅಳವಡಿಸಿಕೊಂಡಿದೆಯಾದರೂ, ಈ ಹಕ್ಕಿನ ಮಿತಿಗಳನ್ನೂ ನಿಗದಿಮಾಡಿದೆ, ಹಾಗೆ ನೋಡಿದರೆ, ಹಕ್ಕುಗಳನ್ನು ಘೋಷಿಸುತ್ತಲೇ ಅದರ ಮಿತಿಗಳನ್ನೂ ನಿಗದಿಪಡಿಸುವ ಏಕೈಕ ಸಂವಿಧಾನ ನಮ್ಮದು. ನ್ಯಾಯಾಲಯಗಳು ವಿವಿಧ ಸಂದರ್ಭಗಳಲ್ಲಿ ಈ ಮಿತಿಗಳನ್ನು ಸಡಿಲಗೊಳಿಸಿದ್ದರೂ, ಇನ್ನೂ ಕೆಲವಕ್ಕೆ ನಿರ್ಬಂಧಗಳನ್ನೂ ಹಾಕಿದೆ. ಟಾಡಾದಂಥ ಕರಾಳ ಶಾಸನಗಳು ಜಾರಿಗೆ ಬಂದಿದ್ದು ಇದರಿಂದಲೇ.

ಇನ್ನೂ ಆಚರಣೆಯ ವಿಷಯಕ್ಕೆ ಬಂದಾಗ, ಇದ್ದ ಕೆಲವು ಹಕ್ಕುಗಳಿಗೂ ಎಳ್ಳುನೀರು ಬಿಡಲಾಗಿದೆ. ಇದರಲ್ಲಿ ಪೋಲೀಸು ವ್ಯವಸ್ಥೆಯ ಪಾಲು ಬಹಳ ದೊಡ್ಡದು. ಜನರ ಹೋರಾಟಗಳಿಂದ ರೂಪುಗೊಂಡ ಈ ಹಕ್ಕುಗಳ ನಿಜವಾದ ಆಶಯಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಹಕ್ಕು ಸಂಘಟನೆಗಳ ಮೇಲಿದೆ. ಇದು ಇನ್ನೂ ಆಗಬೇಕಾದ ಕೆಲಸವಾದ್ದರಿಂದ ನಮ್ಮಲ್ಲಿ ಕನಿಷ್ಟ ಪಕ್ಷ ಬೂರ್ಜ್ವಾ ಡೆಮಾಕ್ರಸಿ ಇದೆಯೇ ಎಂದು ಕೇಳುವುದು ಉಪಯೋಗವಿಲ್ಲದ್ದು.

ಪ್ರ : ಹಕ್ಕು ಸಂಘಟನೆಗಳು ಈಗ ಆದಿವಾಸಿ, ದಲಿತ, ಮಹಿಳಾ ಮತ್ತು ರಾಷ್ಟ್ರೀಯತೆಯ ಪ್ರಶ್ನೆಗಳನ್ನು ಗಂಭೀರವಾಗಿ ಕೈಗೆತ್ತಿಕೊಂಡಿವೆ. ಮೂಲೆಗುಂಪಾಗಿದ್ದ ಈ ಸಮುದಾಯಗಳಲ್ಲಿ ಹೊಸ ಪ್ರಜ್ಞೆ ಪ್ರಜಾತಾಂತ್ರಿಕ ಅರಿವು ಮೂಡಿದೆ. ಇಂಥ ಸಂದರ್ಭದಲ್ಲಿ ಹಕ್ಕು ಸಂಘಟನೆಗಳ ಜವಾಬ್ದಾರಿ ಏನು?

ಬಾ : ಒಂದು ಜನಾಂದೋಲನ ಹುಟ್ಟಿಕೊಂಡಾಗ ಅದು ನಾಗರಿಕ ಹಕ್ಕುಗಳಿಗೆ ಹೊಸ ಆಯಾಮವನ್ನು ಒದಗಿಸುತ್ತದೆ. ಹಕ್ಕು ಸಂಘಟನೆಗಳು ಈ ಆಯಾಮವನ್ನು ತಮ್ಮ ಒಟ್ಟಾರೆ ಗ್ರಹಿಕೆ ಮತ್ತು ಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಇದು ಸಾಧ್ಯವಾಗಬೇಕಾದರೆ ಇಂಥ ಜನಾಂದೋಲನದಲ್ಲಿರುವ ಕಾರ್ಯಕರ್ತರನ್ನು ನಾಗರಿಕ ಹಕ್ಕುಗಳ ಬಗ್ಗೆ ಜಾಗೃತಗೊಳಿಸಬೇಕಾದ್ದು ಅಗತ್ಯ. ಹಕ್ಕು ಕಾರ್ಯಕರ್ತರು ಪ್ರಜಾತಾಂತ್ರಿಕವಾಗಿ ಯೋಚಿಸಬಲ್ಲ, ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ವ್ಯಕ್ತಿಗಳೇ ಆಗಿರುತ್ತಾರೆ ಸರಿ: ಆದರೆ ಇದರಿಂದಲೇ ಹೊಸ ಜನಾಂದೋಲಗಳು ಎತ್ತುವ ಹೊಸ ಹಕ್ಕಿನ ಪ್ರಶ್ನೆಗಳನ್ನು ನಿಭಾಯಿಸಲು ಆಗುವುದಿಲ್ಲ. ನಮ್ಮ ಅನುಭವಗಳಿಗೆ ದಕ್ಕುವಷ್ಟು ಮಾತ್ರ ನಾವು ಪ್ರಜಾಪ್ರಭುತ್ವವಾದಿಗಳಾಗಿ ರುತ್ತೇವೆ. ಆದ್ದರಿಂದ ಎಲ್ಲಾ ಹಕ್ಕು ಕಾರ್ಯಕರ್ತರೂ ಮಹಿಳಾ ಅಥವಾ ದಲಿತರ ಹಕ್ಕಿನ ವಿಷಯದಲ್ಲಿ ಒಂದೇ ಥರಹ ಯೋಚನೆ ಮಾಡಲಾರರು. ಆಂದೋಲನಗಳಿಂದ ಬರುವ ಕಾರ್ಯಕರ್ತರು ತಮ್ಮೊಡನೆ ತರುವ ಹೊಸ ಅನುಭವಗಳು, ಹೊಸ ಹಕ್ಕಿನ ಪರಿಕಲ್ಪನೆಗಳನ್ನು ಒದಗಿಸಬಲ್ಲರು. ಆದ್ದರಿಂದ ಆದಿವಾಸಿಗಳು, ದಲಿತರು, ಮಹಿಳೆಯರು ಹೀಗೆ ಶೋಷಿತ ಸಮಾಜದ ವಿವಿಧ ಸ್ತರದ ಜನರು ಹಕ್ಕು ಸಂಘಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದರ ಮೂಲಕ ಹಕ್ಕುಗಳು ಸಂಕೀರ್ಣವಾಗಿ ಮತ್ತು ಸಮಗ್ರವಾಗಿ ಬೆಳೆಯಲು ಸಾಧ್ಯ.

(ಸಾಭಾರ : ಬಾಲಗೋಪಾಲ್ ಬರಹಗಳು ಪುಸ್ತಕದಿಂದ)

* * *

ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ ?

– ಕುವೆಂಪು

(ರಾಷ್ಟ್ರಕವಿ ಕುವೆಂಪುರವರ ಜನ್ಮ ಮಾಹೆಯ ನೆನಪಿನಲ್ಲಿ. - ಸಂ)

ತಾರುಣ್ಯಕ್ಕೆ ಬಹಿರ್ಮುಖತೆಯೆ ಸಹಜ ಪ್ರಕೃತಿ; ಅಂತರ್ಮುಖತೆ ಪ್ರಯತ್ನದಿಂದ ಮಾತ್ರ ಸಾಧ್ಯ. ಅಂಗಾಂಗಗಳನ್ನು ಚಲಿಸಿ ಬೆವರು ಸುರಿಸಿ ಚೆಂಡಾಡುವುದು ಅದಕ್ಕೆ ಸುಲಭ ಮತ್ತು ಸಂತೋಷಕರ; ನಿಶ್ಚಲವಾಗಿ ಕುಳಿತು ಧ್ಯಾನ ಮಾಡುವುದು ಕಠಿನ ಮತ್ತು ಕ್ಲೇಶಕರ. ಮೊದಲನೆಯದು ರಜಸ್ಸು, ಎರಡನೆಯದು ತಪಸ್ಸು. ತಮಸ್ಸಿಗಿಂತ ರಜಸ್ಸು ಮೇಲು; ಆದರೆ ತಪಸ್ಸು ಸರ್ವೋತ್ತಮ. ತಪಸ್ಸಿಲ್ಲದೆ ಆತ್ಮಶ್ರೀ ಅಲಭ್ಯ. ಯಾವ ವಿಧ್ಯಾರ್ಥಿ ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳನ್ನು ಅತ್ಯುಜ್ವಲವಾಗಿ ಪಡೆಯಬೇಕೆಂದು ಹಾರೈಸುತ್ತಾನೆಯೊ ಆತನು ಇತರ ಎಲ್ಲ ಶ್ರೀಗಳಿಗೂ ಶ್ರೀಯಾಗಿರುವ ಆತ್ಮಶ್ರೀಯನ್ನು ಸಾಧಿಸಲೇಬೇಕು. ಎಂದರೆ ಆತನೂ ತಪಸ್ವಿಯಾಗಲೇಬೇಕು.

ಆತ್ಮಶ್ರೀ ಸಾಧನಕನಾದ ವಿದ್ಯಾರ್ಥಿಯೂ ತಪಸ್ವಿ. ಆತನ ತಪಸ್ಸು ತಲೆ ಕೆಳಗಾಗಿ ನಿಲ್ಲುವುದರಲ್ಲಿಲ್ಲ; ಬರಿಯ ದೇಹದಂಡನೆಯಲ್ಲಿಲ್ಲ; ಜೀವನದ ಮುಗ್ಧ ಸುಖಗಳ ತ್ಯಾಗದಲ್ಲಾಗಲಿ ಸರಳ ಸೌಂದರ್ಯಗಳ ವಿಸರ್ಜನೆಯಲ್ಲಾಗಲಿ ಇಲ್ಲ. ಆತನ ತಪಸ್ಸು ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳ ತಿರಸ್ಕಾರದ ರೂಪ ತಾಳುವ ಬಣಗು ಚಿತ್ತವೃತ್ತಿಯಲ್ಲ. ಆತನ ತಪಸ್ಸು ಇರುವುದು ಅಧ್ಯಯನದಲ್ಲಿ, ಏಕಾಗ್ರತೆಯಲ್ಲಿ, ಸಂಯಮದಲ್ಲಿ, ಧ್ಯಾನದಲ್ಲಿ, ಆತ್ಮಾನುಸಂಧಾನದಲ್ಲಿ.

ಮನುಷ್ಯ ಸಂಗವೂ ಶಬ್ದಮಯ ಸಾಮಾಜಿಕ ಜೀವನವೂ ಓಕರಿಕೆ ಹಿಡಿಸುವಷ್ಟು ಯಥೇಚ್ಛವಾಗಿರುವಾಗ ಈ ಕೋಲಾಹನಪೂರ್ಣವಾದ ನಗರಕ್ಕೆ ವಿದ್ಯಾರ್ಜನೆಗಾಗಿ ಬಂದಿರುವ ಎಳೆಯ ಗೆಳೆಯರ ಮುಂದೆ ಏಕಾಂತವನ್ನೂ ಮೌನವನ್ನೂ ಕುರಿತು ಒಂದೆರಡು ಪ್ರಶಂಸೆಯ ಮಾತುಗಳನ್ನಾಡಿದರೆ ಅವರನ್ನೆಲ್ಲ ಕೆಲಸಕ್ಕೆ ಬಾರದ ಕನಸುಗಾರರನ್ನಾಗಿ ಮಾಡುವ ಭಯ ನನಗಿನಿತೂ ಇಲ್ಲ. ತುಂಬುಬಾಳಿಗೆ ಬಹಿಮುರ್ಖತೆಯಷ್ಟೇ ಆವಶ್ಯಕ ಅಂತರ್ಮುಖತೆ. ಬದುಕನ್ನು ಕುರಿತು ಜಾನಿಸುವುದೂ ಚೆನ್ನಾಗಿ ಬದುಕುವುದಕ್ಕೆ ನೆರವಾಗುತ್ತದೆ. ಕೊನೆಗೂ ನಮ್ಮ ಒಟ್ಟು ಬದುಕಿನ ಉತ್ತಮಾಂಶ ಆ ಬದುಕನ್ನು ಕುರಿತ ಧ್ಯಾನದ ಬದುಕಿನಿಂದಲೇ ಸಿದ್ಧವಾಗುತ್ತದೆ, ಮೊಸರಿನ ಸತ್ವಾಂಶ ಬೆಣ್ಣೆಯಲ್ಲಿ ಸಿದ್ಧಿಸುವಂತೆ. ಪಶುವೂ ಕೂಡ ತಾನು ಹಗಲೆಲ್ಲ ಅಲೆದಲೆದು ಮೇದುದನ್ನು ಮೈಹಿಡಿಸಿಕೊಳ್ಳುವುದಕ್ಕಾಗಿ ಇರುಳು ಕೊಟ್ಟಿಗೆಯಲ್ಲಿ ವಿರಾಮವಾಗಿ ಮಲಗಿ ಮೆಲುಕು ಹಾಕುತ್ತದೆ. ಇಲ್ಲದಿದ್ದರೆ ತಿಂದ ಮೇವು ತನ್ನದಾಗುವುದಿಲ್ಲ. ಅಂತೆಯೆ ಪುಸ್ತಕಗಳಿಂದಲೂ ವ್ಯಕ್ತಿಗಳಿಂದಲೂ ಸಂಸ್ಥೆಗಳಿಂದಲೂ ಜೀವನ ವ್ಯಾಪಾರಗಳಿಂದಲೂ ನಾವು ಪಡೆಯುವ ತಿಳಿವು ನಮ್ಮ ಅನುಭವಕ್ಕೆ

ಹಿಡಿಯಬೇಕಾದರೆ, ಅದರಿಂದ ನಮ್ಮ ಆತ್ಮಶ್ರೀ ಅವಿರ್ಭವಿಸಬೇಕಾದರೆ, ಏಕಾಂತವೂ ಮೌನವೂ ಧ್ಯಾನವೂ ಅತ್ಯಗತ್ಯ. ದಿನದ ದೀರ್ಘಜೀವನದಲ್ಲಿ ಸ್ವಲ್ಪ ಕಾಲವನ್ನಾದರೂ ಅದಕ್ಕೆ ಮೀಸಲಾಗಿಸುವುದರಿಂದಲೇ ಬಾಳು ಪರಿಪೂರ್ಣವೂ ಸುಂದರವೂ ಆಗಲು ಸಾಧ್ಯ.

ಮೌನಮಂದಿರದಲ್ಲಿ ಧ್ಯಾನದೇಕಾಂತದಲ್ಲಿ ಭಗವಂತನ ದಿವ್ಯಸಾನ್ನಿಧ್ಯ ಗೋಚರಿಸುತ್ತದೆ ಎಂಬುದು ಆತ್ಮಶ್ರೀ ಸಾಧಕರೆಲ್ಲರ ಅನುಭವವಾಗಿದೆ. ಆತ್ಮಶ್ರೀಯನ್ನು ಬಯಸುವ ವಿದ್ಯಾರ್ಥಿ ಆ ಮೌನ, ಆ ಧ್ಯಾನ, ಆ ಏಕಾಂತತೆಗಳನ್ನು ತಕ್ಕಮಟ್ಟಿಗಾದರೂ ಆಶ್ರಯಿಸಲೇ ಬೇಕು, ವಿಜ್ಞಾನಿ ಪ್ರಯೋಗಶಾಲೆಯನ್ನು ಆಶ್ರಯಿಸುವಂತೆ.

ಪ್ರಾಚೀನಕಾಲದ ಅರಣ್ಯಾಶ್ರಮಗಳ ವಿದ್ಯಾರ್ಥಿಗೆ ಋಷಿಗುರುಗಳ ಸನ್ನಿಧಿಯಲ್ಲಿ ಯಾವುದು ತನಗೆ ತಾನೆ ಲಭಿಸುತ್ತಿತ್ತೋ ಆ ಸನ್ನಿವೇಶ ಪ್ರಶಾಂತಿ ಈ ಯಂತ್ರ ನಾಗರಿಕತೆಯಲ್ಲಿ ದುಲಭ್ರ. ಆದರೂ ಕಷ್ಟಸಾಧ್ಯ. ಆ ಪುಣ್ಯಾಶ್ರಮಗಳ ವಿದ್ಯಾರ್ಥಿಯೆ, ಪ್ರಾಚೀನ ಕಾಲದ ನಮ್ಮ ಪುಣ್ಯ ಸ್ನೇಹಿತನೆ ಆಧುನಿಕ ವಿದ್ಯಾರ್ಥಿಗಳಾದ ನಮಗೂ ಆದರ್ಶವಾಗಿದ್ದಾನೆ. ಆತ್ಮಶ್ರೀ ಸಾಧನೆಯ ಪಥದಲ್ಲಿ ನಮಗೆ ಮಾರ್ಗದರ್ಶಿಯಾಗಲೂ ಆತನೆ ಅರ್ಹ.

ಆತನ ವಿದ್ಯಾತಪಸ್ಸು 'ಓಂ ಸಹನಾವವತು'ವಿನಿಂದ ಮೊನೆಗೊಂಡು 'ಓ ಶಾಂತಿಃ ಶಾಂತಿಃ ಶಾಂತಿಃ'ಯಲ್ಲಿ ಕೊನೆಗೊಳ್ಳುತ್ತಿತ್ತು. ಆತನಿಗೆ ಶಾಂತಿಯೆ ಜೀವನದ ಸರ್ವೋಚ್ಚ ಲಕ್ಷ್ಯವಾಗಿತ್ತು. ತನ್ನೊಬ್ಬನ ಶಾಂತಿ ಮಾತ್ರವಲ್ಲ, ವಿಶ್ವ ಜೀವರಾಶಿಗಳೆಲ್ಲರ ಶಾಂತಿಯೂ ಅವನ ಧ್ಯಾನದ ಆಕಾಂಕ್ಷೆ.

ಓಂ ದ್ಯೌಃ ಶಾಂತಿರಂತರಿಕ್ಷಂ ಶಾಂತಿಃ
ಪೃಥಿವೀ ಶಾಂತಿರಾಪಃ ಶಾಂತಿರೋಷಧಯಃ ಶಾಂತಿಃ
ವನಸ್ಪತಯಃ ಶಾಂತಿರ್ವಿಶ್ವೇದೇವಾಃ ಶಾಂತಿರ್ಬ್ರಹ್ಮ ಶಾಂತಿಃ
ಸರ್ವಂ ಶಾಂತಿಃ ಶಾಂತಿರೇವ ಶಾಂತಿಃ

ಸ್ವರ್ಗಜೀವಿಗಳಿಗೆ ಶಾಂತಿ. ಆಕಾಶದ ಆತ್ಮರಿಗೆ ಶಾಂತಿ. ಭೂಮಿಯ, ನೀರಿನ, ಗಿಡಮರಗಳ ಚೇತನಗಳಿಗೆ ಶಾಂತಿ. ಸರ್ವ ದೇವತೆಗಳಿಗೆ ಶಾಂತಿ. ಬ್ರಹ್ಮಕ್ಕೆ ಶಾಂತಿ. ಆ ನಿಜವಾದ ಶಾಂತಿ, ಆ ಎಲ್ಲರ ಶಾಂತಿ ತನ್ನದಾಗಲಿ ಎಂಬುದು ಆತನ ಧ್ಯಾನವಾಗಿತ್ತು. ಧ್ಯಾನದ ಸಮಯದಲ್ಲಿ ಶುದ್ಧಬುದ್ಧಿಯ ಸೊಡರಕುಡಿ ಲೋಕಾಲೋಕ ಚೇತನವನ್ನು ಸೋಂಕಿ ಆ ಚೈತನ್ಯದ ತೇಜಸ್ಸು ತನ್ನನ್ನು ತುಂಬಲಿ ಎಂದು ಹಂಬಲಿಸುತ್ತಿತ್ತು.

ತೇಜೋಸಿ ತೇಜೋ ಮಯಿ ಧೇಹಿ। ವೀರ್ಯಮಸಿ ವೀರ್ಯಂ ಮಹಿ ಧೇಹಿ॥
ಬಲಮಸಿ ಬಲಂ ಮಯಿ ಧೇಹಿ। ಓಜೋಸಿ ಓಜೋ ಮಯಿ ಧೇಹಿ॥
ಮನ್ಯುರಸಿ ಮನ್ಯುಂ ಮಯಿ ಧೇಹಿ। ಸಹೋಽಸಿ ಸಹೋ ಮಯಿ ಧೇಹಿ॥

ತೇಜಸ್ಸಿಗೆ ತೇಜಸ್ಸಾದ ನೀನು ನನ್ನನ್ನು ತೇಜಸ್ಸಿನಿಂದ ತುಂಬು. ಶಕ್ತಿಗೆ

ಶಕ್ತಿಯಾದ ನೀನು ನನ್ನನ್ನು ಬಲದಿಂದ ತುಂಬು. ಎಲ್ಲ ಓಜಸ್ಸಿಗೂ ನೀನು ಓಜಸ್ಸು, ನನ್ನಲ್ಲಿ ಓಜಸ್ಸಾಗಿ ಆವಿರ್ಭವಿಸು: ಸರ್ವಸಹನೆಗೂ ಶಾಂತಿ ನೀನು, ಆ ಸಹನಾಶಾಂತಿಯಾಗಿ ನನ್ನ ಆತ್ಮದಲ್ಲಿ ಸಂಭವಿಸು.

ಆ ವಿದ್ಯಾರ್ಥಿಯ ತಪಸ್ಸು ಶಾಂತಿಯನ್ನು ಹೇಗೆ ಕೋರುತ್ತಿತ್ತೊ ಹಾಗೆಯೆ ಸುಖವನ್ನೂ ಕೋರುತ್ತಿತ್ತು. ಸತ್ಯದ ಜೊತೆಗೆ ಸೌಂದರ್ಯವನ್ನೂ ಶಿವದ ಜೊತೆಗೆ ಆನಂದವನ್ನೂ ಬಯಸುತ್ತಿತ್ತು.

ಬ್ರಹ್ಮಮೇತು ಮಾಮ್ ಮಧುಮೇತು ಮಾಮ್।
ಬ್ರಹ್ಮಮೇವ ಮಧುಮೇತು ಮಾಮ್॥

ನಮಗೆ ಬ್ರಹ್ಮಸಿದ್ಧಿಯಾಗಲಿ; ಮಧುಸಿದ್ಧಿಯೂ ಆಗಲಿ; ಯಾವ ಮಧು ಬ್ರಹ್ಮದಿಂದ ಬೇರೆಯಲ್ಲವೋ ಅದು ಸಿದ್ಧಿಯಾಗಲಿ.

ಬ್ರಹ್ಮ ಮೇಧಯಾ ಮಧು ಮೇಧಯಾ।
ಬ್ರಹ್ಮಮೇವ ಮಧು ಮೇಧಯಾ॥

ಬ್ರಹ್ಮ ಜಿಜ್ಞಾಸೆ, ಮಧು ಜಿಜ್ಞಾಸೆ, ಬ್ರಹ್ಮಮೇವ ಮಧುವಿನ ಜಿಜ್ಞಾಸೆ ಇವುಗಳನ್ನು ಚಿಂತಿಸುವಾಗ ಆ ವಿದ್ಯಾರ್ಥಿಯ ಮನಸ್ಸು ಧ್ಯಾನಯಾನದಲ್ಲಿ ತ್ರಿಲೋಕಯಾತ್ರಿಯಾಗಿ ಜಗದ್ವ್ಯಾಪಿಯಾಗುತ್ತಿತ್ತು; ವಿಶ್ವಸಂಚಾರಿಯಾಗುತ್ತಿತ್ತು; ಬ್ರಹ್ಮಚಾರಿಯಾಗುತ್ತಿತ್ತು. ಆತನ ಆತ್ಮ ತನ್ನ ಭಾವಬಾಹುಗಳನ್ನು ಪ್ರಸರಿಸಿ ಸೃಷ್ಟಿಯ ಪ್ರಕೃತಿ ಸೌಂದರ್ಯಗಳನ್ನೆಲ್ಲ ತನ್ನ ವಿಶಾಲವೃಕ್ಷದಲ್ಲಿ ಆಲಿಂಗಿಸಿ, ಅದರ ರಸಸುಖವನ್ನೆಲ್ಲ ಹೀರಿ ಪುಷ್ಟಿಗೊಳ್ಳುತ್ತಿತ್ತು. ಆತನು ಎಷ್ಟುಸಾರಿ ಆ ದಟ್ಟವಾದ ಕಾಡುಗಳಲ್ಲಿ ಗೋವು ಕಾಯುತ್ತಾ ಅಲೆದಿರಬಹುದು! ಮತ್ತೆಷ್ಟು ತೊರೆಗಳಲ್ಲಿ ಈಜಾಡಿ ಮಿಂದಿರಬಹುದು! ಮತ್ತೆಷ್ಟು ಕೆರೆಗಳಲ್ಲಿ ತಾವರೆ ನೈದಿಲೆಗಳನ್ನು ತಿರಿದಿರಬಹುದು! ಎಂತೆಂತಹ ಗಿಡ ಬಳ್ಳಿಗಳಲ್ಲಿ ಹೂವು ಕೊಯ್ದಿರಬಹುದು! ಯಾವ ಯಾವ ಜಾತಿಯ ಮರಗಳಲ್ಲಿ ಏನೇನು ಸಾಹಸಮಾಡಿ ಹಣ್ಣು ಉದುರಿಸಿರಬಹುದು! ಎಷ್ಟು ಸೂರ್ಯೋದಯಾಸ್ತಗಳನ್ನು ಮಲೆನೆತ್ತಿಗಳಿಂದ ರಸಾವಿಷ್ಟನಾಗಿ ಈಕ್ಷಿಸಿರಬಹುದು! ಆತನ ಕಾಲಿಗೆ ಹೊಳೆಯ ನುಣ್ಣನೆಯ ಬಿಳಿಮಳಲಿನ ಸ್ಪರ್ಶವೂ ತಾಯಿಯ ಮುತ್ತಿನಂತೆ ಕಣ್ಮುಚ್ಚುವ ಸುಖವನ್ನು ಕೊಡುತ್ತಿತ್ತೆಂದು ತೋರುತ್ತದೆ. ಇಲ್ಲದಿದ್ದರೆ "ಮಧುಮತ್ ಪಾರ್ಥಿವಂ ರಜಃ" (ನೆಲದ ಧೂಳು ನಮಗೆ ಮಧುವೀಯಲಿ) ಎಂಬ ಪ್ರಾರ್ಥನೆ ಅಸಾಧ್ಯವಾಗುತ್ತಿತ್ತು. ಆತನು ಧ್ಯಾನ ಸಮಯದಲ್ಲಿ ಆ ಎಲ್ಲ ಮಧುರಾನುಭವಗಳನ್ನೂ ರೋಮಂಥಿಸಿ ರಸಾನಂದಕ್ಕೇರಿ ಬ್ರಹ್ಮಸ್ಪರ್ಶಿಯಾಗಿ ಪ್ರಜ್ವಲಿಸುತ್ತಿದ್ದನೆಂದು ತೋರುತ್ತದೆ.

* * *

ಮೂರು ಕರಣಗಳ ಅರ್ಥ ಮತ್ತು ಅನರ್ಥಕ

– ಪ್ರೊ. ವಿ.ಎಸ್.ಲಕ್ಷ್ಮೀನಾರಾಯಣ

ಪಶ್ಚಿಮದ ಶ್ರೀಮಂತ ರಾಷ್ಟ್ರಗಳ ಕೇವಲ ಬೆರಳೆಣಿಕೆಯ ಮಂದಿ, ತಮ್ಮ ಸಮಾಜದ ಸಂಕಷ್ಟಗಳನ್ನು ಮರೆಮಾಚಿ ತಾವು ಮಾತ್ರ ಸುಖಲೋಲುಪತೆಯಲ್ಲಿ ಮುಳುಗಲೋಸ್ಕರ ಪ್ರಪಂಚದಾದ್ಯಂತ ಜಾರಿಗೆ ತರುತ್ತಿರುವ ಕ್ರಮಗಳೇ ಉದಾರೀಕರಣ, ಖಾಸಗೀಕರಣ, ಜಾಗತೀಕರಣದಂತಹ ಹೊಸ ಆರ್ಥಿಕ ನೀತಿಗಳು.

* ಉದಾರೀಕರಣವೆಂದರೆ ಜನರ, ಸಮಾಜದ, ದೇಶದ ಮೂಲಭೂತ ಅಗತ್ಯಗಳನ್ನು ಪೂರೈಸುವಂತಹ ಕೃಷಿ, ಕೈಗಾರಿಕೆ, ಆರೋಗ್ಯ, ಶಿಕ್ಷಣ ಮುಂತಾದ ಚಟುವಟಿಕೆಗಳ ಜವಾಬ್ದಾರಿಯನ್ನು ಸರ್ಕಾರ ಕಳಚಿಕೊಂಡು ಅವರ ಪಾಡು ಅವರದೆಂದು ಘೋಷಿಸಿ, ಜನರಿಂದ ತೆರಿಗೆ ಪಡೆದೂ ಜನರಿಗಾಗಿ ಏನೂ ಮಾಡದೆ ವ್ಯಾಪಾರಿಗಳ ಕೈಗೆ ಅವರನ್ನೊಪ್ಪಿಸುವ ನೀತಿ.

* ಖಾಸಗೀಕರಣವೆಂದರೆ, ಆಯಾ ದೇಶಗಳ ಜನರ ಲಾಭಕ್ಕಾಗಿ ಸ್ಥಾಪಿತವಾದ, ಎಲ್ಲಾ ಉದ್ಯಮ, ವಹಿವಾಟುಗಳನ್ನು ಮುಚ್ಚಿಹಾಕಿ, ಲಾಭದಾಯಕವಾದ, ಜನರ ಹಣದಿಂದ ನಡೆಯುತ್ತಿರುವ ಉದ್ಯಮಗಳನ್ನು ಖಾಸಗಿಯವರಿಗೆ ಮಾರಿಬಿಡುವುದು.

* ಜಾಗತೀಕರಣವೆಂದರೆ, ಪಶ್ಚಿಮ ರಾಷ್ಟ್ರಗಳ ಶ್ರೀಮಂತರು, ಉದ್ಯಮಿಗಳು ತಮ್ಮ ಕಷ್ಟಗಳನ್ನು ಬಡವರಿಗೆ ವರ್ಗಾಯಿಸಿ, ಇತರ ದೇಶಗಳ ಮಧ್ಯಮ ವರ್ಗದ ಜನರಿಂದ ಸಿಗಬಹುದಾದ ಅನುಕೂಲ, ಲಾಭಗಳನ್ನೆಲ್ಲಾ, ದೇಶವಿದೇಶಗಳೆಂಬ ಭೇದವಿಲ್ಲದೆ ಒಟ್ಟಾರೆ ಹಂಚಿಕೊಳ್ಳುವುದು.

ಈ ಎಲ್ಲದರ ಪರಿಣಾಮವೆಂದರೆ :

* ಕಾರ್ಖಾನೆ, ಉದ್ಯಮಗಳು ಮುಚ್ಚಿ, ಕಾರ್ಮಿಕರು ಬೀದಿಪಾಲಾಗುವುದು.

* ರೈತರು ತಾವು ಬೆಳೆದ ಬೆಳೆಯನ್ನು ಕೇಳುವವರಿಲ್ಲದೆ, ಕೊಳ್ಳುವವರಿಲ್ಲದೆ, ಸಾಲಕ್ಕೆ ಸಿಕ್ಕಿ ಆತ್ಮಹತ್ಯೆಯ ಹಾದಿ ಹಿಡಿಯುವುದು.

* ಐಷಾರಾಮೀ ವಸ್ತುಗಳ ಪ್ರಚಾರ, ಬಳಕೆ ಹೆಚ್ಚಾಗುತ್ತಾ, ಶ್ರೀಮಂತರು, ಹೇಗಾದರೂ ಸರಿ ಹಣ ಗಳಿಸಬಲ್ಲವರು ಮತ್ತು ಅಂತಹವರಿಗೆ ಮಾತ್ರ ಕೈಗಾರಿಕೆ, ಉದ್ಯಮಗಳು ಎನ್ನುವಂತಾಗುವುದು.

* ಜೀವನದ ಬಗ್ಗೆ ಜನರ ದೃಷ್ಟಿಯೇ ಬದಲಾಗುತ್ತಾ, ಪ್ರಾಣಿಗಳಂತೆ ಒಬ್ಬರನ್ನು ಮತ್ತೊಬ್ಬರು ಕೊಂದು ತಿಂದರೂ ಪರವಾಗಿಲ್ಲ, ಹೇಗೋ ಜೀವಿಸಿದರಾಯಿತು ಎಂಬ ಭಾವನೆ ಎಲ್ಲೆಲ್ಲೂ, ಎಲ್ಲರಲ್ಲೂ ಬೆಳೆಯುವುದು.

* ಹಣಕ್ಕೆ ಹಿಂದೆಲ್ಲೂ ಸಿಗದಷ್ಟು ಪ್ರಾಧಾನ್ಯತೆ ಸಿಕ್ಕಿ, ಎಲ್ಲರೂ ಹಣದ ದಾಸರಾಗುತ್ತಾ ಮನುಷ್ಯತ್ವವನ್ನೂ, ಅಂತಃಕರಣವನ್ನೂ ಕಳೆದುಕೊಳ್ಳುವುದು.

* ಪೈಪೋಟಿ ಒಂದು ಪ್ರಮುಖ ಜೀವನ ವಿಧಾನವಾಗಿ, ಮಕ್ಕಳೂ, ಎಳೆಯರೂ, ಹೆಂಗಸರೂ, ದುರ್ಬಲರೂ ಈ ಚಕ್ರದಲ್ಲಿ ಸಿಕ್ಕು, ತಮ್ಮ ಸ್ವಾಭಾವಿಕ

ಮಾರ್ದವತೆ, ಮಾರ್ತೃತ್ವ, ಮಾನವೀಯತೆಗಳನ್ನು ಕಳೆದುಕೊಳ್ಳುವುದು. ರಾಕ್ಷಸತನವನ್ನು ಮೈಗೂಡಿಸಿಕೊಂಡು ಬಾಲಾಪರಾಧಿಗಳೂ, ಭಿಕ್ಷುಕರೂ, ವೇಶ್ಯೆಯರೂ, ಕುಡುಕರೂ, ಕಳ್ಳರೂ, ಕೊಲೆಗಾರರೂ ಆಗುವ ಸಂಖ್ಯೆ ಹೆಚ್ಚುವುದು.

* ವ್ಯಾಪರವೇ ಒಂದು ಜೀವನೋದ್ದೇಶವೆಂಬಂತೆ ಜೀವನದ ಎಲ್ಲಾ ಅಂಗಗಳನ್ನೂ ವ್ಯಾಪಾರ ಆಕ್ರಮಿಸಿ, ಇದಕ್ಕೆ ಅನುವಾಗುವಂತೆ ಬಡ್ಡಿ ಸಾಲ, ಶೇರು ವ್ಯವಹಾರ, ಲಾಟರಿ ಮುಂತಾದ ಆತ್ಮಘಾತಕ, ಆರ್ಥಿಕ ಚಟುವಟಿಕೆಗಳು ವ್ಯಾಪಕವಾಗುತ್ತವೆ. ಬಡವರು, ದುರ್ಬಲರು ಇವುಗಳ ಆಸೆ-ದುರಾಸೆಯ ಬೆನ್ನುಹತ್ತಿ ಇರುವೆಲ್ಲವನ್ನೂ ವಂಚಕೆ, ಶ್ರೀಮಂತರ ಮಡಿಲಿಗೆ ಸುರಿದು ಮತ್ತಷ್ಟು ನಿರ್ಗತಿಕರಾಗುತ್ತಿರುವುದು.

* ರಸ್ತೆ ನಿರ್ಮಾಣ, ರಿಪೇರಿ ಮುಂತಾದ ಕಾಮಗಾರಿಗಳಿಂದ ಬೆರಳೆಣಿಕೆಯ ಈ ಜನಕ್ಕಷ್ಟೇ ಲಾಭವಾಗುವ ಕಾರಣ, ಇವುಗಳಿಗೆ ವಿಶ್ವವ್ಯಾಪಾರೀ ಸಂಸ್ಥೆ, ಹಣಕಾಸು ಸಂಸ್ಥೆಗಳಿಂದ ಹಿಗ್ಗಾಮುಗ್ಗಾ ಸಾಲ ಪಡೆದು, ಇಡೀ ದೇಶವನ್ನು ಈ ಬಡ್ಡಿ ಶ್ರೀಮಂತರಿಗೆ ಅಡವಿಟ್ಟು, ಜನರ ತಲೆಯ ಮೇಲೆ ತೀರಿಸಲಾಗದ ಸಾಲದ ಹೊರೆಯನ್ನು ಹೊರಿಸಲಾಗುತ್ತಿರುವುದು.

* ಎಲ್ಲರ ಸುಖ, ನೆಮ್ಮದಿ ಜೀವನಕ್ಕೆ ಬೇಕಾದ ಆಹಾರ ಧಾನ್ಯಗಳನ್ನು ಬೆಳೆಯಲು ಪ್ರೋತ್ಸಾಹಿಸುವ ಬದಲು, ಹೆಂಡ, ಸಿಗರೇಟು ಮುಂತಾದ ಮಾದಕ ವಸ್ತುಗಳ ತಯಾರಿಕೆ ಮತ್ತು ಕೆಲವೇ ಜನ ಶ್ರೀಮಂತರು ಮಾತ್ರ ಬಳಸಬಹುದಾದ ಅಥವಾ ಒಂದೆರಡು ಕ್ರೂರ, ಒಂದೆರಡು ಕ್ಷಣಗಳ ಭ್ರಾಮಕ ಸುಖ ತಂದುಕೊಡಬಲ್ಲ ವಸ್ತುಗಳ ತಯಾರಿಕೆಗೆ ಉತ್ತೇಜನ ದೊರೆಯುವುದು. ಈ ಉದ್ಯಮಕ್ಕಾಗಿ 'ಜಾಹೀರಾತು' ಮಾಧ್ಯಮವನ್ನು ಅಭಿವೃದ್ಧಿಪಡಿಸಿ, ಹಿಂದೆಂದೂ ಕಾಣದಷ್ಟು ವ್ಯಾಪಕವಾಗಿ ಬಳಸುವುದು.

ಇವೆಲ್ಲವುಗಳ ಸರಮಾಲೆಯನ್ನು ಹೆಣೆದು, ಭ್ರಾಮಕ ಪ್ರಪಂಚವೊಂದನ್ನು ಸೃಷ್ಟಿಸಿ, ಜನರನ್ನು ಹಾಳುಮಾಡಲು ಕಂಪ್ಯೂಟರ್ ಎಂಬ ಮಹಾ ಪೆದ್ದು ಯಂತ್ರವನ್ನು ಎಲ್ಲಾ ಕಡೆ ತರಲಾಗುತ್ತಿರುವುದು.

ಇವಕ್ಕೆ ಪೂರಕವಾಗಿ ಸಿನಿಮಾ, ಟೆಲಿವಿಷನ್, ದೂರಸಂಪರ್ಕ ಸಾಧನಗಳನ್ನು ದುರ್ಬಳಕೆ ಮಾಡಿಕೊಳ್ಳುವುದು.

ಟೆಲಿವಿಷನ್ ಬಡಜನರ, ವಿದ್ಯಾರ್ಥಿಗಳ ಪಾಲಿಗೆ ಶಾಪವಾಗಿ ಪರಿಣಮಿಸಿದೆ. ಮಧ್ಯಮ ವರ್ಗದವರು ಮೂರು ಹೊತ್ತು ಸಿನಿಮಾ, ಧಾರವಾಹಿಗಳ ಭ್ರಾಮ ಪ್ರಪಂಚದಲ್ಲಿ ಮುಳುಗಿ ಜೀವನದ, ಸಮಾಜದ ನಿಜವಾದ ಸಮಸ್ಯೆಗಳನ್ನು ನೋಡಲಾರದಷ್ಟು ಕುರುಡರೂ, ಹೆಡ್ಡರೂ ಆಗುತ್ತಿರುವುದು.

ಇಂತಹ ಇಡಿ ಮಾನವತೆಗೆ ವಿರುದ್ಧವಾಗಿರುವ ಈ ಎಲ್ಲಾ ಯೋಜನೆಗಳನ್ನು ಹಿಮ್ಮೆಟ್ಟಿಸಲು ಸಾಧ್ಯವಿರುವ ಎಲ್ಲಾ ಬಗೆಯ ಪ್ರಯತ್ನಗಳನ್ನೂ, ಹೋರಾಟಗಳನ್ನೂ ವಿಶ್ವದ ಎಲ್ಲಾ ಪ್ರಜ್ಞಾವಂತರೂ, ಹೃದಯವಂತರೂ ಒಟ್ಟಾಗಿ ಶ್ರಮಿಸಿದಲ್ಲಿ ಮಾತ್ರ ರಾಸಾಯನಿಕ ಪೇಯಗಳ ಬದಲು ನೀರಾದಂತಹ ಪ್ರಾಕೃತಿಕ ಪೇಯ ಜನಪ್ರಿಯವಾಗಿ ಸಮಾಜಕ್ಕೆ ಒಳಿತನ್ನುಂಟುಮಾಡಲು ಸಾಧ್ಯ.

* * *

ನನ್ನ ಚೊಚ್ಚಲ ಕೃತಿ

– *ಜಿ.ಪಿ.ರಾಜರತ್ನಂ*

(ರಾಜರತ್ನಂರವರ ಜನ್ಮ ಮಾಹೆಯ ನೆನಪಿನಲ್ಲಿ. - ಸಂ)

ಹುಟ್ಟಿದ ಮೊದಲನೇ ಮಗು ಗಂಡಾದರೆ, ಅದು 'ಚೊಚ್ಚಿಲು ಗಂಡು', ಎರಡನೇ ಮಗು ಹೆಣ್ಣಾದರೆ, ಅದು 'ಚೊಚ್ಚಿಲ ಹೆಣ್ಣು'. ಅದು ಅಷ್ಟೋ ಇಷ್ಟೋ ಮಕ್ಕಳಲ್ಲಿ ಯಾರು ಹೆಚ್ಚು ಗುಣವಂತರಾಗುತ್ತಾರೋ, ವಿದ್ಯಾವಂತರಾಗುತ್ತಾರೋ, ಬುದ್ಧಿವಂತರಾಗುತ್ತಾರೋ, ಶೀಲವಂತರಾಗುತ್ತಾರೋ, ಹಣವಂತರಾಗುತ್ತಾರೋ ಅವರು ಆಯಾ ವರ್ಗದಲ್ಲಿ 'ಚೊಚ್ಚಿಲು'. ವ್ಯಾಪಕವಾದ ಈ ಅರ್ಥವನ್ನು ಇಟ್ಟುಕೊಂಡರೆ 'ಯೆಂಡ್ಕುಡ್ಕ ರತ್ನ' ಒಂದು ಚೊಚ್ಚಿಲು ಕೃತಿ.

೧೯೩೩ ರಲ್ಲಿ ೨೪ ಪುಟಗಳ ಪುಟ್ಟ ಪುಸ್ತಕವಾದ 'ಯೆಂಡ್ಕುಡ್ಕ ರತ್ನ'ಕ್ಕೆ ಯಾರೂ ಪ್ರಕಾಶಕರು ಕಾಣಿಸಲಿಲ್ಲ. ಪ್ರಕಟಣೆಗೆ ತಗಲುವ ಖರ್ಚು ಸುಮಾರು ಮೂವತ್ತೈದು ರುಪಾಯಿ. ಮೂವತ್ತೈದು ಆಣೆ ಕೂಡ ಇರಲಿಲ್ಲ ರತ್ನನ ಹತ್ತಿರ. ಹಿಂದಿನ ವರ್ಷ ತನ್ನ ಒಂದು ಕವನಕ್ಕೆ ಬಂದಿದ್ದ ಶ್ರೀ ಅವರ ಚಿನ್ನದ ಪದಕ ಮಾರಿ ಬಂದದ್ದರಲ್ಲಿ ಇದನ್ನು ತಾನೇ ಪ್ರಕಟಿಸಿದರೆ ಹೇಗೆ ಅನ್ನಿಸಿತು. ಅದರೆ ಆ ಪದಕವನ್ನು ಹೆಂಡತಿಗೆ ಕೊಟ್ಟುಬಿಟ್ಟಿದ್ದೆ. ಪುಸ್ತಕ ಪ್ರಕಟಿಸಬೇಕೆಂಬ ಸ್ವಾರ್ಥದಿಂದ ಸಂಕೋಚವಿಲ್ಲದೆ ಅವಳನ್ನು ಕೇಳಿದಾಗ– "ಇಂತಹ ಪದಕಗಳನ್ನು ಮಾಡಿಸಿಕೊಡುವುದಕ್ಕೆ ನೀವೇ ಇರುವಾಗ, ನಿಮಗೆ ಕೊಡೋದಕ್ಕೆ ನನಗೇನು ಕಷ್ಟ?" ಅಂತ ನಿಸೂರಾಗಿ ಕೊಟ್ಟೇಬಿಟ್ಟಳು, ಮಹರಾಯಿತಿ! ಆಕೆ ಕೊಟ್ಟ ಶುಭಗಳಿಗೆ, ಆಕೆ ಕೊಟ್ಟ ಮಂಗಳದ ಮನಸ್ಸು, ಆ ಪುಸ್ತಕ ಪ್ರಕಟವಾಯಿತು. ಮುಂದೆ ಇನ್ನೂ ಬೆಳೆಯಿತು. ಆಕೆ ಕಣ್ಮರೆಯಾಗಿ, ರತ್ನನೂ ಕಣ್ಮರೆಯಾಗಿ ಹೋಗಿದ್ದರೂ ಪದಕದ ಸಹಾಯದಿಂದ ಪ್ರಕಟವಾದ 'ಯೆಂಡ್ಕುಡ್ಕ ರತ್ನ' ಬೆಳೆದು 'ರತ್ನನ ಪದಗಳು' ಆಗಿ ಆ ಪುಸ್ತಕ ಇನ್ನೂ ಜೀವಂತವಾಗಿದೆ.

ಪದಕವನ್ನು ಮಾರಬೇಕೆಂದು ಗೊತ್ತಿದ್ದ ಒಬ್ಬರು ಶೆಟ್ಟರ ಹತ್ತಿರ ರತ್ನ ಹೋದಾಗ, ಅವರು ಏಕೆ, ಏನು, ಎತ್ತ, ಎಂದೆಲ್ಲಾ ವಿಚಾರಿಸಿದರು. ಪದಕವನ್ನು ಅಂಗೈಯಲ್ಲಿ ತೂಕ ಹಾಕಿ– "ರಾಜಾ, ಇದನ್ನು ಮಾರಬೇಡ. ಮಾರಿ ಕಳಕೋಬೇಡ. ಕಳಕೊಂಡು ಆಮೇಲೆ ಕೊರಗಬೇಡ. ನಿನ್ನ ಪುಸ್ತಕ ಪ್ರಕಟಿಸೋಕೆ ನಿನಗೆ ಮೂವತ್ತೈದು ರುಪಾಯಿ ಬೇಕುತಾನೆ? ಕೊಡುತ್ತೇನೆ, ತೆಗೆದುಕೊ, ಪದಕ ನನ್ನ ಹತ್ತಿರ ಇರಲಿ. ನಿನಗೆ ಯಾವಾಗ ಆಗುತ್ತೋ ಆವಾಗ ತನ್ನ ಮೂವತ್ತೈದು ನನಗೆ ಕೊಟ್ಟು, ನಿನ್ನ ಪದಕ ತೆಗೆದುಕೊಂಡು ಹೋಗು" ಎಂದರು.

ಪದಕ ಅವರ ಹತ್ತಿರ ಉಳೀತು. ರತ್ನನಿಗೆ ಮೂವತ್ತೈದು ಸಿಕ್ಕಿತು. ಸಾವಿರ ಪ್ರತಿ 'ಯೆಂಡ್ಕುಡ್ಕ ರತ್ನ' ಪ್ರಕಟವಾಯಿತು. ಸ್ವಂತಕ್ಕೆ ಕೆಲವು ಪ್ರತಿಗಳನ್ನು ಇಟ್ಟುಕೊಂಡು ಉಳಿದದ್ದನ್ನ ಮಾರಿದ. ಮೈಸೂರಿನ ಪ್ರೋಗ್ರೆಸ್ ಬುಕ್ ಸ್ಟಾಲಿನವರೂ ಬೆಂಗಳೂರು

ರಾಮಮೋಹನ ಕಂಪೆನಿಯವರೂ ಆ ಪ್ರತಿಗಳನ್ನು ಒಂದಾಣೆಗೊಂದರಂತೆ ಕೊಂಡುಕೊಂಡರು. ಮಾರಿ ಬಂದ ನಗದು ಹಣದಲ್ಲಿ ಶ್ರೇಷ್ಠಿ ಮಿತ್ರರಿಗೆ ಅವರ ಮೂವತ್ತೈದು ತಲುಪಿಸಿ ರತ್ನ ತನ್ನ ಪದಕವನ್ನು ಹಿಂದಕ್ಕೆ ಪಡೆದ. 'ಯೆಂಡ್ಕುಡ್ಕ ರತ್ನ'ದ ಪ್ರಕಟನೆ ಕೊಟ್ಟ ಲಾಭಾಂಶದಿಂದ ವಿವೇಕಾನಂದರ ಭಾಷಣಗಳು ಮತ್ತು ಲೇಖನಗಳ ಏಳು ಸಂಪುಟಗಳನ್ನು ರತ್ನ ಕೊಂಡುಕೊಂಡ.

ರತ್ನನ ಪ್ರಪಂಚ

ಈ ಮಣ್ಣು ನೆಲದ ಮೇಲೆ-ತನ್ನಂತೆಯೇ ಮೃಣ್ಮಯರಾದ ಸಣ್ಣ ಜನರ ನಡುವೆ-ಬೆರೆತು ಬದುಕಬೇಕು ಎಂಬುವನು ರತ್ನ. ಈ ಬದುಕನ್ನು ಬದುಕುತ್ತಲೇ ಮಣ್ಣಿನಿಂದ ಆದಷ್ಟು ಮೇಲೆದ್ದು, ಸಣ್ಣತನವನ್ನು ಆದಷ್ಟು ಸಣ್ಣ ಮಾಡಿಕೊಂಡು, ನೆನ್ನೆಗಿಂತ ಇಂದು ಇಷ್ಟು ಮೇಲಾಗಿ ಬದುಕಿದರೆ, ಅಷ್ಟರಲ್ಲಿಯೇ ತೃಪ್ತಿಪಡುವವನು ರತ್ನ. ಹೀಗೆ, ಬದುಕಿನಲ್ಲಿ ನೆಮ್ಮದಿ ಕಾಣುವುದಕ್ಕೆ, ತೃಪ್ತಿ ಪಡೆಯುವುದಕ್ಕೆ ರತ್ನ ಯಾವ ನಂಬಿಕೆಯಿಟ್ಟುಕೊಂಡು ನಡೆದಿದ್ದಾನೆ ಎಂಬುದು **'ರತ್ನನ್ ಪರ್ಪಂಚ'**ದಲ್ಲಿ ರೂಪುಗೊಂಡಿದೆ.

ರತ್ನನಿಗೆ ವಿಶ್ವದ ಪ್ರಜೆಯಾಗಿ, ಭಾರತದ ನಾಗರಿಕನಾಗಿ, ಕರ್ಣಾಟಕದ ವ್ಯಕ್ತಿಯಾಗಿ ಮೆರೆಯಬೇಕೆಂಬ ಅತಿಯಾಸೆಯಿಲ್ಲ. ಅವನ ಮೈಸೂರಿನ ಒಂದು ಮೂಲೆಯಲ್ಲಿ, ಅವನ ಮೈಸೂರಿಗೆ ಅವನು ಮರ್ಯಾದೆ ತರುವಂತೆ ಬದುಕಿದರೆ ಸಾಕು. ವಿಶ್ವವು ಬೇಡ, ಎಂದಲ್ಲ. ಆದರೆ ಇದು ಮೊದಲು ಬೇಕು. ಬಿ.ಎಂ.ಶ್ರೀ. ಅವರು ಹೇಳೀದಂತೆ-"ದಿಳ್ಳಿ ನನಗೆ ದೂರ-ನನ್ನ ಹಳ್ಳಿ ನನಗೆ ಹತ್ತಿರ". ಹೇಳಿಕೊಳ್ಳುವುದಕ್ಕೆ ಒಂದು ಊರು-'ಸಾಕು ನನಗೊಂದು ಹೆಜ್ಜೆ!' ಹಾಗೆಯೇ-ತಲೆಯ ಮೇಲೆ ಒಂದು ಸೂರು. ಸೂರು ತಕ್ಕಮಟ್ಟಿಗೆ ವಿಶಾಲವಾಗಿದ್ದರೆ, ಗೋಡೆಗಳಿಲ್ಲದಿದ್ದರೂ, ಸೂರ್ಯನ ಬಿಸಿಲಿನಿಂದಲೂ, ಮಳೆಯ ಹೊಡೆತದಿಂದಲೂ ಪಾರಾಗಿ, ಜೀವವನ್ನು ಬಿಗಿಹಿಡಿದಿರಬಹುದು. ಅದರಂತೆಯೇ-ಮಲಗುವುದಕ್ಕೆ ಭೂಮಿತಾಯಿಯ ಮಂಚ. ಮರದ ಕಬ್ಬಿಣದ ಮಂಚಗಳಾದರೆ, ಹಾಸಿಗೆ ಸುಪ್ಪತ್ತಿಗೆಗಳಾದರೆ, ಅವುಗಳನ್ನು ಸಂಪಾದಿಸುವ ಶ್ರಮ, ಅವುಗಳನ್ನು ಕಾಪಾಡುವ ಕಷ್ಟ-ಇದರಿಂದ ನೆಮ್ಮದಿಗೆ ಭಂಗ. ಭೂಮಿತಾಯಿಯಾದರೋ, ಎಲ್ಲಿ ಅಂದರೆ ಅಲ್ಲಿ, ತನ್ನ ಮಗುವಿಗೆ ತನ್ನ ತೊಡೆಯನ್ನು ತೊಟ್ಟಿಲು ಮಾಡಿಕೊಡುತ್ತಾಳೆ. ಅಲ್ಲದೆ, ಹಗಲೆಲ್ಲ ಬೆವರು ಹರಿಸಿ ದುಡಿದು ಬಂದವನಿಗೆ ಭೂಮಿತಾಯಿಯ ಮಂಚ-ಅದೇ ಸ್ವರ್ಗದ ನಂದನ.

ಇದಿಷ್ಟೂ ಮನೆಯ ಮಟ್ಟಿಗಾಯಿತು. ಇನ್ನು ಮನೆಯ ಒಳಗೆ? ಕೈ ಹಿಡಿದವಳು ಪುಟ್ನಂಜಿ ನಗುನಗುತ್ತ ಉಪ್ಪುಗಂಜಿ ಕೊಟ್ಟರೆ, ಪೂರ್ತಿಯಾಯಿತು ರತ್ನನ ಪ್ರಪಂಚ! ಗೃಹಿಣೀ ಗೃಹಮುಚ್ಯತೇ! ಗೃಹಜೀವನದ ಈ ಸಾಮರಸ್ಯವನ್ನು ರತ್ನ-ನಂಜಿ ಇವರ ಹಾಡುಗಳಲ್ಲಿ ಕಾಣಬಹುದು.

ರತ್ನ ಹೇಳುತ್ತಾನೆ-"ಅನ್ನ ವಸ್ತ್ರಗಳ ಬಡತನ ಏನೇ ಇದ್ದರೂ ಇರಲಿ: ಮನಸ್ಸಿನ ಬಡತನ ಮಾತ್ರ ಇರಬಾರದು". ಅನ್ಯೋನ್ಯವಾದ ಸಂಸಾರದಲ್ಲಿ ಹೆಣ್ಣು ಮರದಂತೆ, ಗಂಡು ಬಳ್ಳಿಯಂತೆ; ಆದರೂ ಹೆಣ್ಣು ತಾನು ಮರದಂತೆ ಮೆರೆಯುವುದಿಲ್ಲ. ಅದರಿಂದಲೇ ಗಂಡಿಗೆ ಆ ಹೆಣ್ಣಿನ ಬಗ್ಗೆ ಅಷ್ಟು ಅಭಿಮಾನ!

ಮನೆಗಾಗಿ ದುಡಿಯುವ ಜೀವ ಇವನು. ಮನೆಯನ್ನು ನಡೆಸುವ ಜೀವ ಅವಳು. ಇದರಲ್ಲಿ ದೊಡ್ಡದು ಯಾವುದು? ಚಿಕ್ಕದು ಯಾವುದು? ಈಶ್ವರೇಚ್ಛೆಯಂತೆ ಸುಖವಾಗಿ, ತೃಪ್ತಿಯಿಂದ ಬದುಕಿದರೆ–ಅದು ಬದುಕು! ಎಷ್ಟೇ ಸರಸದ ಸಂಸಾರವಾದರೂ, ಮನುಷ್ಯಮಾತ್ರರಾದ್ದರಿಂದ ವಿರಸದ ಕ್ಷಣಗಳೂ ಇಲ್ಲದೇ ಇಲ್ಲ. ಆದರೆ ಅದು ಕ್ಷಣ ಮಾತ್ರ. ದಾಂಪತ್ಯದ ದಾರಿಯನ್ನು ತಿಳಿದವನು, ತನ್ನಾಕೆಯಿಂದ ತಾನು, ತನ್ನ ಮನೆಯಾಕೆಯಿಂದ ತನ್ನ ಮನೆ ಎಂಬುದನ್ನು ಒಪ್ಪುತ್ತಾನೆ. ಯಾವ ಗಂಡನ್ನೆ ಆಗಲಿ, ಹಾಲಿನಲ್ಲಿ ಅದ್ದುವವಳು ಅದೇ ಹೆಣ್ಣು, ನೀರಿನಲ್ಲಿ ಅದ್ದುವವಳೂ ಅದೇ ನಾರಿ!

ಮೈಮುರಿದು ಬೆವರು ಹರಿಸಿ ದುಡಿಯುವುದರಲ್ಲಿ ರತ್ನನಿಗೆ ವಿಶ್ವಾಶ. ಇನ್ನು, 'ತಂದದ್ರಲ್ ಒಸಿ ಮುರ್ಸಿ'. ದುಡಿದು ತಂದದ್ದರಲ್ಲಿ ಎಲ್ಲವನ್ನೂ ತನಗಾಗಿ ಮುಗಿಸಿಕೊಳ್ಳುವುದು–ಅದು ಒಂದು ಅತಿ. ಸಾಲಮಾಡಿ ಬದುಕು ಕೆಡಿಸಿಕೊಳ್ಳುವುದು, ಅದು ಒಂದು ಅತಿ! ಅತಿಗಳನ್ನು ಒತ್ತರಿಸಿ, ಮಿತಿಯನ್ನು ಹಿಡಿದರೆ ಮಾತ್ರ ನೆಮ್ಮದಿ ಎಂಬುದು ಬುದ್ಧನ ಮಧ್ಯಮ ಮಾರ್ಗ! ಅಶೋಕನು ತನ್ನ ಶಾಸನದಲ್ಲಿ ಹೇಳಿದ ಅಲ್ಪವ್ಯಯತಾ, ಅಲ್ಪಭಾಂಡತಾ–ಸ್ವಲ್ಪವಾಗಿ ಕರ್ಚು ಮಾಡಬೇಕು, ಸ್ವಲ್ಪವಾಗಿ ಕೂಡಿಡಬೇಕು–ಎಂಬುದರ ಸಣ್ಣ ನೆರಳು ಈ ಪಂಕ್ತಿಯಲ್ಲಿ ಉಂಟು. ಆದರೂ ಒಮ್ಮೊಮ್ಮೆ–

ನಾಳೇನ್ಕೊಂಡಿ ನರಳೋದೆಲ್ಲ
ಬೆಪ್ಗೊಳ್ ಮನಸಿನ್ ಕನಸು;
ನಾಳೆ ಪಾಡು! ನಾಳೆ ಬಾರ!
ಈವತ್ ಇರ್ಲಿ ಮನಸು!

ಎನಿಸಿದ್ದುಂಟು. ಆದರೆ ಮೊದಲೆ ಹೇಳಿದಂತೆ, ಕೂಡಿಡುವು ಆಗದಿದ್ದರೂ ಬಾಧಕವಿಲ್ಲ; ಸಾಲದೆ ಬಂದಿಂತೆಂದು ಸಾಲ ತೆಗೆಯಬೇಕೆನ್ನುವುದಾದರೆ,– 'ಅದೊಂದಕ್ಕಳುಕುವೆ, ಅದೊಂದಕ್ಕಂಜುವೆ!'

ಮೈ ಬದುಕುವುದಕ್ಕೆ, ಮೈ ಬೆಳೆಯುವುದಕ್ಕೆ, ಮೈ ಆರೋಗ್ಯವಾಗಿ ಇಡುವುದಕ್ಕೆ ಎಷ್ಟೆಷ್ಟು ದುಡಿಯಬೇಕೋ ಅದಕ್ಕೆ ಬೇಕಾದ ದಾರ್ಢ್ಯವನ್ನು ಒದಗಿಸುವುದು ಮನಸ್ಸಿನ ಬದುಕು, ಮನಸ್ಸಿನ ಬೆಳವಣಿಗೆ, ಮನಸ್ಸಿನ ಆರೋಗ್ಯ. ಇದಕ್ಕೆ ಸಹಾಯಕವಾದದ್ದು ಸದ್ಗ್ರಂಥಗಳ ಸಹವಾಸ. ಸದ್ಭಾವನೆಗಳ ಸಾಹಚರ್ಯ. ಸದ್ವಾಕ್ಯಗಳ ಉಚ್ಚಾರ ಮತ್ತು ಸದ್ವ್ಯವಹಾರದ ಆಚಾರ. ಇದರೊಳಗೆ ಮೊದಲಿನ ಎರಡಕ್ಕೆ ಬಾಷೆಗಳ ಬಂಧನವಿಲ್ಲ, ಕಡೆಯ ಎರಡಕ್ಕೆ ಕನ್ನಡದ ಕಟ್ಟುಪಾಡು–ಅದೇ ಸಂಯಮ. ಇದು ಅನುಲ್ಲಂಘ್ಯ ಎಂಬುದನ್ನು ರತ್ನನ **'ಕನ್ನಡ್ ಪದಗೊಳು'** ಪದ್ಯದಲ್ಲಿ ಕಾಣಬಹುದು.

ಯಾವುದೇ ಭಾಷೆಯ ಮೂಲಕವಾದರೂ ರತ್ನನ ಮನಸ್ಸು ಮೇಲೇಳಬಹುದು. ಆದರೆ ಮೇಲೆದ್ದ ರತ್ನನ ಮನಸ್ಸು ವ್ಯಕ್ತವಾಗಬೇಕಾದರೆ, ಕನ್ನಡವಲ್ಲದೆ ರತ್ನನಿಗೆ ಬೇರೆ ಶರಣಿಲ್ಲ. ರತ್ನ ಮತ್ತೈದೆ; ಕನ್ನಡ ರತ್ನನನ್ನು ಕೈಹಿಡಿದ ಗಂಡ. ರತ್ನನ ಕನ್ನಡ ಸರ್ವಕನ್ನಡ: ಹಳತು, ನಡುವಿನದು, ಹೊಸದು, ಮೈಸೂರು, ಮಂಗಳೂರು, ಧಾರವಾಡ–ಗ್ರಂಥಸ್ಥ, ವ್ಯಾವಹಾರಿಕ, ಗ್ರಾಮ್ಯ–ಸಂಸ್ಕೃತ, ದೇಶ್ಯ, ಪ್ರಾಕೃತ.

ದುಃಖದ ದಾಳಿ ತನ್ನ ಮೇಲೆ ಬಂದರೂ, ಬಂದದ್ದರಲ್ಲಿ ತಾನು ಪಾಲುಗೊಳ್ಳುತ್ತಿಲ್ಲ ಎಂದು ರತ್ನ ಹೇಳುತ್ತಾನೆ. ಬಂದ ದುಃಖವನ್ನು **'ದುಕ್ಕ'** ಎಂಬ ಕವನದಲ್ಲಿ ಹೇಳಿರುವಂತೆ ನುಂಗಿಕೊಳ್ಳುವುದು ಅಭ್ಯಾಸವಾಗಿದ್ದರೂ, ನಮ್ಮಷ್ಟಕ್ಕೆ ನಾವಾಗಿ, ಇದ್ದುದರಲ್ಲಿ ಹಾಯಾಗಿ ಬಾಳಬೇಕೆಂದರೆ, ಸುತ್ತಿನವರು ಅನೇಕ ಸಲ ಸುಮ್ಮನೆ ಕಾಟ ಕೊಡುವುದುಂಟು. ಅಂಥ ಸಂಧರ್ಭಗಳಲ್ಲಿ, ಮನಸ್ಸಿನೊಳಗೆ ಕೊರತೆಪಡುತ್ತ ಕೊರಗುವುದಕ್ಕಿಂತ, ಅದನ್ನು ಹೀಗೆ ಗದ್ಯ ಪದ್ಯಗಳ ಮೂಲಕ ಕಾರಿಬಿಡುವುದರಲ್ಲಿ ರತ್ನನಿಗೆ ನಂಬಿಕೆ ಹೆಚ್ಚು. **'ರತ್ನನ್ ಮಾತು'** ಎಂಬುದು ಇದಕ್ಕೆ ನಿದರ್ಶನ. ಈ ಒಂದು ಸುಲಭೋಪಾಯದಿಂದ ಮನಸ್ಸು ಕಟ್ಟಿಕೊಳ್ಳದ ಹಾಗೆ ಶುದ್ಧಿ ಮಾಡಿಟ್ಟುಕೊಳ್ಳುವುದು ರತ್ನನಿಗೆ ಸಾಧ್ಯವಾಗಿದೆ.

ಹೊಟ್ಟೆ ಬಟ್ಟೆಗಳಿಗೆ ಬಡತನವಿದ್ದರೂ ತೊಂದರೆಯಿಲ್ಲ, ಆದರೆ ಮನಸ್ಸಿನ ಬಡತನ ಮಾತ್ರ ದೊಡ್ಡ ಮಾರಿ ಎಂದು ರತ್ನ ಹೇಳುತ್ತಾನೆ. ಮನಸ್ಸಿನ ಬಡತನಕ್ಕೆ ಅಂಟಿಕೊಂಡದ್ದು ನಡತೆಯ ಬಡತನ. ಒಂದು ಕೈಯಿಂದ ಇನ್ನೊಂದು ಕೈಯಿನ ಕೊಳೆ ಕಳೆದುಹೋಗುವಂತೆ–ಮನಸ್ಸಿನ ಬಡತನ ಕಳೆದಷ್ಟೂ ನಡತೆಯ ಬಡತನ ಕಳೆಯುತ್ತದೆ. ನಡತೆಯ ಬಡತನ ಕಳೆದಷ್ಟೂ ಮನಸ್ಸಿನ ಬಡತನ ಮಾಯವಾಗುತ್ತದೆ. ನಡತೆಯನ್ನು ಕುರಿತ ಈ ನಂಬಿಕೆ, ರತ್ನ ಕಾಲೂರಿ ಸ್ಥಿರವಾಗಿ ನಿಂತು ಹೆಜ್ಜೆಯೆತ್ತಿ ಇಡುವುದಕ್ಕೆ ಸಹಕಾರಿಯಾಗಿರುವಂತೆಯೇ 'ಕಷ್ಟಕ್ಕೆ ನಗುಮುಖವಾಗಿ ನೆಗೆಯುವ' ಪ್ರಕೃತಿಯ ಪರಿಪಾಲನೆ ಉಸಿರಿನ ಸ್ವಾಸ್ಥ್ಯವನ್ನು ರತ್ನನಿಗೆ ಕಾಪಾಡಿಕೊಟ್ಟಿದೆ.

ಹೀಗೆ ಏನೇ ಪ್ರಯತ್ನ ನಡೆಸಿ, ತನ್ನ ಶುದ್ಧಿಯನ್ನು ತಾನು ಸಾಧಿಸಿಕೊಂಡರೂ, ದೈವದ ಕರಾವಂಲಬನವಿಲ್ಲದೆ ಇದೆಲ್ಲ ಆಗುತ್ತಿರಲಿಲ್ಲ ಎಂಬುದು ರತ್ನನ ಕಟ್ಟಕಡೆಯ ನಂಬಿಕೆ. ಮತ್ತೆ ಅದೇ ಮಧ್ಯಮ ಮಾರ್ಗ. ದೇವರನ್ನು ಬಿಟ್ಟು ಪೌರುಷಕ್ಕೆ ಬಲವಿಲ್ಲ; ಪೌರುಷವಿಲ್ಲದವನಿಗೆ ದೇವರು ಒಲಿಯುವುದಿಲ್ಲ. ಪೌರುಷವನ್ನು ಕುರಿತು ರತ್ನ **'ಕರ್ಮ'** ಎಂಬ ಪದ್ಯದಲ್ಲಿ ಹೇಳುತ್ತಾನೆ. ಇನ್ನು, ಪೌರುಷ ಪೂರ್ಣವಾಗಲು ಬೇಕಾದ ದೇವರು. ದೇವರು ಎಂಬುದು ರತ್ನ ಕಾಣದ ತತ್ವ, ಆದರೂ ರತ್ನನಿಗೆ ಅದರಲ್ಲಿ ಅಪಾರವಾದ ನಂಬಿಕೆ. ಅದು ಇಲ್ಲವೆಂದವರೊಡನೆ ರತ್ನನಿಗೆ ಚರ್ಚೆ ಬೇಡ. ರತ್ನ ಹೇಳುತ್ತಾನೆ:

ದೇವ್ರ್ ಔನಂತೆ! ದೇವ್ರ್ ಇಲ್ವಂತೆ!
ಯೇಳ್ಳೋರ್ ಯೇಳ್ಲಿ–ಅದಕೇನಂತೆ?
ದೇವ್ರ್ ಔನ್ ಅಂತ ನೆಂಕೊಳ್ಳುದು
ನಮಗೆ ಜೀವ–ಉಸರು!
ಔನಲ್ ನೆಮ್ಕೆ ಮಡಿಕ್ಕೊಳ್ಳಾದು
ನಮಗೆ ನಮ್ದೆ ನಸರು!

ಇದು ರತ್ನನ ಬಾಳಿನ ನಂಬಿಕೆ.

* * *

ರೈತ ತೀರ್ಪು

ಎರಡು ಸಾವಿರದ ಒಂಭತ್ತನೇ ಇಸವಿ ಡಿಸೆಂಬರ್ ಮಾಹೆಯ ಒಂದು, ಎರಡು ಮತ್ತು ಮೂರನೇ ದಿನದಂದು ಬೆಂಗಳೂರಿನ ಬಳಿ ಇರುವ ಫೈರ್ ಫ್ಲೈಸ್ ಆಶ್ರಮದಲ್ಲಿ ರೈತ ನ್ಯಾಯ ಮಂಡಲಿಯ ಸಭೆ ನಡೆಯಿತು. ಈ ಸಭೆಯಲ್ಲಿ ಕರ್ನಾಟಕದ ಎಲ್ಲ ಪ್ರದೇಶಗಳನ್ನು, ವರ್ಗಗಳನ್ನು ಪ್ರತಿನಿಧಿಸುವ ನಾವು ಮೂವತ್ತು ಮಂದಿ ಸಣ್ಣ ರೈತರು, ರೈತ ಮಹಿಳೆಯರು, ರೈತ ಕಾರ್ಮಿಕರು ನ್ಯಾಯ ಮಂಡಲಿಯ ಸದಸ್ಯರಾಗಿ ರೈತ ಸಂಶೋಧನೆಗೆ ಸಂಬಂಧಿಸಿದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಪರಿಣಿತರ ವಾದಗಳನ್ನು ಆಲಿಸಿದ್ದೇವೆ. ಇವರ ವಾದಗಳನ್ನು ಆಲಿಸಿದ ಮೇಲೆ ದೇಶದ ಸಣ್ಣ, ಅತಿಸಣ್ಣ ರೈತರ, ರೈತರ ಮಹಿಳೆಯರ, ಕೃಷಿ ಕಾರ್ಮಿಕರ ಹಿತ ದೃಷ್ಟಿಯಿಂದ ಕೃಷಿ ಸಂಶೋಧನೆಯಲ್ಲಿ ಅನೇಕ ಬದಲಾವಣೆಗಳು ಮತ್ತು ಸುಧಾರಣೆಗಳು ಆಗ ಬೇಕೆಂದು ನಮಗೆ ತೀವ್ರವಾಗಿ ಅನಿಸಿದೆ. ಈ ಹಿನ್ನೆಲೆಯಲ್ಲಿ, ಸರ್ಕಾರ, ನೀತಿ ನಿರೂಪಕರು, ವಿಶ್ವ ವಿದ್ಯಾನಿಲಯಗಳು, ಕೃಷಿ ವಿಜ್ಞಾನಿಗಳು ಒಟ್ಟಾರೆ ದೇಶದ ಸಣ್ಣ ರೈತರ ಭವಿಷ್ಯದ ಬಗ್ಗೆ ಕಾಳಜಿಯುಳ್ಳ ಜನ ಸಮುದಾಯದ ಮುಂದೆ ಈ ದಿನ ಅಂದರೆ ದಿನಾಂಕ ೩.೧೨.೨೦೦೯ ರಂದು ಬೆಂಗಳೂರಿನಲ್ಲಿ ಈ ಕೆಳಕಾಣಿಸಿದ ಶಿಫಾರಸುಗಳನ್ನು ಮಂಡಿಸುತ್ತಿದ್ದೇವೆ.

೧. ಇಂದಿನ ರೈತರು ಸಾಂಪ್ರದಾಯಿಕ ಒಕ್ಕಲುತನಕ್ಕೆ ಹಿಂತಿರುಗಲಾಗದೆ, ದುಬಾರಿ ಆಧುನಿಕ ಕೃಷಿಯನ್ನು ಮಾಡಲಾಗದೆ ಬಿದ್ದು ತೊಳಲಾಡುತ್ತಿದ್ದಾರೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರೈತ ಪರ ಸಂಶೋಧನೆಗಳ ಅಗತ್ಯವಿದೆ.

೨. ರೈತರ ಅನುಶೋಧನೆಗಳನ್ನು ಗಂಭೀರವಾಗಿ ಪರಿಗಣಿಸಿ, ಸರ್ಕಾರವು ವಿಜ್ಞಾನಿಗಳಿಗೆ ಕೊಡುವಂತೆ ಅನುಶೋಧಕರಿಗೂ ನ್ಯಾಯಯುತ ಸಂಭಾವನೆ ನೀಡಿ ಅಗತ್ಯ ಮನ್ನಣೆ ನೀಡ ಬೇಕು. ಈ ಶೋಧನೆಗಳಿಗೆ ಸೂಕ್ತ ಪ್ರಚಾರ ಸಿಗಬೇಕು

೩. ಪದೇ ಪದೆ ಖರೀದಿಸಿ ತರಬೇಕಾದ ಹಾಗೂ ಹೆಚ್ಚು ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳನ್ನು ಬೇಡುವ ಹೈಬ್ರೀಡ್ ತಳಿ ಸಂಶೋಧನೆಗಳು ಬೇಡ. ಬದಲಿಗೆ ರೈತರೇ ಉತ್ಪಾದಿಸಬಹುದಾದ, ಪರಿಸರಕ್ಕೆ ಹೊಂದಿಕೊಳ್ಳುವ ಬರ ನಿರೋಧಕ ಶಕ್ತಿಹೊಂದಿರುವ, ಉತ್ತಮವಾದ, ರುಚಿಯಲ್ಲೂ ಮುಂದಿರುವ ಆಹಾರ ಹಾಗೂ ಮೇವು ನೀಡುವ ಜವಾರಿ ತಳಿಗಳ ಮೇಲೆ ಸಂಶೋಧನೆ ನಡೆಯಲಿ.

೪. ಸರ್ಕಾರ, ಖಾಸಗಿ ಮತ್ತು ಬಹು ರಾಷ್ಟ್ರೀಯ ಕಂಪನಿಗಳ ಸಹಭಾಗಿತ್ವದಲ್ಲಿ ನಡೆಸುವ ಸಂಶೋಧನೆಯ ಕುರಿತ ಮಾಹಿತಿಯನ್ನು ಪಾರದರ್ಶಕವಾಗಿ ರೈತರು ಪಡೆಯುವಂತಾಗಬೇಕು.

೫. ಕೃಷಿ ವಿಶ್ವವಿದ್ಯಾನಿಲಯಗಳು ಹಾಗೂ ಇತರ ಸರ್ಕಾರಿ ಸಂಶೋಧನಾ ಸಂಸ್ಥೆಗಳು ತಾವು ನಡೆಸುವ ಸಂಶೋಧನೆಗಳಲ್ಲಿ ರೈತರ ಸಹಭಾಗಿತ್ವಕ್ಕೆ ಅವಕಾಶ ನೀಡಬೇಕು. ಹಾಗೆಯೇ ಸಂಶೋಧನೆಯ ಲಾಭದಲ್ಲಿ ಸಮಪಾಲು ನೀಡಬೇಕು.

೬. ಖಾಸಗಿ/ ಬಹು ರಾಷ್ಟ್ರೀಯ ಕಂಪನಿಗಳು ರೈತರ ಜಮೀನುಗಳಲ್ಲಿ ಅಥವಾ ತಮ್ಮದೇ ಜಮೀನುಗಳಲ್ಲಿ ಬೀಜೋತ್ಪಾದನೆ/ಪ್ರಯೋಗ ಮಾಡುವಾಗ ರೈತರ ಆರೋಗ್ಯ ಮತ್ತು ಮಣ್ಣಿನಲ್ಲಿ ಆಗುವ ಬದಲಾವಣೆ ೩.ಪರಿಸರದ ಸುತ್ತ ಮುತ್ತಲೂ ಆಗುತ್ತಿರುವ ಪರಿಣಾಮಗಳನ್ನು ಕೃಷಿ ಇಲಾಖೆ ಹಾಗೂ ನಾಗರಿಕ ಗಂಪುಗಳು (ರೈತರು ಒಳಗೊಂಡಂತೆ) ಪರಿಶೀಲನೆ ಮಾಡಿ, ಈ ಕುರಿತ ಮಾಹಿತಿಯನ್ನು ಪ್ರತಿ ವರ್ಷ ಮಾಧ್ಯಮಗಳು ಹಾಗೂ ಗ್ರಾಮ ಸಭೆಗಳ ಮೂಲಕ ರೈತ ಸಮುದಾಯಕ್ಕೆ ತಿಳಿಸಬೇಕು. ವ್ಯತಿರಿಕ್ತ ಪರಿಣಾಮಗಳು ಬಂದಲ್ಲಿ ಆ ಕಂಪನಿಗಳನ್ನು ಜವಾಬ್ದಾರಿಗಳನ್ನಾಗಿ ಮಾಡಿ, ಹೊಣೆಗಾರರನ್ನಾಗಿ ಮಾಡಬೇಕು.

೭. ಪ್ರತಿ ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಬೇರೆ, ಬೇರೆ ಬೆಳೆಗಳಿಗೆ ಸಂಬಂಧಪಟ್ಟಂತೆ ಸಣ್ಣ ರೈತರ ಜಮೀನಿನಲ್ಲಿ ಇಲಾಖೆಯು ನಡೆಸುವ ಪ್ರಾತ್ಯಕ್ಷಿಕೆಗಳು ಮತ್ತು ರೈತ ಪಾಠಶಾಲೆಗಳು ರಾಜ್ಯ ವ್ಯಾಪ್ತಿ ನಡೆಯುವಂತೆ ವ್ಯವಸ್ಥೆ ಆಗ ಬೇಕು.

೮. ಕೃಷಿ ತಂತ್ರಜ್ಞಾನ ಹಾಗೂ ಸಂಶೋಧನೆ ಕುರಿತ ಮಾಹಿತಿ ರೈತರಿಗೆ ಅರ್ಥವಾಗುವಂತೆ ಸ್ಥಳೀಯ ಭಾಷೆಗಳಲ್ಲಿ ಸರಳವಾಗಿ ಸಿಗುವಂತಿರಬೇಕು.

೯. ಕರ್ನಾಟಕದ ಪ್ರಮುಖ ಬೆಳೆಗಳಲ್ಲೊಂದಾದ ಕಬ್ಬು ಬೆಳೆ ಬಗ್ಗೆ ಸಾಕಷ್ಟು ಸಂಶೋಧನೆ ನಡೆಯುತ್ತಿಲ್ಲ. ಕಬ್ಬು ಬೆಳೆ ಅಭಿವೃದ್ಧಿ ಹಾಗೂ ವ್ಯವಸಾಯದ ಕುರಿತು ಹೆಚ್ಚಿನ ಸಂಶೋಧನೆಗಾಗಿ ಕಬ್ಬು ಸಂಶೋಧನಾ ಕೇಂದ್ರ ಬೇಕು.

೧೦. ನಿರ್ದಿಷ್ಟ ಪ್ರದೇಶದಲ್ಲಿ ನಿಖರವಾಗಿ ಮಳೆಬೀಳುವ, ಬೀಳದಿರುವ ಹಾಗೂ ಅತಿವೃಷ್ಟಿ, ಅನಾವೃಷ್ಟಿಯಾಗುವ ಬಗ್ಗೆ ವೈಜ್ಞಾನಿಕ ಮುನ್ಸೂಚನೆ ಕೊಡುವಂತಾಗಬೇಕು. ಈ ಮಾಹಿತಿ ರೈತರಿಗೂ ಸಿಗುವಂತಾಗಬೇಕು.

೧೧. ನೀರು ಹಾಗೂ ಮಣ್ಣು ಪರೀಕ್ಷೆ ಸೌಲಭ್ಯ ಸಣ್ಣ ರೈತರಿಗೆ ಸುಲಭವಾಗಿ ಸಿಗುವಂತಾಗಲು ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳು ಬೇಕು.

೧೨. ಹಮಾಮಾನ ಆಧಾರಿತ ಬೆಳೆ ವಿಮೆ ಪದ್ಧತಿ ರದ್ದು ಮಾಡಿ ಪ್ರತಿಯೊಂದು ಹೊಲವನ್ನೇ ಒಂದು ಘಟಕವನ್ನಾಗಿ ಮಾಡಿ ಆಗಿರುವ ನಷ್ಟವನ್ನು ಪರಿಶೀಲಿಸಿ ಸೂಕ್ತ ಪರಿಹಾರ ನೀಡುವ ವ್ಯವಸ್ಥೆಯಾಗಬೇಕು.

೧೩. ರೈತ ಸಮುದಾಯದ ಮತ್ತು ಸರಕಾರದ ಸಹಭಾಗಿತ್ವದಲ್ಲಿ ಹೋಬಳಿ

ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆಗಾಗಿ ಗುಡಿಕೈಗಾರಿಕೆಗಳ ಸ್ಥಾಪನೆ ಮಾಡಬೇಕು. ಗುಡಿ ಕೈಗಾರಿಕೆಗಳು ಸ್ಥಳೀಯ ಸನ್ನಿವೇಶ ಆಧಾರಿತ ಕೃಷಿ ಉತ್ಪನ್ನಗಳಿಗೆ ಜೋಡಣೆ ಆಗಿರಬೇಕು. ಬಂಡವಾಳ ಹೂಡಿಕೆ ಸರಕಾರದ್ದಾಗಿರಬೇಕು.

೧೪. ಗ್ರಾಮ ಪಂಚಾಯತಿ ಮಟ್ಟದಲ್ಲಿ ದೇಸಿ ಬೀಜ ಬ್ಯಾಂಕ್ ಸ್ಥಾಪನೆ ಹಾಗೂ ಅವುಗಳ ಮೂಲಕ ಬೀಜಗಳ ವಿತರಣೆ, ಬೀಜ ಮೇಳ, ಪ್ರಾತ್ಯಕ್ಷಿಕೆ, ತಳಿ ಅಭಿವೃದ್ಧಿ ಮುಂತಾದ ಕಾರ್ಯಕ್ರಮಗಳು ನಡೆಯಬೇಕು.

೧೫. ರೈತ ವಿರೋಧಿಯಾದ ಬೀಜ ಕಾನೂನುಗಳು ಬೇಡ.

೧೬ ದೇಶದ ಜನಸಂಖ್ಯೆಯಲ್ಲಿ ಎಪ್ಪತ್ತು ಪ್ರತಿ ಶತವಿರುವ, ಒಟ್ಟಾರೆ ಆರ್ಥಿಕ ವ್ಯವಸ್ಥೆಗೆ ಬಹು ಮುಖ್ಯ ಕೊಡುಗೆ ನೀಡುವ ಕೃಷಿರಂಗಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಪ್ರತ್ಯೇಕವಾದ ಆಯವ್ಯಯ (ಬಜೆಟ್) ಮಂಡಿಸಬೇಕು.

೧೭. ದನಕರು, ಕುರಿಗಳಿಗೆ ಮೇಯಿಸಲು ಮೀಸಲಾಗಿಟ್ಟಿದ್ದ ಗೋಮಾಳಗಳು ಹಾಗೂ ಕೆರೆಗಳು ಈಗ ಇಲ್ಲವಾಗಿವೆ. ಅವು ಮತ್ತೆ ಸಮುದಾಯಕ್ಕೆ ಲಭ್ಯವಾಗುವಂತೆ ಮಾಡಬೇಕು.

೧೮. ಹೊಸ ತಲೆಮಾರಿನ ಮಕ್ಕಳಿಗೆ ಕೃಷಿ ಬದುಕಿನ ಬಗ್ಗೆ ಆಸಕ್ತಿ ಹುಟ್ಟಿಸಲು, ವಿವರ ತಿಳಿಯುವಂತಾಗಲು ಶಾಲಾ ಪಠ್ಯದಲ್ಲಿ ಕೃಷಿ ವಿಷಯವನ್ನೂ ಅಳವಡಿಸಬೇಕು.

೧೯. ವಿಶೇಷ ವಿತ್ತ ವಲಯ ಹಾಗೂ ಅಭಿವೃದ್ಧಿಯ ನೆಪದಲ್ಲಿ ಕೃಷಿ ಭೂಮಿಯನ್ನು ರೈತರಿಂದ ಕಿತ್ತುಕೊಳ್ಳಬಾರದು.

೨೦. ಅರಣ್ಯ ಇಲಾಖೆ ತನ್ನ ಭೂಮಿಯಲ್ಲಿ ಅಕೇಶಿಯಾ, ನೀಲಗಿರಿ ಮುಂತಾದ ಗಿಡಗಳನ್ನು ಬೆಳೆಯುವುದು ಮತ್ತು ರೈತರಿಗೆ ಉಚಿತವಾಗಿ ಹಂಚುವುದನ್ನು ನಿಲ್ಲಿಸಬೇಕು. ಅಂತರ್ಜಲ ಮಟ್ಟ ಕುಸಿಯಲು ಕಾರಣವಾದ,ಪರಿಸರಕ್ಕೆ ಮಾರಕವಾದ ಇದನ್ನು ಏಕ ಬೆಳೆಯಾಗಿ ನೆಡುವ ಬದಲು ನೆಲ–ಜಲ ಸಂರಕ್ಷಿಸುವ, ಪರಿಸರಕ್ಕೆ ಹಾಗೂ ಪ್ರಾಣಿ, ಪಕ್ಷಿ, ಮನುಷ್ಯರಿಗೆ ಅಗತ್ಯವಿರುವ ಗಿಡ ಮರಗಳನ್ನು ಬೆಳೆಸ ಬೇಕು.

೨೧. ಕೃಷಿ ನೀತಿಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಸಣ್ಣ ರೈತರು, ಕೃಷಿ ಕಾರ್ಮಿಕರು, ಬಡಗಿ, ಕುಂಬಾರ ಇತ್ಯಾದಿ ಕೃಷಿಗೆ ಪೂರಕ ಉದ್ಯಮಗಳ ಸಮುದಾಯಗಳನ್ನು ಸೇರಿಸಿಕೊಂಡು, ಸನ್ನಿವೇಶಾಧಾರಿತ ಕೃಷಿ ನೀತಿಯನ್ನು ರೂಪಿಸಬೇಕು.

೨೨. ಕರ್ನಾಟಕ ಕುರಿ ಅಭಿವೃದ್ಧಿ ಮಂಡಳಿಯಲ್ಲಿ ಹಾಗೂ ನೀತಿ ನಿರೂಪಣೆಯಲ್ಲಿ ಕುರಿಗಾಹಿಗಳಿಗೆ ಪ್ರಾತಿನಿಧ್ಯ ಬೇಕು.

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟ್‌ನ ೨೦೦೯-೨೦೧೦ನೇ ಸಾಲಿನ ಸರ್ವ ಸದಸ್ಯರ ಸಭೆ ೨೫ ರಂದು ನಡೆಯಿತು. ಕಳೆದ ಸಾಲಿನ ಆಡಿಟ್ ಆದ ಲೆಕ್ಕ ಪತ್ರವನ್ನು ಅಂಗೀಕರಿಸಲಾಯಿತು. ಕಾರ್ಯದರ್ಶಿಯವರ ವರದಿಯನ್ನು ಒಪ್ಪಲಾಯಿತು.

ಜನಪದ ಸೇವಾ ಟ್ರಸ್ಟ್‌ಗೆ ಕರ್ನಾಟಕ ಸರ್ಕಾರದ ಅನಪೇಕ್ಷಿತ ಮಕ್ಕಳ ಸ್ವೀಕೃತಿ ಮತ್ತು ದತ್ತು ಕೊಡುವ ಸಂಸ್ಥೆಯಾಗಿ ಮಾನ್ಯತೆ ದೊರೆತ ಕೆಲವು ದಿನಗಳಲ್ಲಿಯೇ ಒಂದು ವಾರದ ಗಂಡುಮಗುವನ್ನು ಸ್ವೀಕರಿಸಿಲಾಯಿತು. ಮಗು ಆರೋಗ್ಯವಾಗಿದೆ. ಮಗುವಿನ ಆರೈಕೆಗಾಗಿ ಇಬ್ಬರು ಮಹಿಳೆಯರನ್ನು ನಿಯುಕ್ತಿ ಮಾಡಲಾಗಿದೆ. ಓರ್ವ ವೈದ್ಯರೂ ಸಹ ಮಗುವಿನ ಆರೋಗ್ಯ ಪರೀಕ್ಷೆ ಮಾಡುತ್ತಾರೆ. ಮಗುವನ್ನು ದತ್ತು ಪಡೆಯಲು ಹಲವಾರು ಅರ್ಜಿಗಳು ಬಂದಿವೆ. ಸರ್ಕಾರಿ ನಿಯಮಾನುಸಾರ ಮಗುವನ್ನು ಅರ್ಹ ಕುಟುಂಬಕ್ಕೆ ದತ್ತು ಕೊಡಲಾಗುವುದು. ಮಗುವಿಗೆ 'ಆದಿತ್ಯ' ಎಂದು ನಾಮಕರಣ ಮಾಡಲಾಗಿದೆ.

ಕರ್ನಾಟಕದಲ್ಲಿ ನೀರಾ ಪ್ರಚಾರಕ್ಕಾಗಿ ಹೋರಾಟ ಮಾಡಿದ ಭಕ್ತಿತೀರ್ಥರು ಒಂದು ದಿನ ಟ್ರಸ್ಟಿನಲ್ಲಿ ಇದ್ದರು.

ರಾಜ್ಯದ ಹಿರಿಯ ಸರ್ವೋದಯ ಕಾರ್ಯಕರ್ತರು ಮತ್ತು ಸ್ವಾತಂತ್ರ್ಯ ಹೋರಾಟಗಾರರು ಆದ ಶ್ರೀ ನಾಮದೇವ ಶಣೈ ಎರಡು ದಿನ ಇದ್ದರು.

ಹೊಸ ಜೀವನ ದಾರಿ ಕೇಂದ್ರದಲ್ಲ ಐದು ದಿನಗಳ ವರೆಗೆ ಹೊಸೂರಿನಲ್ಲಿರುವ ಟಿ.ವಿ.ಎಸ್ ಕಂಪನಿಯ ಶಿಕ್ಷಣ ಸಂಸ್ಥೆಯ ಸುಮಾರು ಮೂವತ್ತು ಮಕ್ಕಳ ಶಿಬಿರ ನಡೆಯಿತು.

ಸತ್ಯಪ್ರಕಾಶ ವಾರಣಾಸಿಯವರ ನೇತೃತ್ವದಲ್ಲಿ ಬೆಂಗಳೂರಿನಿಂದ ೨೫ ವೃತ್ತಿ ನಿರತ ಯುವಕರು ಟ್ರಸ್ಟಿಗೆ ಭೇಟಿ ನೀಡಿದರು.

ಟ್ರಸ್ಟಿನ ಕಾರ್ಯದರ್ಶಿ ಸಂತೋಷ್ ಕೌಲಗಿಯವರು ರೈತತೀರ್ಪು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಟ್ರಸ್ಟಿನ ಅಧ್ಯಕ್ಷರು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿ ನಡೆದ ವಿವಿಧ ಸಾರ್ವಜನಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಿಶುವಿಹಾರದ ಮಾರ್ಗದರ್ಶನಕ್ಕಾಗಿ ಮೈಸೂರಿನ 'ಪ್ರಯತ್ನ ಚಾರಿಟಬಲ್ ಟ್ರಸ್ಟ್'ನ ಮುಖ್ಯಸ್ಥರಾದ ಕಾಂಚನಾರವರು ಭೇಟಿಕೊಟ್ಟರು.

೨೦೧೦ ನವೆಂಬರ್ ಮಾಹೆಯ ದಾನಿಗಳು

ಶ್ರೀ ಯು.ಎನ್.ರವಿಕುಮಾರ್-ಮೈಸೂರು
ಶ್ರೀ ಆರ್.ಆರ್.ಅನವಟ್ಟಿ; ಶ್ರೀ ಸಂಜೀವರಾವ್ ಅಥಣೀಕರ್;
ಶ್ರೀಮತಿ ಎಂ.ಎಸ್.ನೀಲಮ್ಮ-ಬೆಂಗಳೂರು ರಾಷ್ಟ್ರೋತ್ಥಾನ ಬಳಗ-ಮಂಡ್ಯ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೮೫

- ಸುರೇಂದ್ರ ಕೌಲಗಿ



ಟ್ರಸ್ಟಿನ ಪುಸ್ತಕಾಲಯದ ಬಗ್ಗೆ ಇನ್ನೊಂದಿಷ್ಟು ಮಾತುಗಳು. ಸುಮಾರು ಹತ್ತು ವರ್ಷಗಳ ಹಿಂದಿನ ಮಾತಿರಬಹುದು. ಖಾದಿ ಕೆಲಸದ ಸಂಬಂಧವಾಗಿ ಬಾಗಲಕೋಟೆಗೆ ಹೋಗಬೇಕಾಗಿ ಬಂದಿತು. ಬಾಗಲಕೋಟೆ ಎಂದಾಕ್ಷಣ ಅಲ್ಲಿ ಕಳೆದು ಹೋದ ವಿದ್ಯಾರ್ಥಿ ಜೀವನ, ಕೈಗೊಳ್ಳಲಾಗಿದ್ದ ಸಾರ್ವಜನಿಕ ಚಟುವಟಿಕೆ ಇತ್ಯಾದಿಗಳೆಲ್ಲ ನೆನಪಿಗೆ ಬರುತ್ತವೆ. ಇವುಗಳಲ್ಲದೆರ ಜೊತೆಗೆ ಒಂದು ವ್ಯಸನದಾಯಕ ನೆನಪು ಕಾಡುತ್ತದೆ. ಬಾಗಲಕೋಟೆಗೆ ಹೋದಾಗ ಅಲ್ಲಿಯ ಒಂದು ಪ್ರೌಢಶಾಲೆಯ ಅಧ್ಯಾಪಕರಾಗಿದ್ದ ಮತ್ತು ನನ್ನ ಅಣ್ಣನ ಸ್ನೇಹಿತರು ಆಗಿದ್ದ ಅನಂತಬುರ್ಲಿ ಎಂಬುವರ ಮನೆಗೆ ಸೌಹಾರ್ದ ಭೇಟಿಗಾಗಿ ಹೋದೆ. ಬಹಳ ವರ್ಷಗಳ ನಂತರ ಬುರ್ಲಿಯವರ ಭೇಟಿಯಾದ ನಂತರ ಅವರಿಗೆ ತುಂಬ ಸಂತೋಷವಾಯಿತು. ಸಾಹಿತ್ಯ ಸೇವಾ ಚಟುವಟಿಕೆಗಳಲ್ಲಿ ಸಾರ್ವಜನಿಕ ಜೀವನದಲ್ಲಿಯ ನನ್ನ ಆಸಕ್ತಿಯನ್ನು ತಿಳಿದಿದ್ದ ಬುರ್ಲಿಯವರು ಬಹು ಪ್ರೀತಿಯಿಂದ ನೆನಪಿನ ಕಾಣಿಕೆಯಾಗಿ ತಮ್ಮ ಬಳಿ ಇದ್ದ ಧಾರವಾಡದ ಮಿಂಚಿನ ಬಳ್ಳಿ ಪ್ರಕಾಶನದ ಸುಮಾರು ಮೂವತ್ತು ಪುಸ್ತಕಗಳನ್ನು ಕೊಟ್ಟರು. ಸ್ವಾತಂತ್ರ ಪೂರ್ವದಲ್ಲಿ ಮಿಂಚಿನ ಬಳ್ಳಿ ಪ್ರಕಾಶನ ಮನೆ ಮಾತಾಗಿತ್ತು. ಅದೊಂದು ರಾಷ್ಟ್ರೀಯ ಭಾವನೆಯ ಪ್ರಕಟನಾಲಯ. ಅದರ ಪ್ರಕಾಶನ ಸಂಪಾದಕರಾಗಿದ್ದ ಬಿಂದುಮಾಧವ ಬುರ್ಲಿಯವರು ಆಗಿನ ಕಾಲಕ್ಕೆ ಇದ್ದ ಜ್ವಲಂತ ವಿಷಯಗಳ ಬಗ್ಗೆ ಮತ್ತು ರಾಷ್ಟ್ರ ನಾಯಕರ ಬಗ್ಗೆ ಅನೇಕ ಪುಸ್ತಕ ಪ್ರಕಟಿಸಿದ್ದರು. ಪ್ರತಿಯೊಂದು ಪುಸ್ತಕದ ರಕ್ಷಾಕವಚ ರಾಷ್ಟ್ರ ಧ್ವಜದ ಬಣ್ಣಗಳಿಂದ ಕೂಡಿದುದ್ದಾಗಿತ್ತು. ಮಧ್ಯದ ಬಿಳಿ ಬಣ್ಣದ ಮೇಲೆ ಪುಸ್ತಕದ ಹೆಸರನ್ನು ಅಚ್ಚು ಹಾಕಲಾಗಿರುತ್ತಿತ್ತು. ಆಗ ಒಂದು ಪುಸ್ತಕದ ಬೆಲೆ ಎರಡು ರುಪಾಯಿಯಿಂದ ಐದು ರುಪಾಯಿ ಮಾತ್ರ ಸುಮಾರು ೧೫೦ ರಿಂದ ೩೦೦ ಪುಟದ ಪುಸ್ತಕ. ಪ್ರತಿಯೊಂದು ಪುಸ್ತಕವು ಮೊಳೆ ಅಕ್ಷರಗಳಿಂದ ಜೋಡಣೆ ಆಗಿ ಕಾಲುತುಳಿತದ ಮುದ್ರಣಯಂತ್ರದಲ್ಲಿ ಅಚ್ಚುಕಟ್ಟಾಗಿ ಯಾವ ತಪ್ಪುಗಳಿಲ್ಲದೆ ಮುದ್ರಿತವಾಗಿದ್ದಂಥವು. ಬಿಂದು ಮಾಧವರು ಪುಸ್ತಕಗಳನ್ನು ಪ್ರಕಟಿಸಿ ಅವುಗಳನ್ನು ಮಾರಲು ಮತ್ತು ತಮ್ಮ ಮಿಂಚಿನ ಬಳ್ಳಿ ಪ್ರಕಟನಾಲಯಕ್ಕೆ ಚಂದಾದಾರನ್ನಾಗಿ ಮಾಡಲು ತಲೆಯ ಮೇಲೆ ಪುಸ್ತಕ ಇಟ್ಟುಕೊಂಡು ಸಾಹಿತ್ಯಾಸಕ್ತರ ಮನೆ ಮನೆಗೆ ಹೋಗಿ ರಾಷ್ಟ್ರಾಭಿಮಾನವನ್ನು ಹುಟ್ಟಿಸುತ್ತಿದಂಥ ವ್ಯಕ್ತಿ. ಅಂಥ ಸಾಧನ ಮಹನೀಯನ ಸಂಪಾದಕತ್ವದಲ್ಲಿ ಪ್ರಕಟಗೊಂಡ ವಿವಿಧ ವಿಷಯಗಳ ೩೦

ಪುಸ್ತಕಗಳನ್ನು ಬುರ್ಲಿಯವರು ನನಗೆ ಕೊಟ್ಟಾಗ ಆದ ಆನಂದಕ್ಕೆ ಪಾರವೇ ಇರಲಿಲ್ಲ. ಬಹುದೊಡ್ಡ ನಿಧಿಯೊಂದು ಸಿಕ್ಕಿದಂತಾಗಿತ್ತು. ಲಘುಬಗೆಯಿಂದ ಪ್ರತಿಯೊಂದು ಪುಸ್ತಕದ ಶೀರ್ಷಿಕೆ ಮೇಲೆ ಕಣ್ಣಾಡಿಸಿದೆ. ಅವರು ಕೊಟ್ಟ ದಾರ ಮತ್ತು ಕಾಗದಲ್ಲಿ ಅವುಗಳನ್ನು ಕಟ್ಟಿಕೊಂಡ ನಂತರ ನಾನು ತಂಗಿದ್ದ ಸ್ಥಳಕ್ಕೆ ಹೋದೆ. ನಾನು ತಂಗಿದ್ದ ಸ್ಥಲ ಮಹಡಿಯ ಮೇಲಿನ ಒಂದು ಕೊಠಡಿಯಾಗಿತ್ತು. ಅಲ್ಲಿಯ ಇತರ ಸ್ವಂತ ವಸ್ತುಗಳ ಜೊತೆಗೆ ಈ ಪುಸ್ತಕದ ಗಂಟನ್ನು ಇಟ್ಟೆ. ಮಾರನೇ ದಿನ ಬಾಗಲಕೋಟೆಯಿಂದ ಹೊರಡುವ ಕಾರ್ಯಕ್ರಮವಿತ್ತು. ಕೆಳಗೆ ಬಂದು ಎಲ್ಲರೊಂದಿಗೆ ಊಟ ಮಾಡಿ ಆತುರಾತುರವಾಗಿ ವಾಹನವೇರಿದೆ. ಆ ಆತುರದಲ್ಲಿ ಮಿಂಚಿನ ಬಳ್ಳಿಯ ಪುಸ್ತಕಗಳ ಗಂಟನ್ನು ಅಲ್ಲೆ ಮಹಡಿಯ ಮೇಲೆ ಮರೆತು ಹೊರಟು ಬಿಟ್ಟೆ. ಮುಂದಿನ ಊರಿಗೆ ತಲುಪುವ ವರೆಗೂ ಪುಸ್ತಕದ ಗಂಟು ನೆನಪಿಗೆ ಬರಲೇ ಇಲ್ಲ. ಬಹುದೂರ ಬಂದಾದ ಮೇಲೆ ಜ್ಞಾಪಕ ಬಂತು. ಅಷ್ಟು ಹೊತ್ತಿಗೆ ಕಾಲ ಮಿಂಚಿ ಹೋಗಿತ್ತು. ಹಿಂದಕ್ಕೆ ಹೋಗಿ ಆ ಪುಸ್ತಕಗಳನ್ನು ತರುವ ಸ್ಥಿತಿಯಲ್ಲಿ ಇರಲಿಲ್ಲ. ಅಲ್ಲಿಗೆ ಆ ಪುಸ್ತಕಗಳನ್ನು ಶಾಶ್ವತವಾಗಿ ಕಳೆದುಕೊಂಡಂತಾಯಿತು. ಆಗ ನನಗಾದ ದುಃಖ ಹೇಳತೀರದು. ಪುಸ್ತಕಗಳನ್ನ ಪಡೆದಾಗ ನಿಧಿಯೊಂದು ಸಿಕ್ಕ ಅನುಭವವಾಗಿದ್ದಂತೆ, ಪುಸ್ತಕ ಕಳೆದುಕೊಂಡಾಗ ಒಂದು ದೊಡ್ಡ ನಿಧಿಯನ್ನು ಕಳೆದುಕೊಂಡಂತಾಯಿತು. ಈ ಘಟನೆ ಕಳೆದು ಹೋಗಿ ಹತ್ತಾರು ವರ್ಷಗಳಾದರೂ ಪುಸ್ತಕ ಕಳೆದುಕೊಂಡ ವೇದನೆ ಇನ್ನೂ ಮಾಸಿಲ್ಲ. ಇಂದು ಯಾರದರೂ "ನಿಮ್ಮ ಜೀವನದಲ್ಲಿ ಮರೆಯಲಾಗದ ಘಟನೆ ಯಾವುದು" ಎಂದು ಕೇಳಿದರೆ, ಮಿಂಚಿನ ಬಳ್ಳಿಯ ಪುಸ್ತಕಗಳನ್ನು ಕಳೆದುಕೊಂಡ ಈ ಘಟನೆಯನ್ನೇ ಹೇಳ ಬಯಸುತ್ತೇನೆ. ಇಂದು ಗ್ರಂಥಾಲಯದಲ್ಲಿ ಬೇರೆ ಬೇರೆ ವಿಷಯಗಳಿಗೆ ಸಬಂಧಿಸಿದ ಅನೇಕ ಪುಸ್ತಕಗಳೇನೋ ಇವೆ. ಆದರೆ ಬುರ್ಲಿ ಬಿಂದುಮಾಧವರ ಮಿಂಚಿನಬಳ್ಳಿಯ ಪುಸ್ತಕಗಳಿಲ್ಲದ ಪುಸ್ತಕಾಲಯ ಶೂನ್ಯವತ್ತಾಗಿರುವಂತೆ ಅನಿಸುತ್ತದೆ. ಪುಸ್ತಕಗಳಲ್ಲಿ ಅದೆಂಥ ದೊಡ್ಡ ಆಕರ್ಷಣೆ ಇದೆ! ದೇವರು ಪ್ರಕೃತಿಯೆಲ್ಲವನ್ನೂ ಮಂಥಿಸಿ ಬೆಣ್ಣೆಯನ್ನು ಪುಸ್ತಕಗಳಲ್ಲಿ ಇಟ್ಟಿರುವನೇನೋ?

(ಮುಂದುವರಿಯುವುದು....)

* * *

ಪ್ರತಿಯೊಂದು ಮಹಾನ್ ಗ್ರಂಥ ಒಂದು ಕ್ರಿಯೆ ಮತ್ತು ಪ್ರತಿಯೊಂದು ಮಹಾನ್ ಕ್ರಿಯೆ ಒಂದು ಗ್ರಂಥ.

– ಮಾರ್ಟಿನ್ ಲೂಥರ್ ಕಿಂಗ್

* * *

ಕಪಾಟಿನೊಳಗೆ ಇಟ್ಟ ಪುಸ್ತಕಗಳೆಂದರೆ ಕನ್ನಡಿಯೊಳಗಿನ ಗಂಟಿನಂತೆ.

– ಓಶೋ ರಜನೀಶ್

ಸರ್ವೋದಯ ಆಂದೋಲನದ ಮುನ್ನಡೆ

ಗಾಂಧೀಜಿಯವರು ನಡೆಸಿದ ಸ್ವಾತಂತ್ರ ಆಂದೋಲನ ರಾಜಕೀಯ ಉದ್ದೇಶಗಳಿಂದ ಕೂಡಿದ್ದುದಾಗಿತ್ತು. ದೇಶದ ನಿಜವಾದ ಅಭಿವೃದ್ಧಿ ಕೇವಲ ರಾಜಕೀಯ ಆಂದೋಲನದಿಂದ ಆಗಲಾರದು. ಆದ್ದರಿಂದ ಸಮಾಜ ಪರಿವರ್ತನೆಯ ಆಂದೋಲನವೂ ಅಗತ್ಯ ಎಂದು ಅವರು ಭಾವಿಸಿದ್ದರು. ಅದನ್ನು ಸರ್ವೋದಯ ಸಮಾಜ ಎಂದು ಕರೆದರು. ಗಾಂಧೀಜಿಯವರ ಈ ಆಶಯವನ್ನು ಈಡೇರಿಸಲು ಈಗ ಸಕಾಲವಾಗಿದೆ. ಭಾರತೀಯರು ತಮ್ಮ ತಮ್ಮ ರಾಜ್ಯಗಳ ರಾಜಕಾರಣದಿಂದ ಮತ್ತು ರಾಷ್ಟ್ರದ ರಾಜಕಾರಣದಿಂದ ಬೇಸತ್ತಿದ್ದಾರೆ. ಜನತಾ ಪ್ರತಿನಿಧಿಗಳು ಮತದಾರರ ವಿಶ್ವಾಸ ಕಳೆದುಕೊಂಡಿದ್ದಾರೆ. ಅಲ್ಲದೆ ಅಪಮೌಲಿತಗೊಂಡಿದ್ದಾರೆ. ಶುದ್ಧರಾಜಕಾರಣ ಬಯಸುತ್ತಿದ್ದಾರೆ. ಜನತೆಯಲ್ಲಿ ರಾಜಕಾರಣದ ಬಗ್ಗೆ ಉಂಟಾಗಿರುವ ಅಸಂತೋಷಕ್ಕೆ ಸಾಮಾಜಿಕ ಪರಿವರ್ತನೆಗೆ ಸಂಘಟನಾ ಶಕ್ತಿ ತಂದುಕೊಡುವ ಉದ್ದೇಶದಿಂದ ಕರ್ನಾಟಕ ಸರ್ವೋದಯ ಮಂಡಲವು ನವೆಂಬರ್ ತಿಂಗಳಲ್ಲಿ ಮಂಡ್ಯ ನಗರದಲ್ಲಿ 'ಅಶುದ್ಧ ರಾಜಕಾರಣದ ಶುದ್ಧಿಗಾಗಿ ಜನತಾ ಆಂದೋಲನ'ವನ್ನು ಪ್ರಾರಂಭಿಸಿತು. ನಗರದ ಮುಖ್ಯ ಬೀದಿಗಳಲ್ಲಿ ವೃತ್ತಗಳಲ್ಲಿ ಸಾರ್ವಜನಿಕ ಸಭೆಗಳನ್ನು ನಡೆಸಲಾಯಿತು. ನಾಗರಿಕರಿಂದ ಒಳ್ಳೆಯ ಪ್ರತಿಕ್ರಿಯೆ ಬಂದಿತು. ಮಾಧ್ಯಮಗಳಲ್ಲಿ ಸುದ್ದಿಯಾಯಿತು. ಆಂದೋಲನದ ಮುಂದಿನ ಹೆಜ್ಜೆಯಾಗಿ 'ಅಶುದ್ಧ ರಾಜಕಾರಣ'ದ ಭೂತದಹನ ಮಾಡಲಾಯಿತು. ಶುದ್ಧ ರಾಜಕಾರಣಕ್ಕಾಗಿ ದೃಢ ನಡಿಗೆ ಎಂಬ ಕಾರ್ಯಕ್ರಮ ಮತ್ತು ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಗಿತ್ತು. ನಗರದ ಅನೇಕ ಪ್ರಗತಿ ಪರ ಸಂಘಟನೆಗಳು ಈ ಆಂದೋಲನದಲ್ಲಿ ಭಾಗವಹಿಸಿದವು. ಈ ಆಂದೋಲನದ ಮುಖ್ಯ ಬೇಡಿಕೆ ಇಂದಿನ ವಿಧಾನಸಭೆಯನ್ನು ವಿಸರ್ಜಿತಗೊಳಿಸಬೇಕು ಮತ್ತು ಸಾರ್ವಜನಿಕ ಚುನಾವಣೆ ನಡೆಸಬೇಕು. ಹೊಸ ಸರ್ಕಾರದ ರಚನೆ ಆಗಬೇಕಿದೆ. ರಾಜ್ಯದ ವಿವಿಧೆಡೆಯಲ್ಲಿ ಈ ಆಂದೋಲನ ಬೆಳೆಯುವ ಲಕ್ಷಣಗಳಿವೆ. ಸಾರ್ವಜನಿಕ ಸಭೆಯಲ್ಲಿ ದೋಷಾರೋಪಣೆಗಳ ಮಧ್ಯೆ ಜಾತಿ ರಾಜಕೀಯ ಮಾಡಿ ಮುಖ್ಯಮಂತ್ರಿ ಸ್ಥಾನ ಉಳಿಸಿಕೊಂಡಿರುವ ಈಗಿನ ಮುಖ್ಯಮಂತ್ರಿಯವರ ಕ್ರಮದ ಬಗ್ಗೆ ಸಭೆ ತನ್ನ ಅಸಮಾಧಾನ ವ್ಯಕ್ತಪಡಿಸಿತು. ಲೋಕ ಕಲ್ಯಾಣಕ್ಕಾಗಿ ಜಪತಪ ಮಾಡುತ್ತಾ ಸನ್ಯಾಸಾಶ್ರಮದ ಮಠಾಧೀಶರು ರಾಜಕೀಯ ಮಾಡಲು ಇಳಿದಿರುವ ಬಗ್ಗೆ ಸಭೆ ಅಸಂತೋಷ ವ್ಯಕ್ತಪಡಿಸಿತು. ಈಗಿನ ಎಲ್ಲಾ ೨೨೫ ಶಾಸಕರು ಸ್ವ ಪ್ರೇರಣೆಯಿಂದ ರಾಜೀನಾಮೆ ಕೊಡಬೇಕು. ಹೊಸ ಚುನಾವಣೆ ಮತ್ತು ಹೊಸ ಮಂತ್ರಿ ಮಂಡಲ ರಚನೆಯಾಗಬೇಕೆಂದು ಸಭೆ ಅಭಿಪ್ರಾಯಪಟ್ಟಿತು.

ಖಾದಿ ವಿಚಾರ

ಐವತ್ತು ವರ್ಷಗಳಿಂದ ಖಾದಿ ಕ್ಷೇತ್ರದಲ್ಲಿ ಕೆಲಸಮಾಡಿಕೊಂಡು ಬರುತ್ತಿರುವ ಹಿರಿಯ ಸಂಸ್ಥೆ 'ಕರ್ನಾಟಕ ಸರ್ವೋದಯ ಸಂಘ'. ಇತ್ತೀಚಿಗೆ ನಡೆದ ಅದರ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಂಡಿಸಲಾದ ಆರುತಿಂಗಳ ಪ್ರಗತಿಯ ಪಕ್ಷಿನೋಟ ಈ ರೀತಿ ಇದೆ. ಖಾದಿ ಲಡಿಗಳಿ ಉತ್ಪಾದನೆ ೩೨,೩೮೪, ಇದರ ಬೆಲೆ ೧,೬೬,೪೫೪; ಖಾದಿ ಬಟ್ಟೆ ಉತ್ಪಾದನೆ ೫೪೩೯ ಮೀಟರ್ ಬೆಲೆ ೨,೯೩,೯೯೦; ಚಿಲ್ಲರೆ ಮಾರಾಟ ೩೦೪೬೩೯; ಸಗಟು ವ್ಯಾಪಾರ ೭೩,೮೦೩. ಸಂಘದ ಖಾದಿ ಉದ್ಯಮದಲ್ಲಿ ಈ ಅವಧಿಯಲ್ಲಿ ೩೩೦ ಕುಶಲಕರ್ಮಿಗಳು ಉದ್ಯೋಗ ಪಡೆದರು.

ಜನಪದ ಸೇವಾ ಟ್ರಸ್ಟ್‌ನಲ್ಲಿ ಖಾದಿ ಉತ್ಪಾದನೆ ಪ್ರಾರಂಭವಾಗಿದೆ. ಖಾದಿ ನೇಯ್ಗೆಯಲ್ಲಿ ಹೆಣ್ಣು ಮಕ್ಕಳಿಗೆ ತರಬೇತಿ ಕೊಡಲಾಗುತ್ತಿದೆ. ನವೆಂಬರ್ ತಿಂಗಳಲ್ಲಿ ೭೦ ಮೀಟರ್ ಖಾದಿ ಬಟ್ಟೆಯನ್ನು ತಯಾರಿಸಲಾಯಿತು. ಕ್ರಮೇಣ ಉತ್ಪಾದನೆ ಹೆಚ್ಚಾಗುವ ಸಾಧ್ಯತೆಯಿದೆ.

ನವೆಂಬರ್ ೯ ರಂದು ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಳಿಯ ಖಾದಿ ಸಂಸ್ಥೆಗಳು ೨೦೧೦-೧೧ನೇ ಸಾಲಿನ ಬಜೆಟ್ ಮೀಟಿಂಗ್ ಕರೆದಿತ್ತು. ಇದರಲ್ಲಿ ಸುಮಾರು ೭೦ ಸಂಸ್ಥೆಗಳು ಭಾಗವಹಿಸಿದ್ದವು. ಈ ಸಭೆಯಲ್ಲಿ ಮಂಡಲಿ ಅಧ್ಯಕ್ಷರಾದ ಶ್ರೀ ಹರಿವೇಯವರು ಮತ್ತು ಮುಖ್ಯ ಆಡಳಿತಾಧಿಕಾರಿ ಶ್ರೀ ನಾಗರಾಜು ಭಾಗವಹಿಸಿದ್ದರು. ಶಿವಮೊಗ್ಗ ಮತ್ತು ಇತರ ಜಿಲ್ಲೆಗಳಲ್ಲಿ ಪ್ರಾರಂಭವಾಗಲಿರುವ ವಿಶೇಷ ಜವಳಿ ವಲಯಗಳಲ್ಲಿ ಮಿಲ್ ದಾರ ಆಧಾರಿತ ಬಟ್ಟೆಯ ಉತ್ಪಾದನೆಗೆ ಮಾತ್ರ ಅವಕಾಶವಿರದೆ ಖಾದಿ ಬಟ್ಟೆಯ ಉತ್ಪಾದನೆಗೂ ಅವಕಾಶವಿರಬೇಕೆಂದು ಜನಪದ ಸೇವಾ ಟ್ರಸ್ಟ್‌ನ ಅಧ್ಯಕ್ಷರು ಸೂಚಿಸಿದರು.

ಗಾಂಧೀಜಿಯವರು ಮುಂಬೈಯಲ್ಲಿ ಮಹಿಳೆಯರ ಸಭೆಯಲ್ಲಿ ಮಾಡಿದ ಭಾಷಣ ಮನನೀಯವಾಗಿದೆ:- "ಇಲ್ಲಿ ಯಾವ ಪ್ರಕಾರದ ನೂಲನ್ನು ತೆಗೆಯಲಾಗಿದೆಯೋ ಅದು ಅಪೇಕ್ಷಿತ ಗುಣಮಟ್ಟದ್ದಾಗಲಿ ತೆಳುವಾಲಿ ಇಲ್ಲ. ಆದರೆ ಇದರ ದೋಷ ನಿಮ್ಮದೇ ಆಗಿದೆ. ಏಕೆಂದರೆ ಈಗ್ಗೆ ನಾಲ್ಕು ವರ್ಷಗಳ ಹಿಂದೆ ಚೌಪಾಟಿಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಸೇರಿ ಯಾವೆಲ್ಲಾ ದೊಡ್ಡ ದೊಡ್ಡ ಆಸೆಗಳನ್ನು ಕಟ್ಟಲಾಗಿತ್ತೋ ಅವು ಪೂರ್ಣಗೊಂಡಿಲ್ಲ. ನಿಮ್ಮ ವ್ಯಕ್ತಿಗತ ಅಗತ್ಯವನ್ನು ಪೂರೈಸಿಕೊಳ್ಳಬೇಕಾಗಿದ್ದರೆ ನೀವು ನಲವತ್ತು ಅಥವಾ ಅದಕ್ಕೂ ಹೆಚ್ಚಿನ ನಂಬರ್‌ನ ದಾರ ತೆಗೆಯಬೇಕು. ನಾನಂತೂ ಈ ದೇಶದಲ್ಲಿ ೮೦೦ ನಂಬರಿನ ನೂಲನ್ನು ತೆಗೆಸಿದ್ದೇನೆ. ಅದು ಢಾಕಾದ ಮಸ್ಲಿನ್‌ನಷ್ಟು ತೆಳು ಬಟ್ಟೆಯನ್ನು ತಯಾರಿಸಲು ಸಾಧ್ಯವಾಗುವಂತಿತ್ತು. ನಾನು ಖಾದಿ ಮತ್ತು ನೂಲುಗಾರಿಕೆ ಬಗ್ಗೆ ಯಾವೆಲ್ಲಾ ಆಸೆಗಳನ್ನು ಇಟ್ಟುಕೊಂಡಿದ್ದೆನೋ ಅದನ್ನು ಮುಂಬಯಿಯ ಮಹಿಳೆಯರಾದ ನೀವು ಸಕಾರಗೊಳಿಸುವುದರಲ್ಲಿ ನೆರವಾಗಬೇಕು. ನಾನು ಸ್ವಲ್ಪ ದಿನಗಳ ಹಿಂದೆ ದಕ್ಷಿಣ ಭಾರತದ ಪ್ರವಾಸ ಮಡಿದ್ದೆ. ಕನ್ಯಾಕುಮಾರಿವರೆಗೂ ಹೋಗಿದ್ದೆ. ತಿರುವಾಂಕೂರಿನ ಮಹಾರಾಣಿಯಿಂದ ಹಿಡಿದು ಅತ್ಯಂತ ಸಾಮಾನ್ಯ ಜನರೊಂದಿಗೆ

ಭೇಟಿ ಮಾಡಿದೆ. ಮಹಾರಾಣಿ ಕೇವಲ ಖಾದಿಯನ್ನೇ ಧರಿಸುವುದಾಗಿಯೂ ಮತ್ತು ನೂಲನ್ನು ತೆಗೆಯುವುದಾಗಿಯೂ ನನಗೆ ಮಾತು ಕೊಟ್ಟಿದ್ದಾರೆಂದು ತಿಳಿಸಲು ನನಗೆ ಸಂತೋಷವಾಗುತ್ತದೆ. ತಿರುವಾಂಕೂರಿನಲ್ಲಿ ಈಗ ಕೆಲವು ವರ್ಷಗಳ ಹಿಂದಿನವರೆಗೆ ಪ್ರತಿಯೊಂದು ಕುಟುಂಬ ತನಗೆ ಅಗತ್ಯವಾದ ಎಲ್ಲ ಬಟ್ಟೆಯನ್ನು ದಾರ ತೆಗೆದು ತಯಾರಿಸಿಕೊಳ್ಳುತ್ತಿತ್ತು ಎಂಬುದನ್ನು ನಾನು ಕಣ್ಣಾರೆ ನೋಡಿದ್ದೇನೆ. ಕೊಚ್ಚೀನ್‌ನಲ್ಲಿ ರಾಜ ಪರಿವಾರದ ಜನರು ಖಾದಿ ಧರಿಸುತ್ತಿದ್ದರಲ್ಲದೆ, ದಾರ ತೆಗೆಯುತ್ತಿದ್ದರು. ಆದರೆ ಈಗ ಈ ಸಭೆಯಲ್ಲಿರುವ ಎಷ್ಟು ಜನ ಸಹೋದರಿಯರು ಖಾದಿಯನ್ನು ಧರಿಸಿದ್ದೀರಿ? ಮುಂಬಯಿಯ ಜನ ಕಣ್ಣು ಮುಚ್ಚಿ ಹಣ ಖರ್ಚುಮಾಡುತ್ತಾರೆ ವಿನಃ, ಚರಕಾದ ಮಹತ್ವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರರು. ಒರಿಸ್ಸಾಕ್ಕೆ ಹೋಗಿದ್ದೆ. ಹಸಿವಿನಿಂದ ಸಾಯುತ್ತಿದ್ದ ಜನರು ಕೂಡ ತಮ್ಮ ಪಾಲನ್ನು ಕೊಟ್ಟು ನೆರವಾಗಿದ್ದರೂ, ಮುಂಬಯಿಯ ಮಹಿಳೆಯರಿಗಿಂತ ಹಸಿವಿನಿಂದ ಸಾಯುತ್ತಿರುವ ಜನರಿಗೆ ಚರಕಾ ಹೆಚ್ಚು ಮಹತ್ವಪೂರ್ಣದ್ದಾಗಿದೆ. ಭೋಪಾಲ್‌ನ ರಾಣಿ ತನ್ನ ಉಪಯೋಗಕ್ಕಾಗಿ ಬಹಳಷ್ಟು ಖಾದಿಯನ್ನು ತರಿಸಿಕೊಂಡಿದ್ದಾಳೆಂದು ಶ್ರೀಮತಿ ನಾಯ್ಡು ನನಗೆ ತಿಳಿಸಿದ್ದಾರೆ. ಶ್ರೀಮಂತ ಸ್ತ್ರೀ ಪುರುಷರು ತಮ್ಮ ಸ್ವಲ್ಪ ಸಮಯವನ್ನು ನೂಲು ತೆಗೆಯುವುದರಲ್ಲಿ ಉಪಯೋಗಿಸಬೇಕೆಂಬ ನ್ನ ವಿನಂತಿಯ ಉದ್ದೇಶವೇನೆಂದರೆ ನೂಲು ತೆಗೆಯುವುದರ ಮೂಲಕ ಸ್ವತಃ ತಮ್ಮನ್ನು ಬಡಜನರ ಮಟ್ಟಕ್ಕೆ ತೆಗೆದುಕೊಂಡು ಹೋಗಿ ಆ ಜನರ ಅಪಾರವಾದ ಕಷ್ಟಗಳನ್ನು ಮತ್ತು ಹಣೆಬರಹವನ್ನು ಸ್ವಲ್ಪವಾದರೂ ತಿಳಿದುಕೊಳ್ಳಲು ಸಾಧ್ಯವಾಗಲೆಂಬುದೇ ಆಗಿದೆ.

ಮೈಸೂರು ನಗರದಲ್ಲಿ ಖಾದಿ...

ಓರ್ವ ಪತ್ರ ಲೇಖಕ ಮೈಸೂರು ನಗರದಲ್ಲಿ ಕೆಲ ಖಾದಿ ಪ್ರೇಮಿಗಳು ೧೯೨೫ ಜುಲೈನಿಂದ ಒಂದು ಸಹಕಾರಿ ಸಮಿತಿ ಆರಂಭಿಸಿದ್ದಾರೆ ಎಂದು ಬರೆದಿದ್ದಾರೆ. ಏಕೆಂದರೆ ಇಲ್ಲಿ ಸಾಕಷ್ಟು ಖಾದಿ ಉತ್ಪಾದನೆ ಆಗುತ್ತಿಲ್ಲ ಆದ್ದರಿಂದ ವ್ಯವಸ್ಥಾಪಕರು ಈಗ ಆಂಧ್ರ ಮತ್ತು ತಮಿಳುನಾಡಿನಿಂದ ಖಾದಿ ತರಿಸುತ್ತಾರೆ. ಸಮಿತಿಯು ತನ್ನ ಬಂಡವಾಳವನ್ನು ಹೆಚ್ಚಿಸಬಯಸುತ್ತದೆ. ಈಗ ಅದರ ಹತ್ತು ರೂಪಾಯಿ ಸದಸ್ಯತ್ವದ ೩೬೫ ಸದಸ್ಯರು ತಮ್ಮ ಪಾಲನ್ನು ಕೊಟ್ಟಿದ್ದಾರೆ. ಕೆಲವರು ಪೂರ್ತ ಹಣವನ್ನು ಕೊಟ್ಟಿದ್ದಾರೆ. ಸಮಿತಿಯಲ್ಲಿ ೧೦೩ ಜನ ಸದಸ್ಯರಿದ್ದಾರೆ. ಸಮಿತಿಯ ಖಾದಿ ಭಂಡಾರ ಇಲ್ಲಿ ತೆಗೆಯಲಾದ ನೂಲಿಗೆ ೧೨ ಆಣೆಗೆ ಒಂದು ಕೆ.ಜಿ. ದಾರದಂತೆ ಖರೀದಿಸುತ್ತದೆ ಮತ್ತು ಅದನ್ನು ಇಲ್ಲಿಯೇ ನೇಯಿಸುತ್ತದೆ. ಭಂಡಾರದ ಸಮಿತಿಯ ಮೇಲ್ವಿಚಾರಣೆಗಾಗಿ ಕೇವಲ ತಿಂಗಳಿಗೆ ೩೨ ರೂಪಾಯಿ ಖರ್ಚು ಮಾಡುತ್ತದೆ. ೧೯೨೫ ಜುಲೈ ಮತ್ತು ಹಿಂದಿನ ವರ್ಷದ ಮಾರ್ಚ್ ಮಧ್ಯೆ ೨೦೩೬ ರೂಪಾಯಿಯ ಖಾದಿ ಖರೀದಿಮಾಡಿದೆ ಮತ್ತು ೮೮೮೮ ರೂಪಾಯಿಯ ಖಾದಿ ಮಾರಿದೆ. ಮೈಸೂರಿನಂಥ ನಗರದಲ್ಲಿ ಇದು ಪ್ರಾರಂಭವಾದದ್ದು ಸಾಮಾನ್ಯ ವಿಚಾರವಲ್ಲ. ಒಂದು ವೇಳೆ ಬೇರೆ ನಗರಗಳು ಇದರ ಅನುಕರಣೆ ಮಾಡಿದಲ್ಲಿ ಮತ್ತು ವ್ಯವಸ್ಥಾಪಕರು ಯೋಗ್ಯ ಮತ್ತು ಪ್ರಮಾಣಿಕರಾಗಿದ್ದಲ್ಲಿ ಮೈಸೂರಿನ ಖದ್ದರ್ ಭವಿಷ್ಯ ಬಹಳ ಉಜ್ವಲವಿದೆ ಎಂಬುದರಲ್ಲಿ ಸಂದೇಹವಿಲ್ಲ.

– ಮಹಾತ್ಮಾ ಗಾಂಧೀ

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಎನ್.ಆರ್.ಸುಬ್ರಮಣ್ಯ * ಶ್ರೀ ಟಿ.ಎಸ್.ಚನ್ನೇಶ್

ಶ್ರೀ ಎಸ್.ಹೆಚ್.ಜೋಶಿ * ಶ್ರೀ ಜಿ.ಎಲ್.ಕುಮಾರ್– ಬೆಂಗಳೂರು

ಡಾ. ಹೆಚ್.ಎಸ್.ಮುದ್ದೇಗೌಡ – ಮಂಡ್ಯ

ಶ್ರೀ ಎನ್.ರಮೇಶ್‌ರಾಜ್ – ಚನ್ನಪ್ಪನದೊಡ್ಡಿ

ಶ್ರೀ ಎಸ್.ಆರ್.ಜಗದೀಶ್ – ವಿರಾಜಪೇಟೆ

ಶ್ರೀ ಬಂಜಗೆರೆ ಜಯಪ್ರಕಾಶ್ – ಹಾರೋಹಳ್ಳಿ

ಶ್ರೀ ಆರೂರು ಮಂಜುನಾಥರಾವ್ – ಆರೂರು

ವಿದ್ಯಾವರ್ಧಕ ಪ್ರಥಮದರ್ಜೆ ಕಾಲೇಜು * ಶ್ರೀ ಈ ಧನಂಜಯ – ಮೈಸೂರು

ಶ್ರೀಮತಿ ಮೀರಾ ಕೊಪ್ಪೀಕರ – ಮುಧೋಳ

ಬಾಪೂಜಿ ಪ್ರೌಢಶಾಲೆ ಮತ್ತು ಬಾಪೂಜಿ ಪ.ಪೂ ಕಾಲೇಜು – ತುಮಕೂರು

ಶ್ರೀ ಡಿ.ಎಸ್.ನಾಗಭೂಷಣ್ – ಶಿವಮೊಗ್ಗ

ಶ್ರೀ ಆರ್.ನಾರಾಯಣಮೂರ್ತಿ – ಅರಸೀಕರೆ

ಮುಖ್ಯ ಗ್ರಂಥಪಾಲಕರು, ಕನ್ನಡ ವಿಶ್ವವಿದ್ಯಾನಿಲಯ – ಹಂಪಿ

**ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ
ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,**

ಶ್ರೀ ಕೆ.ಚಂದ್ರಶೇಖರ್ * ಶ್ರೀ ಎನ್.ಕಲ್ಲಪ್ಪ – ಬೆಂಗಳೂರು

ಶ್ರೀ ಬಿ.ಕರುಣಾಕರ * ಶ್ರೀ ಎಂ.ಶಿವಪ್ಪ ಆಳ್ವಾ – ಮೈಸೂರು

ಶ್ರೀ ಟಿ.ರಂಗಶೆಟ್ಟಿ – ಹೊಳೆನರಸೀಪುರ

ಶ್ರೀ ಪಂಚಲಿಂಗೇಗೌಡರು – ಪಾಂಡವಪುರ

ಇವರಿಗೆ ಕೃತಜ್ಞತೆಗಳು.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ
(–ಸಂಪಾದಕರು)

ತೆ-ಂ-ಅಂಚೆ



KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ / ಶ್ರೀ

ಎಂ. ಎಸ್. [illegible]
#155, DHITEJ HAVEN
10th Cross, 12th Main
SARASWATHIPURAM
MYSORE 570009
ph: 0821/2301017

jANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Melkote.